ವಿದ್ಯಾರ್ಥಿಗಳು

ಮೋ.ಕ. ಗಾಂಧಿ

ಕನ್ನಡಾನುವಾದ : ರಾ.ಯ. ಧಾರವಾಡಕರ



ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ಸ್ವಾತಂತ್ರ್ಯೋತ್ಸವದ
ಅಮೃತ ಮಹೋತ್ಸವ

ವಿದ್ಯಾರ್ಥಿಗಳು


ಮೋ. ಕ. ಗಾಂಧಿ

ಕನ್ನಡಾನುವಾದ
ರಾ.ಯ. ಧಾರವಾಡಕರ

ಪ್ರಕಾಶಕರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–2226196
ಇಮೇಲ್ : gandhibhavanabengaluru@gmail.com

ವಿದ್ಯಾರ್ಥಿಗಳು
ಲೇಖಕರು : ಮೋ. ಕ. ಗಾಂಧಿ
ಕನ್ನಡಾನುವಾದ : ರಾ.ಯ. ಧಾರವಾಡಕರ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001, ದೂರವಾಣಿ : 080–22261967

ಪುಟಗಳು	:	XIV + 74
ಬೆಲೆ	:	ರು. 85/–
ಪ್ರತಿಗಳು	:	500
ಮೊದಲ ಮುದ್ರಣ	:	1960
ದ್ವಿತೀಯ ಮುದ್ರಣ	:	2008
ಪರಿಷ್ಕೃತ ತೃತೀಯ ಮುದ್ರಣ	:	2022
©	:	ಕರ್ನಾಟಕ ಗಾಂಧಿ ಸ್ಮಾರಕ ನಿಧಿ
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಪ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ISBN No	:	978-81-942226-7-5
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049




ಅರ್ಪಣೆ

ಭಾರತದ ನವೋದಯದ ಪಿತಾಮಹ, ಸಮಾಜ ಸುಧಾರಕ

ಶ್ರೀ ರಾಜಾರಾಂ ಮೋಹನ್ ರಾಯ್

ಅವರಿಗೆ ಗೌರವಪೂರ್ವಕವಾಗಿ



“ಜೀವನವೆಂಬುದೊಂದು ಆಕಾಂಕ್ಷೆ, ಶುದ್ಧಿ, ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯ ದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ.”

– ಮಹಾತ್ಮ ಗಾಂಧಿ

ನಿಮ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ನಂತರ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ - 75ನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮಾ ಗಾಂಧಿ ಅವರ "ಶಿಕ್ಷಣ" ಕುರಿತಾಗಿ ಪತ್ರಿಕೆಗಳಲ್ಲಿ ಬರೆದ ಲೇಖನಗಳು ಮತ್ತು ಕಾಲೇಜುಗಳಲ್ಲಿ ಮಾಡಿದ ಭಾಷಣಗಳನ್ನು ಒಗ್ಗೂಡಿಸಿ "ವಿದ್ಯಾರ್ಥಿಗಳು" ಎಂಬ ಶೀರ್ಷಿಕೆಯ ಕೃತಿಯನ್ನು ಪ್ರಕಟಿಸಲು ಅತ್ಯಂತ ಹರ್ಷವಾಗುತ್ತದೆ.

ಮಹಾತ್ಮ ಗಾಂಧಿ ಅವರೇ ಯುವಜನತೆಗಾಗಿ ಹಲವಾರು ಸಂದರ್ಭಗಳಲ್ಲಿ ಮಾಡಿದ ಭಾಷಣ, ಅವರು ಪತ್ರಿಕೆಗಳಲ್ಲಿ ಬರೆದ ಲೇಖನಗಳು ಮತ್ತು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಕುರಿತು ಬರೆದ ಬರಹಗಳಿಂದ ಸಂಗ್ರಹಿಸಿ, ಕನ್ನಡಕ್ಕೆ ಅನುವಾದಿಸಿರುವ ರಾ.ಯ. ಧಾರವಾಡಕರ ಅವರಿಗೆ ಅಭಿನಂದಿಸುತ್ತೇನೆ. ಇಂಥಹ ಕೃತಿಯೊಂದನ್ನು ನಮ್ಮ ಯುವಜನತೆಯ ಕೈಗೆ ತಲುಪಿಸಬೇಕು, ಅವರು ಗಾಂಧೀಜಿ ಅವರ ಮಹಾತ್ವಾಕಾಂಕ್ಷೆಯನ್ನು ತಿಳಿದು, ಅವರ ಜೀವನದ ಗುರಿ ನಿರ್ಧರಿಸಿಕೊಂಡು ಮುಂದಡಿಯಿಡಬೇಕೆಂಬ ಸದಾಶಯದಿಂದ, ಈ ಪುಸ್ತಕ ಪ್ರಕಟಿಸಲಾಗಿದೆ.

ಗಾಂಧಿ ಅವರು ಭಾರತದ ಭವಿಷ್ಯದ ಪ್ರಜೆಗಳಾಗುವ ವಿದ್ಯಾರ್ಥಿಗಳ ಬಗ್ಗೆ ಅತೀವ ಕಾಳಜಿ ಹೊಂದಿದ್ದರು. ಆದ್ದರಿಂದಲೇ ಶಿಕ್ಷಣ, ಚಾರಿತ್ರ್ಯ ನಿರ್ಮಾಣ, ಹಳ್ಳಿಗಳ ಸೇವೆ, ಧಾರ್ಮಿಕ ಶಿಕ್ಷಣ ಇವುಗಳನ್ನು ಕುರಿತು ಹಲವು ವಿಚಾರಗಳನ್ನು ಚರ್ಚಿಸಿದ್ದಾರೆ. ವಿದ್ಯಾರ್ಥಿಗಳು, ಅಧ್ಯಾಪಕರು ಸಿಗರೇಟ್, ಸಿಗಾರ್, ಮಾದಕ ದ್ರವ್ಯಗಳಿಗೆ ವಶರಾಗದೆ, ಪವಿತ್ರ ಜೀವನವನ್ನು ಉಳಿಸಿಕೊಳ್ಳಿರಿ ಎಂದಿದ್ದಾರೆ. "ಸಿಗರೇಟು, ಆಹಾರದಲ್ಲಿ ನೀವು ಒಳ್ಳೆಯ ವಿದ್ಯಾರ್ಥಿಗಳಾಗಿದ್ದಲ್ಲಿ ಸೇದುವುದನ್ನು ಬಿಟ್ಟು ಬಿಡಿರಿ, ಅದೇ ಉಳಿದ ಹಣವನ್ನು, ಉಪವಾಸದಿಂದ ಸಾಯುತ್ತಿರುವ ನಿಮ್ಮ ದೇಶ ಬಾಂಧವರ ಸಹಾಯಧನವಾಗಿ ನನ್ನೆಡೆಗೆ ಕಳುಹಿಸಿ"– ಎಂದು, ಶ್ರೀಲಂಕಾದ ಕಾಲೇಜಿನಲ್ಲಿ ಭಾಷಣ ಮಾಡಿದ ಸಂದರ್ಭದಲ್ಲಿ ಕರೆ ನೀಡಿದ್ದರು. ಸ್ವಾರ್ಥ ತ್ಯಾಗದಿಂದ ಭಾರತ ಕಟ್ಟುವ ಕೆಲಸವಾಗಬೇಕೆಂಬ ಬಗ್ಗೆ

ಅವರಿಗೆ ವಿಶ್ವಾಸವಿತ್ತು. ಆದ್ದರಿಂದಲೇ ಅವರು, ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಇದನ್ನು ಕುರಿತು ಬರೆಯುತ್ತಾ, "ಸ್ವಾರ್ಥ ತ್ಯಾಗವೆಂದರೆ ಆನಂದ. ಅನೇಕ ಯುವಕರು ಲಾಭದಾಯಕ ವೃತ್ತಿಗಳನ್ನು ತ್ಯಾಗ ಮಾಡಿದ್ದಾರೆ. ಅದು ಅವರಿಗೆ ನಿಜವಾಗಿಯೂ ಕೀರ್ತಿ ತರುವಂಥಹದ್ದು. ಭಾರತ ಮಾತೆ ನಮ್ಮೆಲ್ಲರಿಂದಲೂ ಸ್ವಾರ್ಥ ತ್ಯಾಗವನ್ನು ಅಪೇಕ್ಷಿಸುತ್ತಾಳೆ. ನಾವಿನ್ನೂ ಸ್ವಾರ್ಥ ತ್ಯಾಗದ ಕೂಡ ಆಟವಾಡುತ್ತಿದ್ದೇವೆ. ಸ್ವಾರ್ಥ ತ್ಯಾಗವೂ ಪ್ರತ್ಯಕ್ಷವಾಗಿ ಇನ್ನೂ ಬರಬೇಕಾಗಿದೆ". ಎಂದು 1925ರಲ್ಲಿ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಬರೆಯುತ್ತಾ, ಬುದ್ಧ, ತಿಲಕರು ಮತ್ತು ಅಂಡ್ರೂಸ್‌ರ ನಿದರ್ಶನಗಳನ್ನು ಕೊಟ್ಟಿದ್ದಾರೆ. ಇವೆಲ್ಲವೂ ಶಿಕ್ಷಣ ಕ್ಷೇತ್ರದಲ್ಲಿರುವ ಆಡಳಿತ ಮಂಡಳಿ ಅವರಿಗೆ, ವಿದ್ಯಾರ್ಥಿಗಳಿಗೆ ನೀತಿಪಾಠದಂತಿದೆ. ಇಂಥಹ ಬರಹಗಳನ್ನು ಗಾಂಧಿ ಅವರ ಭಾಷಣ, ಲೇಖನ, ಪತ್ರಿಕಾ ವರದಿಗಳಿಂದ ಆಯ್ದು, ರಾ.ಯ. ಧಾರವಾಡಕರಿಂದ ಅನುವಾದ ಮಾಡಿಸಿ, ಕೃತಿ ರೂಪದಲ್ಲಿ ಮೊದಲ ಬಾರಿಗೆ ಹೊರತಂದ ಗಾಂಧಿ ಭವನದ ಹಿಂದಿನ ಅಧ್ಯಕ್ಷರುಗಳಿಗೆ ನಾನು ಅಭಿಮಾನದಿಂದ ವಂದಿಸುತ್ತೇನೆ.

ಮೋ. ಕ. ಗಾಂಧಿ ಅವರ ಮೂಲ ಹಿಂದಿ ಭಾಷೆಯ ಕೃತಿಯನ್ನು ಶ್ರದ್ಧಾಭಕ್ತಿಯಿಂದ ರಾ.ಯ. ಧಾರವಾಡಕರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿಯನ್ನು ಪ್ರಕಟಿಸಲು ಸಜ್ಜುಗೊಳಿಸಿದ ಗಾಂಧಿ ಭವನದ ಗೌರವ ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆ ಮಾಲಿಕೆಯಿಂದ ಮುಂದುವರಿದು ಸ್ವಾತಂತ್ರ ಅಮೃತ ಮಹೋತ್ಸವ – 75ರ ಸುಸಂದರ್ಭದಲ್ಲಿ, ಶಿಕ್ಷಣದ ಕುರಿತಾದ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಭಾರತ ಸ್ವಾತಂತ್ರ್ಯ ಸಂಗ್ರಾಮದ ಜೊತೆಜೊತೆಗೆ ಗಾಂಧೀಜಿ ಅವರ ಸಾಮಾಜಿಕ ಕಳಕಳಿ ಹಾಗೂ ಸಮಾನತೆಗೆ ಪೂರಕವಾಗಿ ಜಾರಿಗೆ ತಂದ ಶಿಕ್ಷಣ ಪದ್ಧತಿಯ ಕುರಿತಾದ 'ವಿದ್ಯಾರ್ಥಿಗಳು' ಕೃತಿಯನ್ನು ಶ್ರೀ ರಾ.ಯ. ಧಾರವಾಡಕರ ಅವರು ರಚಿಸಿ ಕನ್ನಡಕ್ಕೆ ಅನುವಾದಿಸಿ ನಮ್ಮ ಅರಿವಿಗೆ ಇಲ್ಲಿ ತೆರೆದಿಟ್ಟಿದ್ದಾರೆ.

ಗಾಂಧಿ ಅವರೇ ಪತ್ರಕರ್ತರಾಗಿ ನಡೆಸುತ್ತಿದ್ದ, ಹರಿಜನ, ಯಂಗ್ ಇಂಡಿಯಾ ಪತ್ರಿಕೆ ಮತ್ತು ಅಂದು ಪ್ರಚಲಿತವಿದ್ದ ಇತರೆ ಪತ್ರಿಕೆಗಳಲ್ಲಿ ಶಿಕ್ಷಣ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ಬರೆದ ಲೇಖನಗಳನ್ನು ಸಂಗ್ರಹಿಸಲಾಗಿದೆ. ಮತ್ತು ಗಾಂಧಿ ಅವರು ಕಾಲೇಜುಗಳಲ್ಲಿ ಶಿಕ್ಷಣ ಕುರಿತಂತೆ ಮಾಡಿದ ಭಾಷಣಗಳನ್ನೂ ಇಲ್ಲಿ ಸೇರಿಸಿಕೊಳ್ಳಲಾಗಿದೆ. ಹಲವು ಸಂದರ್ಭಗಳಲ್ಲಿ, ನಾಡಿನ ವಿದ್ಯಾರ್ಥಿ ಸಮೂಹವನ್ನು ಕುರಿತು ಶಿಕ್ಷಣ ಪದ್ಧತಿ ಕುರಿತು ಗಾಂಧಿ ಅವರ ಆಶಯಗಳು ಏನಾಗಿತ್ತೆಂಬುದು ಇಲ್ಲಿನ ಲೇಖನಗಳಿಂದ ತಿಳಿದು ಬರುತ್ತದೆ. ವಿದ್ಯಾರ್ಥಿ ಜೀವನ, ನಂತರದ ಬದುಕು, ಉದ್ಯೋಗ–ನಿರುದ್ಯೋಗ, ವಿವಾಹ, ಬ್ರಹ್ಮಚರ್ಯ, ಸಂತಾನ, ವರದಕ್ಷಿಣೆ, ಜಾತ್ಯಾತೀತತೆ, ಇಂಡಿಗೋ ಚಳುವಳಿ, ರಾಷ್ಟ್ರಭಕ್ತಿ, ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸುವಿಕೆ ಇನ್ನೂ ಮುಂತಾದ ವಿಷಯಗಳ ಕುರಿತಾಗಿ, ಗಾಂಧಿ ಅವರ ಆಶಯಗಳು, ಸಿದ್ಧಾಂತಗಳು ಏಕಾಗಿತ್ತೆಂಬುದನ್ನು ಈ ಕೃತಿ ವಿವರಿಸುತ್ತದೆ. ವಿದ್ಯಾರ್ಥಿಗಳು ಮರಳಿ ಹಳ್ಳಿಗೆ ಹಿಂತಿರುಗಬೇಕೆಂದು ಗಾಂಧಿ ಅವರ ಲೇಖನದಲ್ಲಿ ಬರೆಯುತ್ತಾ– "ವಿದ್ಯಾಭ್ಯಾಸ ಮುಗಿಸಿದ ಜನರೆಲ್ಲ ಹಳ್ಳಿಗಳಲ್ಲಿ ವಾಸಿಸಬೇಕು. ಎಲ್ಲಾ ಕಾಲೇಜು ವಿದ್ಯಾರ್ಥಿಗಳು ತಾವು ಅಭ್ಯಾಸ ಮಾಡುತ್ತಿರುವಾಗಲೇ ಹಳ್ಳಿಗಳ ಕೆಲಸಗಳನ್ನು ಪ್ರಾರಂಭಿಸಬೇಕು. ಇಡೀ ರಜೆಯನ್ನು ಹಳ್ಳಿಗಳ ಸೇವೆಗಾಗಿ ಮೀಸಲಿಡಬೇಕು"– ಎಂದು ಕರೆ ನೀಡುತ್ತಾರೆ. ಹಳ್ಳಿಗಳ ಉದ್ಧಾರದಿಂದ ಮಾತ್ರ ಸದೃಢ ಭಾರತ ನಿರ್ಮಾಣ ಸಾಧ್ಯವೆಂದು ಅವರು ಅರಿತಿದ್ದರು.

ಹಿಂದಿ ಭಾಷೆಯಲ್ಲಿನ ಗಾಂಧೀಜಿ ಅವರ ಮಾತುಗಳು, ಭಾಷಣಗಳು, ಲೇಖನಗಳನ್ನು ರಾ.ಯ. ಧಾರವಾಡಕರ ಅವರು ಸರಳ ಸುಂದರವಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಿಂದಾಗಿ ಶಿಕ್ಷಣ ಕ್ಷೇತ್ರಕ್ಕೆ ಕನ್ನಡ ಭಾಷೆಗೆ ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಹದುಪಕಾರವಾಗಿದೆ. ಆದ್ದರಿಂದ ರಾ.ಯ. ಧಾರವಾಡಕರ ಅವರಿಗೆ ಗೌರವಪೂರ್ಣ ನಮನಗಳು.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರ ಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ. ಕಾರ್ಯದರ್ಶಿ

ದ್ವಿತೀಯ ಮುದ್ರಣ ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು; ನಡೆದಲ್ಲಿ ಪವಿತ್ರ ಭೂಮಿಯಾಯಿತು-ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿ ಅವರ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವನ್ನು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿ ಅವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧೀ ಸ್ಮಾರಕ ನಿಧಿ ಅವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧೀ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ.

ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧೀ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧೀ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು. ಈ ಗ್ರಂಥಗಳ ಉದ್ದೇಶ ಗಾಂಧಿತತ್ತ್ವ ಜ್ಞಾನ ಇಲ್ಲವೆ ಸಾಹಿತ್ಯದ ಮೌಲ್ಯಮಾಪನವಾಗಿರದೆ, ಭಿನ್ನ ಭಿನ್ನ ವಿಷಯಗಳ ಬಗೆಗೆ ಗಾಂಧೀಜಿ ಅವರು ಹೇಳಿದ ಮಾತುಗಳನ್ನು ತದ್ವತ್ತಾಗಿ ಭಾಷಾಂತರಿಸಿ ಕೊಡುವುದೇ ಆಗಿದೆ.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆ ಲಕ್ಷ್ಯವನ್ನು ಪೂರೈಸಿದ್ದರೆ, ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧೀ ವಿಚಾರ ಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ ಮಾಲಿಕೆಯ 'ಜನಪ್ರಿಯ' ಆವೃತ್ತಿಯಲ್ಲಿ ಈಗಾಗಲೇ "ಮಹಿಳೆಯರು" "ಒಳ್ಳೆಯ ಜೀವನ", "ಅಸ್ಪೃಶ್ಯತೆ", "ಸತ್ಯ", "ಸರ್ವೋದಯ" ಎಂಬ ಪುಸ್ತಕಗಳು ಪ್ರಕಟವಾಗಿವೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧಿ ವಿಚಾರದ ತಿಳುವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ವಿಚಾರಗಳಲ್ಲಿ ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ರಾ. ಶ್ರೀ ಹುಕ್ಕೇರಿಕರ
ಅಧ್ಯಕ್ಷರು
ಗಾಂಧಿ ಸ್ಮಾರಕ ನಿಧಿ, ಕರ್ನಾಟಕ

ವಿದ್ಯಾಗಿರಿ, ಧಾರವಾಡ
15–8–1960

ದ್ವಿತೀಯ ಮುದ್ರಣ ಪ್ರಕಾಶಕರ ಮಾತು

ಗಾಂಧಿ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿ ಅವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಈ ಕೃತಿ ಮೊದಲು ಪ್ರಕಟವಾದದ್ದು 1960ರ ಗಾಂಧೀ ಜಯಂತಿ ಸಂದರ್ಭದಲ್ಲಿ 5000 ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್ಮುದ್ರಣ ಮಾಡಲಾಯಿತು.

ಮಹಾತ್ಮ ಗಾಂಧೀಜಿ ಅವರು ವಿದ್ಯಾರ್ಥಿಗಳ ಬಗ್ಗೆ ಅತ್ಯಂತ ಗೌರವ ಭಾವನೆ ಹೊಂದಿದ್ದರು. ಅವರು ಗುಜರಾತ್ ವಿಶ್ವವಿದ್ಯಾಲಯದ ಪ್ರಾರಂಭದ ಭಾಷಣದಲ್ಲಿ ವಿದ್ಯಾರ್ಥಿ ಶಿಕ್ಷಕರನ್ನು ಕುರಿತು ಹೀಗೆ ಹೇಳುತ್ತಾರೆ. “ವಿಶ್ವವಿದ್ಯಾಲಯದ ಕುಲಪತಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳೆಂದರೆ ಶಿಕ್ಷಣದ ಭಿನ್ನ ಭಿನ್ನವಾದ ಅಂಗಗಳಾಗಿದ್ದಾರೆ. ನಾನು ಈಗಲೋ ಇನ್ನೊಂದು ಗಳಿಗೆಗೋ ಉದುರುವ ಗ್ರೀಷ್ಮ ಋತುವಿನ ಗಿಡದ ಎಲೆಯಾಗಿದ್ದೇನೆ. ಶಿಕ್ಷಕರೆಂದರೆ ಇನ್ನು ಹೆಚ್ಚು ಕಾಲ ಬಾಳಬಲ್ಲ ಎಳೆಯ ಪಲ್ಲವಗಳಾಗಿದ್ದು ತಮ್ಮ ಕಾಲಕ್ಕೆ ಅವರೂ ಉದುರುತ್ತಾರೆ. ಆದರೆ ವಿದ್ಯಾರ್ಥಿಗಳಾದ ನೀವು ಮಾತ್ರ ಕಾಲ ಕಾಲಕ್ಕೆ ಹಣ್ಣೆಲೆಗಳ ಬದಲು ಹಸುರೆಲೆಗಳನ್ನು ಕೊಡುತ್ತಿರುವ ಶಾಖೆಗಳಾಗಿದ್ದೀರಿ. ನನ್ನಲ್ಲಿದ್ದ ಶ್ರದ್ಧೆಯನ್ನು ಶಿಕ್ಷಕರಲ್ಲಿಡಬೇಕಾಗಿ ನಾನು ವಿದ್ಯಾರ್ಥಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಶಿಕ್ಷಕರಲ್ಲಿ ಉತ್ಸಾಹವು ಕಡಿಮೆಯೆನಿಸಿದರೆ ನಿಮ್ಮ ಸಾತ್ವಿಕತೆಯ ಅಗ್ನಿಕುಂಡದಲ್ಲಿ ಅವರನ್ನು ದಹಿಸಿರಿ. ದೇವರಲ್ಲಿ ಇದೇ ನನ್ನ ಪ್ರಾರ್ಥನೆ ಮತ್ತು ವಿದ್ಯಾರ್ಥಿಗಳಿಗೆ ಇದೇ ನನ್ನ ಆಶೀರ್ವಾದ.” ಅವರು ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಕಾರಾಗೃಹವನ್ನು ಅನುಭವಿಸುವಂತೆ ಕರೆ ನೀಡಿದ್ದರು. ವಿದ್ಯಾರ್ಥಿಗಳು ದೇಶದ ರಾಜಕೀಯ ಚಳುವಳಿಗಳಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ಸ್ಪಷ್ಟ ಕರ್ತವ್ಯವೆಂದು ಭಾವಿಸಿದ್ದರು. ಅವರು ಚೀನಾ ಮತ್ತು ಈಜಿಪ್ಟ್‌ಗಳಲ್ಲಿ ವಿದ್ಯಾರ್ಥಿಗಳೇ ರಾಜಕೀಯ ಆಂದೋಲನವುಂಟು ಮಾಡುತ್ತಿದ್ದಾರೆ. ಅಂತಹ ಕಾರ್ಯವನ್ನು ವಿದ್ಯಾರ್ಥಿಗಳು ಕೈಗೊಳ್ಳಬೇಕಾಗಿದೆ ಎಂದಿದ್ದರು. ವಿದ್ಯಾರ್ಥಿಗಳು ಉತ್ತಮ ಚಾರಿತ್ರ್ಯ

ಹೊಂದಿರಬೇಕೆಂಬುದು ಅವರ ಭಾವನೆಯಾಗಿತ್ತು. ವಿದ್ಯಾರ್ಥಿಗಳ ಚಾರಿತ್ರ್ಯಹೀನತೆಗೆ ಇಂದಿನ ಶಿಕ್ಷಣ ಪದ್ಧತಿ ಕಾರಣವಾಗಿದೆ. ಶಾಲಾ ಕಾಲೇಜುಗಳೆಂದರೆ ಚಾರಿತ್ರ್ಯವನ್ನು ನಿರ್ಮಾಣ ಮಾಡುವ ಕಾರಖಾನೆಗಳು ಎಂದಿದ್ದಾರೆ. ವಿದ್ಯಾರ್ಥಿಗಳು ಕೆಲವು ದೋಷಗಳಿಂದ ದೂರವಿರಬೇಕಾಗುತ್ತದೆ. ಅವುಗಳೆಂದರೆ ಧೂಮಪಾನ, ವರದಕ್ಷಿಣೆ, ಐಷಾರಾಮದ ಜೀವನ ಇಂತಹವುಗಳು. ಗಾಂಧೀಜಿ ಅವರು ಕೆಲವು ಕರ್ತವ್ಯಗಳನ್ನು ತಿಳಿಸಿದ್ದಾರೆ ಎಂದಿದ್ದಾರೆ. ವಿದ್ಯಾರ್ಥಿಗಳು ಜಾತೀಯತೆಯಿಂದ ದೂರ ಉಳಿಯಬೇಕೆಂದು ವಿದ್ಯಾರ್ಥಿಗಳಿಗೆ ಕಡ್ಡಾಯ ಲೈಂಗಿಕ ಶಿಕ್ಷಣದ ಅವಶ್ಯಕತೆ ಬಗ್ಗೆ ತಿಳಿಸಿದ್ದಾರೆ.

ಇಂತಹ ಕೃತಿಯನ್ನು ಮಹಿಳೆಯರು ಮತ್ತು ಯುವ ಜನತೆಗೆ ತಲುಪಿಸಲು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮಹತ್ತರ ಕಾರ್ಯವನ್ನು ಕೈಗೊಂಡಿದೆ. ಈ ಕೃತಿ ಯುವ ಜನತೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಹಕಾರಿಯಾಗುತ್ತದೆ. 1960ರಲ್ಲಿ ಈ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಅಂದಿನ ಸ್ಮಾರಕ ನಿಧಿಯ ಅಧ್ಯಕ್ಷರು ಹಾಗೂ ಅಂದಿನ ಪ್ರಕಟಣಾ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ.

ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಈ ಕೃತಿ ಕರಡು ತಿದ್ದುಪಡಿ ಮಾಡಿದ ಪ್ರೊ॥ ಜಿ. ಅಶ್ವಥ್ ನಾರಾಯಣ್ ಹಾಗೂ ಶ್ರೀಮತಿ ಎಂ.ಆರ್. ಲಕ್ಷ್ಮೀದೇವಿ ದಂಪತಿಗಳಿಗೂ ಹಾಗೂ ಈ ಕೃತಿಗೆ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ॥ ಬಸವರಾಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಮೆ॥ ಲಿಬರ್ಟಿ ಎಂಟರ್‌ಪ್ರೈಸಸ್ ಮಾಲೀಕರಾದ ಶ್ರೀಯುತ ಶಿವದೇವ್ ಅವರಿಗೂ ಧನ್ಯವಾದಗಳು ಸಲ್ಲುತ್ತವೆ.

ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ


ಪರಿವಿಡಿ

ಸಂಕ್ಷೇಪ ಸೂಚಿ

ಯ.ಇ. = ಯಂಗ್ ಇಂಡಿಯಾ

ವಿ.ಕಾ= ವಿಧಾಯಕ ಕಾರ್ಯಕ್ರಮ

ಹ. = ಹರಿಜನ



ಮಾನವ ಸಮಾಜದ ಮೂಲ ಘಟಕ ಎಂದರೆ ಗ್ರಾಮ. ಅಥವಾ ಸಣ್ಣದಾಗಿರುವ, ವ್ಯವಹಾರ ನಿಯಂತ್ರಣಕ್ಕೆ ಒಳಗಾಗಬಲ್ಲ ಮಾನವ ಸಮೂಹ. ಆದರ್ಶ ಸ್ಥಿತಿಯಲ್ಲಿ ಅವರು ತಮ್ಮ ಜೀವನಾವಶ್ಯಕ ಮುಖ್ಯ ವಸ್ತುಗಳ ಬಗ್ಗೆ ಸ್ವಪರಿಪೂರ್ಣರಾಗಿರುತ್ತಾರೆ. ಪರಸ್ಪರ ಸಹಕಾರ ಮತ್ತು ಪರಸ್ಪರಾವಲಂಬನೆಗಳ ಮೂಲಕ ಬಾಂಧವ್ಯ ಬೆಳೆಸಿ ಒಟ್ಟಾಗಿ ಬಾಳುತ್ತಾರೆ.

– ಮಹಾತ್ಮ ಗಾಂಧಿ

ವಿದ್ಯಾರ್ಥಿಗಳು

ನನ್ನ ಅರ್ಹತೆ

ನಾನು ಯಾವಾಗಲೂ ವಿದ್ಯಾರ್ಥಿಗಳ ಕೂಡ ನಿಕಟವಾದ ಸಂಪರ್ಕವನ್ನಿಟ್ಟುಕೊಂಡಿದ್ದೇನೆ. ಅವರು ನನ್ನನ್ನು ಬಲ್ಲರು. ನಾನು ಅವರನ್ನು ಅರ್ಥಮಾಡಿಕೊಂಡಿದ್ದೇನೆ. ಎಷ್ಟೋ ಹಳೆಯ ಕಾಲೇಜು ವಿದ್ಯಾರ್ಥಿಗಳು ಇಂದು ನನ್ನ ಸನ್ಮಾನಿತ ಸಹೋದ್ಯೋಗಿಗಳಾಗಿದ್ದಾರೆ. ಅವರು ಭವಿಷ್ಯದ ಆಶಯ ಕೈಗಂಬವಾಗಿದ್ದಾರೆ. ಅಸಹಕಾರ ಆಂದೋಲನದ ಉಚ್ಛ್ರಾಯ ಕಾಲದಲ್ಲಿ ಶಾಲೆ-ಕಾಲೇಜುಗಳನ್ನು ಬಿಟ್ಟು ಹೊರಬರಲು ಅವರನ್ನು ಆಮಂತ್ರಿಸಲಾಯಿತು. ಕಾಂಗ್ರೆಸ್ ಕರೆಗೆ ಓಗೊಟ್ಟು ಹಲವಾರು ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಂದಿನವರೆಗೂ ಅಚಲರಾಗಿ ಉಳಿದು ತಮಗೂ ಮತ್ತು ದೇಶಕ್ಕೂ ಬಹು ವಿಧ ಲಾಭವನ್ನು ತಂದಿದ್ದಾರೆ.

–ವಿ.ಕಾ.: ಪು – 25

ನಾನು ಈ ಪ್ರಿನ್ಸಿಪಾಲರನ್ನು ನಿರಾಶೆಗೊಳಿಸಬೇಕಾದದ್ದಕ್ಕಾಗಿ ನನಗೆ ಕೆಡಕೆನಿಸುತ್ತದೆ. 1920–21ನೆಯ ಇಸ್ವಿಯಲ್ಲಿ ವಿದ್ಯಾರ್ಥಿಗಳನ್ನು ಶಾಲೆ–ಕಾಲೇಜುಗಳಿಂದ ಹೊರಗೆ ತಂದು, ಕಾರಾಗೃಹ ವಾಸವನ್ನು ಎದುರಿಸಿಯಾದರೂ, ರಾಷ್ಟ್ರೀಯ ಚಳುವಳಿಯಲ್ಲಿ ಅವರು ಭಾಗವಹಿಸುವಂತೆ ಮಾಡುವಲ್ಲಿ ನನ್ನದೂ ಬಹುಮಟ್ಟಿನ ಭಾಗವಿತ್ತೆಂಬುದನ್ನು ಇವರು ಅರಿತಿರಲು ಸಾಕು.

ತಮ್ಮ ದೇಶದ ರಾಜಕೀಯ ಚಳುವಳಿಯಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ಸ್ಪಷ್ಟವಾದ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಜಗತ್ತಿನಲ್ಲಿ ಎಲ್ಲ ಕಡೆಗೂ ವಿದ್ಯಾರ್ಥಿಗಳು ಹೀಗೆ ಮಾಡುತ್ತಿದ್ದಾರೆ. ಭಾರತದಲ್ಲಿಯಂತೂ ಇತ್ತೀಚಿನವರೆಗೂ ದುರ್ದೈವದಿಂದ ಇಂಗ್ಲೀಷ್ ಶಿಕ್ಷಣ ಪಡೆದ ವರ್ಗದಲ್ಲಿಯಷ್ಟೇ ಬಹುಮಟ್ಟಿನ

ರಾಜಕೀಯ ಜಾಗೃತಿ ಮರ್ಯಾದಿತವಾಗಿದ್ದಾಗ, ನಿಜವಾಗಿಯೂ ವಿದ್ಯಾರ್ಥಿಗಳ ಕರ್ತವ್ಯವು ಇನ್ನೂ ಹೆಚ್ಚಿನದಾಗಿದೆ. ಚೀನದಲ್ಲಿಯೇ ಆಗಲಿ, ಈಜಿಪ್ಟಿನಲ್ಲಿಯೇ ಆಗಲಿ, ವಿದ್ಯಾರ್ಥಿಗಳೇ ರಾಜಕೀಯ ಆಂದೋಲನವುಂಟಾಗುವಂತೆ ಮಾಡಿದ್ದಾರೆ. ಭಾರತದಲ್ಲಿ ಅವರು ಮಾಡಬೇಕಾದುದೇನೂ ಕಡಿಮೆಯಾಗಿಲ್ಲ.

– ಯಂಗ್ ಇಂಡಿಯಾ., 1920

ವಿಶ್ವವಿದ್ಯಾಲಯದ ಕುಲಪತಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳೆಂದರೆ ಶಿಕ್ಷಣದ ಭಿನ್ನ ಭಿನ್ನವಾದ ಅಂಗಗಳಾಗಿದ್ದಾರೆ. ನಾನು ಈಗಲೋ ಇನ್ನೊಂದು ಗಳಿಗೆಗೋ ಉದುರುವ ಗ್ರೀಷ್ಮ ಋತುವಿನ ಗಿಡದ ಎಲೆಯಾಗಿದ್ದೇನೆ. ಶಿಕ್ಷಕರೆಂದರೆ ಇನ್ನು ಹೆಚ್ಚು ಕಾಲ ಬಾಳಬಲ್ಲ ಎಳೆಯ ಪಲ್ಲವಗಳಾಗಿದ್ದು ತಮ್ಮ ಕಾಲಕ್ಕೆ ಅವರೂ ಉದುರುತ್ತಾರೆ. ಆದರೆ, ವಿದ್ಯಾರ್ಥಿಗಳಾದ ನೀವು ಮಾತ್ರ ಕಾಲಕಾಲಕ್ಕೆ ಹಣ್ಣೆಲೆಗಳ ಬದಲು ಹಸುರೆಲೆಗಳನ್ನು ಕೊಡುತ್ತಿರುವ ಶಾಖೆಗಳಾಗಿದ್ದೀರಿ. ನನ್ನಲ್ಲಿಟ್ಟ ಶ್ರದ್ಧೆಯನ್ನೇ ಶಿಕ್ಷಕರಲ್ಲಿಡಬೇಕಾಗಿ ನಾನು ವಿದ್ಯಾರ್ಥಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಶಿಕ್ಷಕರಲ್ಲಿ ಉತ್ಸಾಹವು ಕಡಿಮೆಯೆನಿಸಿದರೆ, ನಿಮ್ಮ ಸಾತ್ವಿಕತೆಯ ಅಗ್ನಿ ಕುಂಡದಲ್ಲಿ ಅವರನ್ನು ದಹಿಸಿರಿ. ದೇವರಲ್ಲಿ ಇದೇ ನನ್ನ ಪ್ರಾರ್ಥನೆ ಮತ್ತು ವಿದ್ಯಾರ್ಥಿಗಳಿಗೆ ಇದೇ ನನ್ನ ಆಶೀರ್ವಾದ.

– (ಗುಜರಾತ ವಿಶ್ವವಿದ್ಯಾಲಯದ ಪ್ರಾರಂಭ ಭಾಷಣದಿಂದ)

(ರಾಷ್ಟ್ರೀಯ ಆಂದೋಲನದಲ್ಲಿ ವಿದ್ಯಾರ್ಥಿಗಳು ಭಾಗವಹಿಸದಂತೆ ಉಪದೇಶಿಸಬೇಕಾಗಿ ಕಾಲೇಜ್ ಪ್ರಿನ್ಸಿಪಾಲರೊಬ್ಬರು ಹೇಳಿದಾಗ ಗಾಂಧೀಜಿ ಕೊಟ್ಟ ಉತ್ತರವಿದು.)

ಕಳೆದ ಹತ್ತು ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳ ಕೂಡ ನನ್ನ ಸಂಪರ್ಕ ಬಂದಿದೆ. ಅವರು ತಮ್ಮ ಅಂತರ್ಯವನ್ನೆಲ್ಲ ನನ್ನೆದುರು ಬಿಚ್ಚಿಟ್ಟಿದ್ದಾರೆ. ಆದ್ದರಿಂದ ನನಗೆ ನಿಮ್ಮ ಕಠಿಣ ಸಮಸ್ಯೆಗಳೇನು ಮತ್ತು ನಿಮ್ಮ ಪ್ರತಿಯೊಂದು ದುರ್ಬಲತೆ ಯಾವುದೆಂಬುದು ನನಗೆ ಗೊತ್ತಿದೆ. ನಿಮಗೆ ಸಕ್ರಿಯ ಸಹಾಯವನ್ನು ನಾನು ಕೊಡಬಲ್ಲೆನೋ ಹೇಗೆಂಬುದು ನನಗೆ ಗೊತ್ತಿಲ್ಲ. ಆದರೆ, ನಾನು ಇಷ್ಟು ಮಾತ್ರ ಮಾಡಬಲ್ಲೆ. ನಾನು ನಿಮ್ಮ ಸ್ನೇಹಿತ ಮತ್ತು ಮಾರ್ಗದರ್ಶಕನಾಗಿರಬಲ್ಲೆ. ನಿಮ್ಮ ದುಃಖಗಳಲ್ಲಿ ಭಾಗಿಯಾಗಲು ಪ್ರಯತ್ನಿಸುವೆ. ಮತ್ತು ನನ್ನ ಅನುಭವದ ಲಾಭವನ್ನು ನಿಮಗೆ ಕೊಡಬಲ್ಲೆ.

– ಯಂಗ್ ಇಂಡಿಯಾ, 1927

ವಿದ್ಯಾರ್ಥಿ ಪ್ರಪಂಚದ ಸಂಬಂಧದ ಬಗ್ಗೆ ನೀವು ನನಗೆ ಕೊಟ್ಟ ಮರ್ಯಾದೆಯನ್ನು ನಾನು ಸ್ವೀಕರಿಸುವ ಧೈರ್ಯವನ್ನು ಮಾಡಲಾರೆ. ಆದರೆ ನಾನು ಮತ್ತೊಂದು ವಿಧದ ಮರ್ಯಾದೆಯ ಬಾಧ್ಯಸ್ಥನಾಗಲು ಪ್ರಯತ್ನಿಸುತ್ತಿದ್ದೇನೆ. ಅದೆಂದರೆ–ವಿದ್ಯಾರ್ಥಿ ಪ್ರಪಂಚದ ಸೇವಕನಾಗಿರುವುದು. ಬರಿಯ ಭಾರತ, ಇಲ್ಲವೆ ಬ್ರಹ್ಮದೇಶದ ವಿದ್ಯಾರ್ಥಿ ಪ್ರಪಂಚವಲ್ಲ–ಅದು ತೀರ ಹೆಚ್ಚಿನ ಹೇಳಿಕೆಯೆನಿಸದಿದ್ದರೆ–ಇಡೀ ವಿಶ್ವದ ವಿದ್ಯಾರ್ಥಿ ವೃಂದದ ಸೇವಕನಾಗಿರುವುದು. ಜಗತ್ತಿನ ಅತಿ ದೂರದ ಮೂಲೆಯಲ್ಲಿರುವ ಹಲಕೆಲವು ವಿದ್ಯಾರ್ಥಿಗಳ ಸಂಪರ್ಕವು ನನಗೆ ಬಂದಿದೆ. ಪರಮಾತ್ಮನು ಇನ್ನೂ ಕೆಲವು ವರುಷಗಳನ್ನು ದಯಪಾಲಿಸಿದನೆಂದರೆ, ನಾನು ಈ ಹಕ್ಕುದಾರಿಕೆಯನ್ನು ಯಥಾರ್ಥವಾಗಿ ವಹಿಸಬಲ್ಲೆನು.

– ಯಂಗ್ ಇಂಡಿಯಾ, 1929

ವಿದ್ಯಾರ್ಥಿಗಳು ಮತ್ತು ಚಾರಿತ್ರ್ಯ

ಚಾರಿತ್ರ್ಯ

ನಾನು ಪ್ರವಾಸ ಹೋದಲ್ಲೆಲ್ಲ ಭಾರತದ ತೀರ ಅಗತ್ಯವಾದ ಅವಶ್ಯಕತೆ ಏನೆಂದು ಪ್ರಶ್ನಿಸಲಾಗುತ್ತಿದೆ. ನಾನು ಬೇರೆ ಕಡೆ ಕೊಟ್ಟ ಉತ್ತರವನ್ನೇ ಇಲ್ಲಿಯೂ ಕೊಡಬೇಕಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ಯೋಗ್ಯವಾದ ಧಾರ್ಮಿಕ ಭಾವನೆಯು ಭಾರತದ ಅತಿ ಹೆಚ್ಚಿನ ಮತ್ತು ತೀರ ಅಗತ್ಯದ ಅವಶ್ಯಕತೆಯಾಗಿದೆ. ....ನಮ್ಮಲ್ಲಿಯ ಧಾರ್ಮಿಕ ಭಾವನೆಯು ಸುಪ್ತಾವಸ್ಥೆಯಲ್ಲಿದ್ದ ಮೂಲಕ ನಾವು ಯಾವಾಗಲೂ ಹೆದರಿಕೆಯ ಸ್ಥಿತಿಯಲ್ಲಿಯೇ ಇರುತ್ತೇವೆ. ನಾವು ಭೌತಿಕ ಮತ್ತು ಆಧ್ಯಾತ್ಮಿಕ ಅಧಿಕಾರಗಳೆರಡಕ್ಕೂ ಹೆದರುತ್ತಿದ್ದೇವೆ. ನಮ್ಮ ಆಚಾರ್ಯರು ಮತ್ತು ಪಂಡಿತರೆದುರು ಮನ ಬಿಚ್ಚಿ, ಮಾತನಾಡಲಾರೆವು. ನಮಗೆ ಭೌತಿಕ ಅಧಿಕಾರದ ಭಯವಿದೆ. ಆದರೆ, ಹೀಗೆ ಮಾಡುವುದರಿಂದ ನಾವು ಅವರಿಗೂ ನಮಗೂ ಕೂಡಿಯೇ ಅನ್ಯಾಯ ಮಾಡುತ್ತಿದ್ದೇವೆ. ನನ್ನ ವಿನಮ್ರ ಅಭಿಪ್ರಾಯದಲ್ಲಿ ನಾವು ಏನಾದರೂ ಸಾಧಿಸಬೇಕಾದರೆ, ಹೆದರಿಕೆಯಿಲ್ಲದಿರುವುದು ತೀರ ಮೊದಲನೆಯ ಅಗತ್ಯವಾಗಿದೆ.

ಧಾರ್ಮಿಕ ಭಾವನೆ ಇದ್ದ ಹೊರತು ಈ ಗುಣವು ಬರಲಾರದು. ನಾವು ದೇವರಿಗೆ ಹೆದರೋಣ; ಅಂದರೆ ಮನುಷ್ಯನ ಹೆದರಿಕೆ ನಮಗೆ ತಪ್ಪುತ್ತಿದೆ. ನಮ್ಮ ವಿಚಾರ ಮತ್ತು ಆಚಾರಗಳ ಸಾಕ್ಷಿಯಾಗಿ ತಪ್ಪುತ್ತಿದೆ. ನಮ್ಮ ವಿಚಾರ ಮತ್ತು ಆಚಾರಗಳ ಸಾಕ್ಷಿಯಾಗಿ, ರಕ್ಷಕವಾಗಿ ಮತ್ತು ಸತ್ಯದ ದಾರಿಯ ಮೇಲೆ ನಡೆಸುವ ಮಾರ್ಗದರ್ಶಕವಾಗಿ ನಮ್ಮಲ್ಲಿಯೇ ದೈವತ್ವವು ನೆಲಸಿದೆಯೆಂದು ನಾವು ನಂಬಿದರೆ, ದೇವರನ್ನು ಬಿಟ್ಟು ಈ ಜಗತ್ತಿನಲ್ಲಿ ನಾವು ಮತ್ತಾರಿಗೂ ಹೆದರೆವು.

* * *

ಅಲ್ಲಲ್ಲಿ ಕಂಡುಬರುವ ಚಾರಿತ್ರ್ಯಹೀನತೆಗೆ ಇಂದಿನ ಶಿಕ್ಷಣ ಪದ್ಧತಿಯೇ ಕಾರಣವಾಗಿದೆ. ಇದರ ಪರಿಹಾರವು ಶಿಕ್ಷಕರೇ ವಿದ್ಯಾರ್ಥಿಗಳ ಕೂಡ ಕೂಡಿಕೊಂಡು ಅವರನ್ನು ಯಶಸ್ಸಿನ ಕಡೆಗೆ ಒಯ್ಯುವುದರಲ್ಲಿದೆ. ಈ ವಿಷಯಕ್ಕೆ ಚಾರಿತ್ರ್ಯ ಎಂದು ಕರೆಯುವುದಕ್ಕಿಂತ "ನಿಯಂತ್ರಣ" ಎಂದು ಕರೆಯುವುದು ಯುಕ್ತವೆಂದೆನಿಸುತ್ತದೆ. ಇಂದು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಯಾವ ಬಾಂಧವ್ಯವೂ ಇಲ್ಲ. ಸರಕಾರೀ ಸಂಸ್ಥೆಗಳಲ್ಲಿಯೇ ಆಗಲಿ, ಇಲ್ಲವೆ ಸಹಾಯ ಪಡೆದ ಸಂಸ್ಥೆಗಳಲ್ಲಿಯೇ ಆಗಲಿ ದುಡಿಯುವ ಶಿಕ್ಷಕರು ಸರಕಾರದ ಬಗ್ಗೆ ವಿದ್ಯಾರ್ಥಿಗಳಲ್ಲಿ ನಿಷ್ಠೆಯನ್ನು ಪ್ರದರ್ಶಿಸುವುದು ಮತ್ತು ಹುಟ್ಟಿಸುವುದು ತಮ್ಮ ಕರ್ತವ್ಯವೆಂದು ಬಗೆದಿದ್ದಾರೆ. ವಿದ್ಯಾರ್ಥಿಗಳಲ್ಲಿ ಅಂಥ ನಿಷ್ಠೆಯೇನೂ ಉಳಿದಿಲ್ಲ. ಅವರು ತಾಳ್ಮೆಗೆಟ್ಟಿದ್ದಾರೆ. ತಾಳ್ಮೆ ಗೆಟ್ಟಿದ್ದರ ಮೂಲಕ ಆತ್ಮ ನಿಯಂತ್ರಣವಿಲ್ಲದೆ ಅವರ ಉತ್ಸಾಹವು ಭಿನ್ನ ಭಿನ್ನವಾದ ಸಂಶಯಾಸ್ಪದ ಮಾರ್ಗಗಳಲ್ಲಿ ಪ್ರವಹಿಸುತ್ತದೆ.

–(ಲೇ.ಭಾ.,–ಪು. 329)

ಪಿತೃಭಕ್ತಿ

ತಮ್ಮ ತಾಯಿ–ತಂದೆಗಳ ಸಂರಕ್ಷಣೆಗಿಂತ ತಮ್ಮ ಸಂಸ್ಥೆಯ ಸಂರಕ್ಷಣೆಯೇ ಹೆಚ್ಚಿನದೆಂದು ಹೇಳಿದ್ದನ್ನು ನಾನು ನನ್ನ ಬಂಗಾಲ ಪ್ರವಾಸದಲ್ಲಿ ಕೇಳಿದೆನು. ಅಷ್ಟೇ ಅಲ್ಲ; ಈ ಅಭಿಪ್ರಾಯಕ್ಕೆ ನನ್ನ ಸಮ್ಮತಿಯೂ ಇದೆಯೆಂದು ಹೇಳಲಾಯಿತು. ಇಂಥ ಅಭಿಪ್ರಾಯವನ್ನುಂಟು ಮಾಡುವ ಯಾವುದೇ ಮಾತನ್ನು ಈ ಪುಟಗಳಲ್ಲಿ ನಾನು ಬರೆಯದಿದ್ದರೆ, ಅದಕ್ಕಾಗಿ ನಾನು ನನ್ನ ಓದುಗರ ಕ್ಷಮೆ ಕೋರುತ್ತೇನೆ. ಇಂಥ ಅಪರಾಧವನ್ನು ಮಾಡಿದ ಯಾವ ನೆನಪೂ ನನಗಿಲ್ಲ. ನಾನು ಈಗ ಈ ರೀತಿ ಬೆಳೆದದ್ದಕ್ಕೆಲ್ಲ ನನ್ನ ತಾಯಿ ತಂದೆಗಳೇ ಕಾರಣರು. ನಾನು ಅವರಿಗೇ ಸರ್ವಸ್ವೀ ಋಣಿಯಾಗಿದ್ದೇನೆ. ಶ್ರವಣ ಮಹರ್ಷಿಗೆ ತನ್ನ ತಾಯಿ ತಂದೆಗಳ ಬಗ್ಗೆ ಇದ್ದ ಭಾವನೆಯೇ ನನ್ನಲ್ಲಿಯೂ ನನ್ನ ತಂದೆ ತಾಯಿಗಳ ಬಗ್ಗೆ ಇದ್ದಿತು. ಆದ್ದರಿಂದ ಈ ಹೇಳಿಕೆಯನ್ನು ಕೇಳಿದಾಗ ನನ್ನಲ್ಲುಂಟಾದ ಕೋಪವನ್ನು ನಾನು ಬಹಳವೇ ಪ್ರಯತ್ನಪೂರ್ವಕವಾಗಿಯೇ ತಡೆದುಕೊಳ್ಳಬೇಕಾಯಿತು. ಈ ಮಾತನ್ನು ಹೇಳಿದ ಯುವಕನು ಇದರ ಬಗ್ಗೆ ಎಷ್ಟರ ಮಟ್ಟಿಗೆ ಗಂಭೀರವಾಗಿದ್ದನೋ ನಾನರಿಯೆ. ಯಾಕೆಂದರೆ ಇತ್ತೀಚೆಗೆ ದೊಡ್ಡಸ್ತನದ ವೈಖರಿಯಿಟ್ಟು ತಾವು ಪರಿಪೂರ್ಣತೆಯ ಪ್ರತೀಕಗಳೆಂದು ಪ್ರದರ್ಶಿಸುವುದೇ ಫ್ಯಾಶನ್ ಆಗಿಬಿಟ್ಟಿದೆ. ನನ್ನ ಅಭಿಪ್ರಾಯದಲ್ಲಿ ವೃದ್ಧರಾದ ಮತ್ತು ದುರ್ಬಲರಾದ ತನ್ನ ತಾಯಿ–ತಂದೆಗಳನ್ನು ಸಂರಕ್ಷಿಸುವುದೇ

ಪ್ರತಿಯೊಬ್ಬ ಯುವಕನ ಪ್ರಥಮ ಹೊಣೆಗಾರಿಕೆಯಾಗಿದೆ. ತನ್ನ ತಾಯಿ ತಂದೆಗಳ ಉದರಭರಣ ಮಾಡುವ ಯೋಗ್ಯತೆಯು ಅವನಲ್ಲಿರದಿದ್ದರೆ ಅವನು ಮದುವೆ ಸಹ ಆಗಕೂಡದು. ತಮ್ಮ ತಾಯಿ-ತಂದೆಗಳ ಸಂರಕ್ಷಣೆ ಮಾಡುವುದು ಸಾಧ್ಯವಿರದಿದ್ದರೆ, ಸಾರ್ವಜನಿಕ ಜೀವನವನ್ನು ಅಂಗೀಕರಿಸಕೂಡದು. ತಮ್ಮ ತಂದೆ-ತಾಯಿಗಳಿಗೆ ಅನ್ನ ವಸ್ತ್ರಗಳು ದೊರೆಯಲು ತಾನು ಉಪವಾಸ ಮಾಡಬೇಕಾದರೂ ಆ ಯುವಕರು ಸಿದ್ಧನಾಗಿರಬೇಕು. ಅಜ್ಞಾನಪೂರ್ಣವಾದ ಇಲ್ಲವೆ ಅತಿರೇಕದ ಬೇಡಿಕೆಗಳನ್ನು ಕೇಳುತ್ತಿದ್ದ ತಂದೆ-ತಾಯಿಗಳ ಬೇಡಿಕೆಯನ್ನು ಮಾತ್ರ ಅವನು ಪೂರೈಸುವ ಕಾರಣವಿಲ್ಲ.

ಸ್ವಾರ್ಥತ್ಯಾಗ

ನಿಜವಾಗಿ ಹೇಳುವುದಾದರೆ, ಯಾವ ಪ್ರಾಮಾಣಿಕ ಸಾರ್ವಜನಿಕ ಕಾರ್ಯಕರ್ತನೂ ಉಪವಾಸ ಬಿದ್ದದ್ದನ್ನು ನಾನು ಈವರೆಗೂ ಕಂಡಿಲ್ಲ. ಸ್ವಲ್ಪ ಅನಾನುಕೂಲತೆಗಳು ಅವರಿಗಿದ್ದದ್ದನ್ನು ನೋಡಿದ್ದೇನೆ. ಈಗ ತಮಗೆ ದೊರಕುತ್ತಿದ್ದುದಕ್ಕಿಂತ ಸ್ವಲ್ಪ ಹೆಚ್ಚು ದೊರಕಬೇಕಾಗಿದ್ದ ಕಾರ್ಯಕರ್ತರನ್ನೂ ನಾನು ಕಂಡಿದ್ದೇನೆ. ಆದರೆ, ಅವರ ಕೆಲಸ ಬೆಳೆದಂತೆ, ಅವರ ಯೋಗ್ಯತೆ ಜನತೆಗೆ ಗೊತ್ತಾದಂತೆ, ಯಾವ ಕೊರತೆಯೂ ತೊಂದರೆಯೂ ಅವರಿಗೆ ಆಗದು. ಸಂಕಟ ಮತ್ತು ಪರೀಕ್ಷೆಗಳ ಮೂಲಕ ಮನುಷ್ಯನು ನಿರ್ಮಾಣ ಹೊಂದುತ್ತಾನೆ. ಅವು ಆರೋಗ್ಯಕರವಾದ ಬೆಳವಣಿಗೆಯ ಲಕ್ಷಣಗಳು. ಪ್ರತಿಯೊಬ್ಬ ಮನುಷ್ಯನಿಗೂ ಜೀವನಾವಶ್ಯಕ ವಿಷಯಗಳೆಲ್ಲ ಸಮೃದ್ಧವಾಗಿ ದೊರಕಿ ಯಾವ ನ್ಯೂನತೆಯೂ ಇದ್ದಿರಲಿಲ್ಲವಾದರೆ, ಪರೀಕ್ಷಾ ಸಮಯದಲ್ಲಿ ಅವನು ತೊಂದರೆಗೀಡಾಗುತ್ತಿದ್ದನು. ಸ್ವಾರ್ಥತ್ಯಾಗವೆಂದರೆ ಆನಂದ. ಆದ್ದರಿಂದ ಜನತೆಯ ಎದುರು ತನ್ನ ಸ್ವಾರ್ಥತ್ಯಾಗವನ್ನು ಪ್ರದರ್ಶಿಸಲಾಗದು. ತಾವು ಯಾವ ಸ್ವಾರ್ಥತ್ಯಾಗವನ್ನೂ ಲಕ್ಷಿಸುವುದಿಲ್ಲವೆಂದು ಹಲವು ಕಾರ್ಯಕರ್ತರು ನನಗೆ ಹೇಳಿದರು. ಅವರಿಗೆ ಮರುಸವಾಲು ಹಾಕಿದಾಗ, ಅವರು ಭಿಕ್ಷೆ ಬೇಡುವುದರಿಂದ ಅಂದರೆ ವರ್ಗಣಿಗಳನ್ನು ಸ್ವೀಕರಿಸುವುದರ ಮೂಲಕ ಜೀವನ ಸಾಗಿಸುತ್ತಿದ್ದಾರೆಂಬುದು ಗೊತ್ತಾಯಿತು. ಅನೇಕ ಸಾರ್ವಜನಿಕ ಕೆಲಸಗಾರರು ಹೀಗೆ ಜೀವನ ಸಾಗಿಸುತ್ತಾರೆ. ಅವರು ಸ್ವಾರ್ಥತ್ಯಾಗ ಮಾಡಿದ್ದಾಗಿ ಹೇಳಬೇಕಾಗಿಲ್ಲ. ಅನೇಕ ಯುವಕರು ಲಾಭದಾಯಕ ವೃತ್ತಿಗಳನ್ನು ತ್ಯಾಗ ಮಾಡಿದ್ದಾರೆ. ಅದು ನಿಜವಾಗಿಯೂ ಅವರಿಗೆ ಕೀರ್ತಿ ತರುವಂತಹದು. ಅದರಲ್ಲಿಯೂ ನಾನು ವಿನಯಪೂರ್ವಕವಾಗಿ ಸೂಚಿಸುವುದೆಂದರೆ, ಇಂಥ ಪ್ರಸಂಗಗಳಲ್ಲಿ ಅತಿ ಪ್ರಶಂಸೆ ಯುಕ್ತವಾದದ್ದಲ್ಲ.

ಸ್ವಾರ್ಥತ್ಯಾಗ ಮತ್ತು ಸಪ್ಪೆ ಮುಖ ಎರಡೂ ಕೂಡಿ ಹೋಗಲಾರವು. ಬಲಿದಾನವೆಂದರೆ ದಾನವನ್ನು ಪವಿತ್ರವಾಗಿಸುವುದು. ತನ್ನ ಬಲಿದಾನದ ಬಗ್ಗೆ ಜನತೆಯ ಅನುಕಂಪವನ್ನು ಅಪೇಕ್ಷಿಸುವ ವ್ಯಕ್ತಿಯು ನಿಜವಾಗಿಯೂ ತೀರ ಬಡಪಾಯಿ ಮಾನವನಾಗಿದ್ದಾನೆ. ತನಗೆ ಅನಿವಾರ್ಯವಾಗಿತ್ತೆಂದೇ ಬುದ್ಧನು ಸರ್ವತ್ಯಾಗ ಮಾಡಿದನು. ಯಾವುದನ್ನೂ ಉಳಿಸಿಕೊಳ್ಳುವುದು ಅವರಿಗೆ ತೊಂದರೆದಾಯಕವಾಗಿದ್ದರ ಮೂಲಕವಾಗಿಯೇ ಲೋಕಮಾನ್ಯ ಟಿಳಕರು ಬಡವರಾಗಿಯೇ ಉಳಿದರು. ಆ್ಯಂಡ್ರ್ಯೂಜ್ ಅವರು ನಾಲ್ಕಾರು ರೂಪಾಯಿಗಳನ್ನು ಸಹ ಇಟ್ಟುಕೊಳ್ಳುವುದು ಭಾರದಾಯಕವಾಗಿದೆಯೆಂದು ನಂಬಿದ್ದಾರೆ. ಏನಾದರೂ ಅಲ್ಪಸ್ವಲ್ಪ ದೊರಕಿದರೆ, ಅದನ್ನು ಕಳೆದುಕೊಳ್ಳಲು ಅವರು ಪ್ರಯತ್ನಿಸುತ್ತಾರೆ. ಅವರಿಗೆ ಒಬ್ಬ ಪಾಲನಕರ್ತನು ಬೇಕೆಂದು ನಾನು ಅನೇಕ ಸಲ ಹೇಳಿದ್ದೇನೆ. ಅವರು ನಾನು ಹೇಳಿದ್ದನ್ನು ಕೇಳುತ್ತಾರೆ, ನಗುತ್ತಾರೆ; ಮತ್ತು ಮುಖದ ಮೇಲೆ ಯಾವ ಬದಲಾವಣೆಯನ್ನು ಸಹ ತೋರಿಸದೆ ತಮ್ಮ ಕಾಯಕವನ್ನು ನಡೆಸಿಯೇ ನಡೆಸುತ್ತಾರೆ. ಭಾರತಮಾತೆ ಅತ್ಯುಗ್ರ ದೇವತೆಯಾಗಿದ್ದಾಳೆ. "ಭಾಪು ಮಕ್ಕಳೆ! ಈಗ ನೀವು ಸ್ವತಂತ್ರರಾಗಿದ್ದೀರಿ!" ಎಂದು ಅವಳು ಹೇಳುವ ಮೊದಲು ಅವಳು ನಮ್ಮೆಲ್ಲರಿಂದಲೂ ಸ್ವಾರ್ಥತ್ಯಾಗವನ್ನು ಅಪೇಕ್ಷಿಸುತ್ತಾಳೆ. ನಾವಿನ್ನೂ ಸ್ವಾರ್ಥತ್ಯಾಗದ ಕೂಡ ಆಟವಾಡುತ್ತಿದ್ದೇವೆ. ಸ್ವಾರ್ಥತ್ಯಾಗವು ಪ್ರತ್ಯಕ್ಷವಾಗಿ ಇನ್ನೂ ಬರಬೇಕಾಗಿದೆ.

–ಯಂಗ್ ಇಂಡಿಯಾ, 1925

(ರಾಷ್ಟ್ರೀಯ ಸಂಸ್ಥೆಗಳ ಬಗ್ಗೆ ಒಬ್ಬ ವಿದ್ಯಾರ್ಥಿಯು ಗಾಂಧೀಜಿಯವರಿಗೆ ಬರೆಯುತ್ತಾ ಅಲ್ಲಿಯ ಅಧ್ಯಾಪಕರೇ ತಮ್ಮ ಮಕ್ಕಳನ್ನು ಸರಕಾರಿ ಸಂಸ್ಥೆಗಳಿಗೆ ಕಳಿಸುತ್ತಿರುವರೆಂದೂ ತಾನೂ ಹೆಚ್ಚಿನ ಅಭ್ಯಾಸಕ್ಕಾಗಿ ಪರದೇಶಕ್ಕೆ ಹೋಗಬಯಸುತ್ತಿರುವುದಾಗಿಯೂ ತಿಳಿಸಿದ್ದನು. ಆಗ ಗಾಂಧೀಜಿ ಹೀಗೆ ಉತ್ತರ ಬರೆದರು)

.........ಇಂಥ ಶಿಕ್ಷಕರೇ ಸರಕಾರಿ ಸಂಸ್ಥೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದರೆ ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಯಾವ ಉತ್ಸಾಹವನ್ನೂ ಹುಟ್ಟಿಸಲಾರರೆಂಬುದು ಸ್ಪಷ್ಟ. ಆದರೂ ಒಂದು ಮಾತಿನ ಬಗ್ಗೆ ನಾನಿಲ್ಲಿ ಹೇಳಬೇಕಾಗಿದೆ. ಅದೆಂದರೆ ಸರಕಾರಿ ಸಂಸ್ಥೆಗಳನ್ನು ತ್ಯಜಿಸಿದವರು ತಾವು ಮಾಡಿದ ಸ್ವಾರ್ಥ ತ್ಯಾಗದ ಬಗ್ಗೆ ವ್ಯಥೆಪಡುವುದು. ವ್ಯಥೆಯನ್ನುಂಟು ಮಾಡುವ ಎಲ್ಲ ಸ್ವಾರ್ಥ ತ್ಯಾಗವೂ ತನ್ನ ಪಾವಿತ್ರ್ಯವನ್ನು ಕಳೆದುಕೊಂಡು ತನ್ನ ಭಾರದಲ್ಲಿಯೇ ಮುರಿದುಬೀಳುತ್ತದೆ. ತನಗೆ ಘಾತುಕವೆಂದೆನಿಸಿದ

ವಸ್ತುಗಳನ್ನೇ ಮನುಷ್ಯನು ಬಿಟ್ಟುಬಿಡುತ್ತಿರುವುದರಿಂದ, ಆ ತ್ಯಾಗದಲ್ಲಿ ನಿಜವಾಗಿ ಆನಂದವಿರಬೇಕು. ಅದರ ಬದಲಾಗಿ ನಾವು ಸ್ವೀಕರಿಸಿದ್ದು ಪರಿಣಾಮಕಾರಿಯಾಗಿದೆಯೇ ಇಲ್ಲವೇ ಎಂಬುದು ತೀರ ಬೇರೆ ಪ್ರಶ್ನೆ. ಇಂಥ ಹೊಸದನ್ನು ಸುಧಾರಿಸಿ ಸರಿಮಾಡಿಕೊಳ್ಳುವುದರ ಕಡೆಗೆ ನಿಮ್ಮ ದೃಷ್ಟಿಯಿರಬೇಕೇ ವಿನಾ ಪ್ರತ್ಯಕ್ಷ ಜ್ಞಾನ ಮತ್ತು ಅನುಭವಗಳ ಮೂಲಕ ಈ ಮೊದಲು ವಿಘ್ನಾಕಾರಿಯೆಂದು ತ್ಯಜಿಸಿದ ಸಂಸ್ಥೆಗಳಿಗೆ ಮರಳುವುದರಲ್ಲಿ ಜಾಣತನವಿಲ್ಲ. ಅದರಂತೆಯೇ ವಿದೇಶೀ ಅಭ್ಯಾಸದ ಮೋಹ. ಅ–ಸಹಕಾರವೆಂದರೆ, ಭಾರತೀಯರ ದೃಷ್ಟಿಯಿಂದ ಒಳ್ಳೆಯದೆನಿಸಿದ್ದೆಲ್ಲರ ಕೂಡ ಸಹಕರಿಸುವುದೇ ಆಗಿದೆ. ಇದನ್ನು ನಾವು ಬರ್ಲಿನ್‌ನಲ್ಲಿದ್ದು ದೊರಕಿಸಲಾರೆವು. ನಮ್ಮ ಪ್ರಯೋಗಗಳೆಲ್ಲ ಭಾರತದಲ್ಲಿಯೇ ನಡೆಯಬೇಕು.

–ಯಂಗ್ ಇಂಡಿಯಾ, 1926

ಸಂಖ್ಯಾಬಲ

1921 ರಿಂದ 1926! ಎಂಥ ಅಂತರ !! ನಾನು ವಿಷಣ್ಣವಾಗಿ ಈ ಮಾತನ್ನು ಹೇಳುತ್ತಿದ್ದೇನೆಂದು ನೀವು ತಿಳಿಯಬೇಡಿರಿ. ನಾವು ಇನ್ನು ಹಿಂತಿರುಗಿ ಹೋಗುವುದಿಲ್ಲ. ನಮ್ಮ ದೇಶವು ಹಿಂತಿರುಗಿ ಹೋಗದು. ನಾವು ಸ್ವರಾಜ್ಯದ ಹತ್ತಿರ ಐದು ವರುಷ ಸಮೀಪಕ್ಕೆ ಹೋಗಿದ್ದೇವೆ. ಇದರ ಬಗ್ಗೆ ಯಾವ ಸಂಶಯವೂ ಇಲ್ಲ. ಅರ್ಪಣಭಾವದಿಂದ ವಿನಮ್ರವಾಗಿ ಮಾಡಿದ ಯಾವ ಸುಪ್ರಯತ್ನವೂ ವ್ಯರ್ಥವಾಗಲಾರದು. ಮನುಷ್ಯನ ಯಶಸ್ಸು ಇರುವುದು ಇಂಥ ವಿನಮ್ರವಾದ ಪ್ರಯತ್ನದಲ್ಲಿ ಮಾತ್ರ: ಭವಿಷ್ಯವು ಆ ಪರಮಾತ್ಮನನ್ನೇ ಕೂಡಿದೆ.

ಸಂಖ್ಯಾಬಲವೆಂದರೆ ಅಂಜುಬುರುಕರ ಉತ್ಸಾಹ. ಆತ್ಮಶಕ್ತಿ ಸ್ಥೈರ್ಯವುಳ್ಳವರು ಹೋರಾಡುವುದರಲ್ಲಿಯೇ ಆನಂದ ಪಡೆಯುತ್ತಾರೆ. ನೀವೆಲ್ಲ ಇಲ್ಲಿರುವುದು ಇಂಥ ಆತ್ಮಸ್ಥೈರ್ಯವನ್ನು ಪಡೆಯುವುದಕ್ಕಾಗಿಯೇ. ನೀವು ಒಬ್ಬರೇ ಇರಲಿ; ಹತ್ತು ಜನರೇ ಇರಲಿ, ಇದೇ ನಿಜವಾದ ಸಾಹಸವಾಗಿದೆಯೇ ಹೊರತು ಉಳಿದುದೆಲ್ಲ ಜೊಳ್ಳು. ಈ ಆತ್ಮಸ್ಥೈರ್ಯವು ಬರಬೇಕಾದರೆ, ಸ್ವಾರ್ಥ ತ್ಯಾಗ, ದೃಢತೆ, ಶ್ರದ್ಧೆ ಮತ್ತು ವಿನಮ್ರ ಬುದ್ಧಿಯಿಲ್ಲದೆ ಬರಲಾರದು.

–ಯಂಗ್ ಇಂಡಿಯಾ, 1926
(ಗಾಂಧೀಜಿ ಅವರ ಭಾಷಣದ ಆಯ್ದ ಭಾಗ)

(ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಭಾಷಣ ಮಾಡುವಾಗ ಗಾಂಧೀಜಿ ಸಂಖ್ಯಾ ಬಲಕ್ಕಿಂತಲೂ ಗುಣದ ಬಲವೇ ಹೆಚ್ಚಿನದೆಂದು ಅನೇಕ ಸಲ ಹೇಳಿದರು. 1926ರ ಅಹಮದಾಬಾದಿನ ಗುಜರಾಥ ಮಹಾ ವಿದ್ಯಾಲಯದಲ್ಲಿ ಹೀಗೆ ಹೇಳಿದರು)

ಶಿಕ್ಷಣವೆಂದರೆ ಬರಿಯ ಇಟ್ಟಿಗೆ-ಗಚ್ಚಲ್ಲ. ಶಿಕ್ಷಣವೆಂದರೆ ಇಂಥ ಸಂಸ್ಥೆಯನ್ನು ದಿನ-ದಿನಕ್ಕೆ ನಿರ್ಮಾಣ ಮಾಡುತ್ತಿರುವ ನಿಜವಾದ ವಿದ್ಯಾರ್ಥಿ-ವಿದ್ಯಾರ್ಥಿನಿಯರು. ಶಿಲ್ಪಕಲೆಯ ದೃಷ್ಟಿಯಿಂದ ಪರಿಪೂರ್ಣವಿದ್ದು ಶಿಕ್ಷಣ ಸಂಸ್ಥೆಗಳೆಂದು ಕರೆಸಿಕೊಳ್ಳಲ್ಪಡುತ್ತಿರುವ ಅನೇಕ ದೊಡ್ಡ ದೊಡ್ಡ ಕಟ್ಟಡಗಳನ್ನು ನಾನು ನೋಡಿದ್ದೇನೆ. ಆದರೆ ಅವು ಬರಿಯ ಬಿಳಿಯ ಸಮಾಧಿಗಳು. ತದ್ವಿರುದ್ಧ, ತಮ್ಮ ನಿತ್ಯದ ಬದುಕಿನ ಸಲುವಾಗಿ ಪ್ರತಿ ದಿನವೂ ಹೋರಾಡುತ್ತಿರುವ ಹಲವು ಸಂಸ್ಥೆಗಳನ್ನೂ ನೋಡಿದ್ದೇನೆ. ತಮ್ಮ ಈ ಬಡತನದ ನ್ಯೂನತೆಯ ಮೂಲಕವೇ ಇಂಥ ಸಂಸ್ಥೆಗಳು ಪ್ರತಿದಿನ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುತ್ತಿದೆ. ಇಡೀ ಮಾನವೀಯತೆಯೇ ಈವರೆಗೆ ಕಂಡಿದ್ದ ಅತಿ ಶ್ರೇಷ್ಠ ಬೋಧಕರಲ್ಲಿ ಒಬ್ಬನಾದ ವ್ಯಕ್ತಿ. ನಿಮ್ಮ ಹೃದಯ ಸಿಂಹಾಸನದಲ್ಲಿ ಏಕಮೇವ ಮಹಾಸಾಮ್ರಾಜ್ಞನೆಂದು ನೀವು ಅಧಿಷ್ಠಾಪಿಸಿದ ಹಿರಿಯ ವ್ಯಕ್ತಿಯಾದ ಭಗವಾನ್ ಬುದ್ಧದೇವನು ತನ್ನ ಸಂದೇಶವನ್ನು ಯಾವ ಮಾನವ ನಿರ್ಮಿತವಾದ ಕಟ್ಟಡದಲ್ಲಿ ಕುಳಿತು ಸಾರಲಿಲ್ಲ. ಮಹಾ ವೈಭವಶಾಲಿಯಾದ ವೃಕ್ಷದ ತಣ್ಣೆಳಲಲ್ಲಿ ಕುಳಿತು ಅವನು ಸಾರಿದ. ಆದ್ದರಿಂದ ಇಂಥ ಮಹಾವಿದ್ಯಾಲಯದ ಉದ್ದೇಶವೂ ಇಂಥ ಶಿಕ್ಷಣವನ್ನೇ ಕೊಡುವುದಾಗಿರಬೇಕೆಂದೂ ಮತ್ತು ಈ ಶಿಕ್ಷಣವು ಸಿಂಹಳ ದೇಶದ ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಗೆ ಲಭ್ಯವಾಗಿರಬೇಕೆಂದೂ ನಾನು ಕೇಳಿಕೊಳ್ಳಬೇಕಾಗಿದೆ.

ಸರಕಾರೀ ಶಾಲೆ ಕಾಲೇಜುಗಳ ಕೂಡ ನಿಮ್ಮ ಸಂಸ್ಥೆಗಳನ್ನು ಹೋಲಿಸಿ ನೋಡಿದರೆ ನಿಮಗೆ ನಿರುತ್ಸಾಹವಾಗದಿರದು. ಎರಡೂ ಬೇರೆ ಬೇರೆ ಬಗೆಯವು. ಜನರ ಹಣದಿಂದ ನಡೆಸಲ್ಪಟ್ಟ ಸರಕಾರೀ ಸಂಸ್ಥೆಗಳಿರುವ ದೊಡ್ಡ ದೊಡ್ಡ ಅರಮನೆಯಂಥ ಕಟ್ಟಡಗಳಾಗಲೀ, ಇಲ್ಲವೆ ದೊಡ್ಡ ದೊಡ್ಡ ಪಗಾರದ ಹತ್ತಾರು ಪ್ರಾಧ್ಯಾಪಕ ಶಿಕ್ಷಕರಾಗಲೀ ನಿಮಗೆ ಈ ಸಂಸ್ಥೆಯಲ್ಲಿ ಸಿಗರು. ನಿಮಗೆ ಅಷ್ಟು ಹಣದ ಅನುಕೂಲವಿದ್ದರೂ ಈ ವಿಷಯಗಳು ನಿಮಗೆ ದೊರಕವು. ಪ್ರಾಮುಖ್ಯವಾಗಿ ಕಾರಕೂನರನ್ನು ಸಿದ್ಧ ಮಾಡುವುದು ಮತ್ತು ವಿದೇಶಿಯವಾದ ಸರಕಾರವು ತನ್ನ ಆಡಳಿತವನ್ನು ನಡೆಸಿಕೊಂಡು ಹೋಗುವಲ್ಲಿ ಸಹಾಯಕರಾಗುವಂಥ ಜನರನ್ನು ಸಿದ್ಧಗೊಳಿಸುವುದು ಇವೇ ಸರಕಾರೀ ಸಂಸ್ಥೆಗಳ ಉದ್ದೇಶವಾಗಿವೆ. ರಾಷ್ಟ್ರೀಯ ಸಂಸ್ಥೆಗಳ ಉದ್ದೇಶವು ಇದಕ್ಕೆ ತೀರ ವಿರುದ್ಧವಾದದ್ದಾಗಿದೆ. ಇವುಗಳ ಉದ್ದೇಶವು

ಕಾರಕೂನರನ್ನು ಸಿದ್ಧ ಮಾಡುವುದಲ್ಲ. ಆದರೆ, ಎಷ್ಟೇ ಗಂಡಾಂತರವುಂಟಾದರೂ ವಿದೇಶೀಯ ಆಳ್ವಿಕೆಯನ್ನು ಆದಷ್ಟು ಶೀಘ್ರವಾಗಿ ಮುಕ್ತಾಯಗೊಳಿಸಬಲ್ಲ ದೃಢ ನಿಶ್ಚಯದ ಜನರನ್ನು ಸಿದ್ಧ ಮಾಡುವುದಾಗಿದೆ. ಸರಕಾರೀ ಸಂಸ್ಥೆಗಳು ಕೈ ತುಂಬ ಹಣ ಗಳಿಸಬಲ್ಲ ಉದ್ಯೋಗ ದಂಧೆಗಳನ್ನು ತೋರಿಸಿದರೆ, ರಾಷ್ಟ್ರೀಯ ಸಂಸ್ಥೆಗಳು ಪೂರ್ಣ ಸೇವೆಗಾಗಿ ಬೇಕಾಗುವಷ್ಟು ಮಾತ್ರ ಜೀವನಾಂಶವನ್ನು ದೊರಕಿಸಿಕೊಡಬಲ್ಲವು. ಮ್ಯಾಕ್ಸ್‌ಮುಲ್ಲರ್ ಅವರು ಹೇಳಿದ ಹಾಗೆ ಭಾರತೀಯರ ಪ್ರಕಾರ ಜೀವನವೆಂದರೆ ಒಂದು ಕರ್ತವ್ಯ. ಸರಿಯಾಗಿ ನಿರ್ವಹಿಸಿದ ಕರ್ತವ್ಯದ ಜೊತೆಗೆ ಹಕ್ಕು ಬಾಧ್ಯತೆಗಳು ಬರುತ್ತಿದ್ದರೆ, ಕೇವಲ ಹಕ್ಕು ಬಾಧ್ಯತೆಗಳ ಮೇಲೆಯೇ ಕಣ್ಣಿಟ್ಟು ಕೆಲಸ ಮಾಡುವ ಮನುಷ್ಯನು ತನ್ನ ಕರ್ತವ್ಯವನ್ನು ಹರಕು ಮುರುಕಾಗಿ ಮಾಡುವನು. ಆದ್ದರಿಂದ ಸೇವೆಯೇ ಮಾತ್ರ ನಿಮ್ಮ ಹಕ್ಕು ಬಾಧ್ಯತೆಯಾಗಿದೆಯೆಂಬುದನ್ನು ಲಕ್ಷ್ಯದಲ್ಲಿಡಿರಿ. ನಿಮ್ಮಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆಯಿದೆಯೆಂಬ ಮಾತು ಅನೇಕ ಸಲ ನೀವೇ ಮನಸ್ಸಿನಲ್ಲಿ ಯಾವಾಗಲೂ ಪ್ರತಿಧ್ವನಿಸುತ್ತಿದೆಯೆಂಬುದು ನನಗೆ ಗೊತ್ತಿದೆ. ನಿಮ್ಮಲ್ಲಿ ಅನೇಕರು ನಿಮ್ಮ ಹಳೆಯ ಸಂಸ್ಥೆಗಳನ್ನು ಬಿಟ್ಟು ಬಂದದ್ದು ಜಾಣತನದ ಮಾತಾಗಲಿಲ್ಲವೆಂದು ತಿಳಿದು ತಿರುಗಿ ಅಲ್ಲಿಗೆ ಹೋಗಬೇಕೆಂಬ ವಿಚಾರವನ್ನು ಗೌಪ್ಯವಾಗಿಯಾದರೂ ಮಾಡುತ್ತಿರುವಿರೆಂಬ ಮಾತೂ ನನಗೆ ಗೊತ್ತಿದೆ. ಇದಕ್ಕೆ ನಾನು ಹೇಳುವುದಿಷ್ಟೆ. ಯಾವುದೋ ದೊಡ್ಡ ಕಾರ್ಯದಲ್ಲಿ ಹೋರಾಟಗಾರರ ಸಂಖ್ಯೆ ನಿರ್ಣಾಯಕವಲ್ಲ. ಆದರೆ ಅವರಲ್ಲಿರುವ ಸತ್ವ ಎಂಥ ಬಗೆಯದಿದೆಯೆಂಬುದು ನಿರ್ಣಾಯಕ ಅಂಶವಾಗುತ್ತದೆ. ಪ್ರಪಂಚದ ಮಹಾ ಮಹಾ ವ್ಯಕ್ತಿಗಳೆಲ್ಲ ಏಕಾಕಿಯಾಗಿಯೇ ಹೋರಾಡಿದ್ದಾರೆ. ಮಹಾ ಮಹಾ ಪ್ರವಾದಿಗಳ ದೃಷ್ಟಾಂತಗಳನ್ನೇ ತೆಗೆದುಕೊಳ್ಳಿರಿ–ಝೊರೊಯಾಸ್ಟರ್, ಬುದ್ಧ, ಜೀಸಸ್, ಮಹಮ್ಮದ್ ಇವರೆಲ್ಲರೂ ಮತ್ತು ನಾನು ಹತ್ತಾರು ಹೆಸರುಗಳನ್ನು ಹೇಳಬಹುದಾದ ಅನೇಕರೂ ಏಕಾ ಏಕಿಯಾಗಿಯೇ ಹೋರಾಡಿದ್ದಾರೆ. ಆದರೆ, ಅವರಲ್ಲಿ ತಮ್ಮ ಬಗ್ಗೆಯೂ ಮತ್ತು ತಮ್ಮ ಪರಮಾತ್ಮನ ಬಗ್ಗೆಯೂ ಸಜೀವವಾದ ನಿಷ್ಠೆಯಿದ್ದಿತು. ದೇವರು ತಮ್ಮ ಕಡೆಗೆ ಇದ್ದಾನೆಂದು ಅವರು ನಂಬಿದ್ದರಿಂದಲೇ ಅವರಿಗೆ ಏಕಾಕಿ ಎನಿಸಲಿಲ್ಲ. ಅಬುಬಕರನ ಮಾತು ನಿಮಗೆ ಗೊತ್ತಿರಬಹುದು. ಮಹಮ್ಮದ್ ಪೈಗಂಬರರೂ ಅವನೂ ವೈರಿಗಳಿಂದ ಸುತ್ತುವರಿಯಲ್ಪಟ್ಟು ಓಡಿ ಹೋಗುತ್ತಿರುವಾಗ, ತಮ್ಮ ಭವಿತವ್ಯದ ಬಗ್ಗೆ ಗಾಬರಿಯಾದ ಬಕರ್ ಪೈಗಂಬರರಿಗೆ ಹೇಳಿದ "ಪ್ರಭು, ನಮ್ಮನ್ನು ಬೆನ್ನಟ್ಟಿ ಬರುತ್ತಿರುವ ವೈರಿಗಳ ಮಹಾಸಂಖ್ಯೆಯನ್ನು ನೋಡಿರಿ. ಇಂಥ ದೊಡ್ಡ ವಿಪತ್ತನ್ನು ನಾವಿಬ್ಬರೇ ಎದುರಿಸುವುದಾದರೂ ಹೇಗೆ?" ಒಂದು ಕ್ಷಣ ಸಹ ವಿಚಾರ ಮಾಡದೆ ಪೈಗಂಬರರು ತಮ್ಮ ನಿಷ್ಠ ಅನುಯಾಯಿಗೆ ಹೇಳಿದರು "ಇಲ್ಲ; ಅಬುಬಕರ್, ನಾವು ಮೂವರಿದ್ದೇವೆ.

ಯಾಕೆಂದರೆ, ಪರಮಾತ್ಮನು ನಮ್ಮ ಕಡೆಗಿದ್ದಾನೆ." ಅಥವಾ ವಿಭೀಷಣ ಮತ್ತು ಪ್ರಹ್ಲಾದರ ಅದಮ್ಯವಾದ ನಿಷ್ಠೆಯನ್ನು ನೋಡಿರಿ. ನಿಮ್ಮಲ್ಲಿಯೂ ಅಂತಹುದೇ ಆದ ಜಾಗೃತ ಆತ್ಮಶ್ರದ್ಧೆಯೂ ಪರಮಾತ್ಮ ನಿಷ್ಠೆಯೂ ಇರಬೇಕೆಂದು ನಾನು ಹೇಳುತ್ತೇನೆ.

–ಯಂಗ್ ಇಂಡಿಯಾ, 1929

ನಮ್ಮ ರಾಷ್ಟ್ರೀಯ ಸಂಸ್ಥೆಗಳಲ್ಲಿಯ ವಿದ್ಯಾರ್ಥಿಗಳು ಕೆಲವರೇ ಇದ್ದರೂ ಸಹ, ಅವರಲ್ಲಿ ನಿಜವಾದ ತ್ಯಾಗ ಮತ್ತು ಸೇವಾ ಬುದ್ಧಿಗಳ ಪ್ರೇರಣೆಯಿದ್ದು, ತಮ್ಮ ಆದರ್ಶಗಳಲ್ಲಿ ಚೈತನ್ಯ ಪೂರ್ಣವಾದ ವಿಶ್ವಾಸವಿದ್ದರೆ, ಸರಕಾರೀ ಸಂಸ್ಥೆಗಳಲ್ಲಿಯ ಎಲ್ಲ ವಿದ್ಯಾರ್ಥಿಗಳನ್ನು ಕೂಡಿಸಿದರೂ ಆಗದಷ್ಟು ಸೇವೆಯನ್ನು ಈ ವಿದ್ಯಾರ್ಥಿಗಳು ಮಾಡಬಲ್ಲರೆಂಬ ದೃಢ ವಿಶ್ವಾಸವು ನನಗಿದೆ. ಗಾತ್ರಕ್ಕಿಂತ ಗುಣಕ್ಕೆ ಹೆಚ್ಚಿನ ಬೆಲೆಯೆಂಬ ಮಾತು ವ್ಯವಹಾರದಲ್ಲಿಯೂ ಸತ್ಯಪೂರ್ಣವಾದದ್ದರಿಂದ ಅದು ಒಳ್ಳೆಯ ತತ್ತ್ವವೇ ಆಗಿದೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೀಗೆ ಹೇಳಬಲ್ಲೆ. ವ್ಯವಹಾರದಲ್ಲಿ ಪ್ರಮಾಣ ಮಾಡಿ ತೋರಿಸಲಾಗದ್ದು. ತತ್ತ್ವದಲ್ಲಿಯೂ ಅಭಾಸವಾಗಿಯೇ ಇರುತ್ತದೆ. ಪೃಥ್ವಿಯು ಚೆಂಡಿನ ಹಾಗೆ ದುಂಡಾಗಿಯೆಂದೂ ಮತ್ತು ಅದು ತನ್ನ ಅಕ್ಷದ ಸುತ್ತಲೂ ತಿರುಗುತ್ತಿದೆಯೆಂದೂ ಗ್ಯಾಲಿಲಿಯೋ ಮೊದಲ ಸಲ ಹೇಳಿದಾಗ, ಅವಾಸ್ತವವಾದಿ, ಕನಸಿಗ ಎಂದು ಜನ ಅವನನ್ನು ಗೇಲಿ ಮಾಡಿತು. ಹೀಗಳೆಯಿತು. ಆದರೆ ಇಂದು ಸತ್ಯ ಹೇಳಿದವನು ಗ್ಯಾಲಿಲಿಯೋನೇ ಆಗಿದ್ದಾನೆಯೇ ಹೊರತು, ಪೂರಾ ತಟ್ಟೆಯ ಹಾಗೆ ಸಪಾಟಾಗಿ ಸ್ಥಿರವಾಗಿದೆಯೆಂದು ನಂಬಿದ್ದ ಅವನ ವಿರೋಧಿಗಳೇ ಅಜ್ಞಾನದ ಸಾಮ್ರಾಜ್ಯದಲ್ಲಿ ವಾಸಿಸುತ್ತಿದ್ದರೆಂಬುದನ್ನು ನಾವೆಲ್ಲ ಬಲ್ಲೆವು.

–ಯಂಗ್ ಇಂಡಿಯಾ, 1929

ಶಾಲೆ–ಕಾಲೇಜುಗಳೆಂದರೆ ಪವಿತ್ರ ಮಂದಿರಗಳಿದ್ದ ಹಾಗೆ. ಅಲ್ಲಿ ಹೀನ ಇಲ್ಲವೆ ಅಪವಿತ್ರವಾದುದು ಯಾವುದೂ ನಡೆಯಲಾಗದು. ಶಾಲೆ–ಕಾಲೇಜುಗಳೆಂದರೆ ಚಾರಿತ್ರ್ಯವನ್ನು ನಿರ್ಮಾಣ ಮಾಡುವ ಕಾರಖಾನೆಗಳಿದ್ದ ಹಾಗೆ. ಒಳ್ಳೆಯ ನಾಗರಿಕರಾಗಲಿ ಎಂದು ತಾಯಿ ತಂದೆಗಳು ತಮ್ಮ ಮಕ್ಕಳನ್ನು ಅಲ್ಲಿ ಕಳಿಸುತ್ತಾರೆ. ಯಾವ ಬೇಕಾದ ವಂಚನೆಯನ್ನೂ ಮಾಡಬಲ್ಲ ಭಾವೀ ಕೊಲೆಗಡುಕನೆಂದು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಸಂಶಯದಿಂದ ನೋಡುವಂಥ ಪ್ರಸಂಗವು ಬರುವುದಾದರೆ, ಅದು ನಿಜವಾಗಿಯೂ ನಮ್ಮ ದೇಶದ ದುಃಖದ ದಿನ.

ಯಂಗ್ ಇಂಡಿಯಾ, 1931
(ಗಾಂಧೀಜಿ ಅವರು ಕ್ಯಾಂಡಿಯ ಧರ್ಮರಾಜ ಕಾಲೇಜಿನಲ್ಲಿ
ಮಾಡಿದ ಭಾಷಣದ ಆಯ್ದ ಭಾಗ)

ಸತ್ಯ ಮತ್ತು ಪಾವಿತ್ರ್ಯದ ತಳಹದಿಯ ಮೇಲೆ ನಿರ್ಮಿತವಾಗಿರದಿದ್ದರೆ, ನಿಮ್ಮ ಶಿಕ್ಷಣವು ತುಂಬಾ ನಿರರ್ಥಕವಾದದ್ದು. ನೀವು ವಿದ್ಯಾರ್ಥಿಗಳು, ನಿಮ್ಮ ನಿಮ್ಮ ವೈಯಕ್ತಿಕ ಜೀವನದ ಪರಿಪೂರ್ಣ ಪಂಡಿತರಾದರೂ, ನಷ್ಟರಾದಂತೆಯೇ ಎಂದು ನಾವು ಭಾವಿಸುತ್ತೇನೆ.

(ಸಿಲೋನಿನಲ್ಲಿ ಗಾಂಧೀಜಿ, ಪು. 31)
(ಗಾಂಧೀಜಿ ಅವರು ಕೊಲಂಬೋದ ಝುಹೀರಾ ಕಾಲೇಜಿನಲ್ಲಿ ಮಾಡಿದ ಭಾಷಣದ ಆಯ್ದ ಭಾಗ)

ಪವಿತ್ರವಾದ ಚಾರಿತ್ರ್ಯದ ತಳಹದಿಯ ಮೇಲೆ ನಿರ್ಮಿತವಾಗಿರದಿದ್ದರೆ, ನೀವು ಈ ಮಹಾವಿದ್ಯಾಲಯದಲ್ಲಿ ದೊರಕಿಸಿದ ಶಿಕ್ಷಣವೆಲ್ಲವೂ ನಿರರ್ಥಕವಾದಂತೆಯೆ, ನಿಮ್ಮ ಮಹಾವಿದ್ಯಾಲಯದ ವಾರ್ಷಿಕ ಸಂಚಿಕೆಗಳನ್ನು ಓದುತ್ತಿದ್ದಾಗ, ಇಷ್ಟು ಉತ್ಸಾಹಪೂರ್ಣವಾಗಿ ಇಲ್ಲಿ ನಡೆದ ಕೆಲಸದ ಬಗ್ಗೆಯೂ ಸ್ವಲ್ಪವೇ ಕಾಲಾವಧಿಯಲ್ಲಿ ಇಷ್ಟು ಅದ್ಭುತವಾಗಿ ಸಾಧಿಸಲಾದ ಪ್ರಗತಿಯ ಬಗ್ಗೆಯೂ ನನಗೆ ಅಭಿಮಾನವೆನಿಸಿತು. ಆದರೆ, ನಿಮ್ಮ ವರದಿಯನ್ನು ಓದಿದಂತೆ ನಿಧಾನವಾಗಿ ಕಲ್ಲಿನ ಮೇಲೆ ಕಲ್ಲನ್ನಿಟ್ಟು ಮಂದಿರವನ್ನು ನಿರ್ಮಿಸಿ ಆನಂದಾಭಿಮಾನಗಳಿಂದ ಅದನ್ನು ನಾನು ಪುನಃ ನೋಡುವಂತಾಗಿದ್ದರೆ ಎಷ್ಟು ಒಳ್ಳೆಯದಾಗಿರುತ್ತಿತ್ತೆಂದು ನನಗೆನಿಸಿತು. ಆದರೆ, ಕಲ್ಲು-ಗಚ್ಚುಗಳಿಂದ ಚಾರಿತ್ರ್ಯವನ್ನು ಕಟ್ಟಲಾಗದು. ನಿಮ್ಮ ಕೈಗಳಿಂದಲ್ಲದೆ ಬೇರೆ ಯಾರ ಕೈಗಳಿಂದಲೂ ಅದನ್ನು ಕಟ್ಟಲಾಗದು. ಪ್ರಿನ್ಸಿಪಾಲರು ಮತ್ತು ಪ್ರಾಧ್ಯಾಪಕರು ಪುಸ್ತಕಗಳ ಪುಟಗಳಿಂದ ಚಾರಿತ್ರ್ಯವನ್ನು ಎತ್ತಿ ಕೊಡಲಾರರು. ಚಾರಿತ್ರ್ಯ ನಿರ್ಮಾಣವು ಅವರ ಜೀವನದಿಂದಲೇ ಬರುತ್ತದೆ. ಹೆಚ್ಚು ಸತ್ವಯುತವಾಗಿ ನಿಮ್ಮ ಒಳಗಿನಿಂದಲೇ ಚಾರಿತ್ರ್ಯವು ಹೇಳಬೇಕೆಂದರೆ ಬರಬೇಕು.

(ಗಾಂಧೀಜಿ ಅವರು ಗಾಲೆಯ ಮಹಿಂದ ಮಹಾವಿದ್ಯಾಲಯದಲ್ಲಿ ಮಾಡಿದ ಭಾಷಣದ ಆಯ್ದ ಭಾಗ)
(ಹಿಂಗೋರಾಣಿ, ಪು. 232)

ವಿದ್ಯಾರ್ಥಿಗಳು ಮತ್ತು ಧಾರ್ಮಿಕ ಶಿಕ್ಷಣ

ಧರ್ಮದೃಷ್ಟಿ

ನಮ್ಮ ಪೂರ್ವಜರು ಹೇಳಿದ್ದೆಲ್ಲ ಬರಿಯ ಮೂಢನಂಬಿಕೆಗಳ ಕಂತೆಯೆಂದು ಪೌರ್ವಾತ್ಯರಾದ ನಾವು ಅನೇಕ ಸಲ ಅವಸರದಿಂದ ನಂಬುತ್ತೇವೆ. ಆದರೆ ಅಗಾಧವಾದ ಪೌರ್ವಾತ್ಯ ಸಂಪತ್ತಿನ ಅನುಭವದಿಂದ ನಾನು ಹೇಳಬಯಸುವುದೇನೆಂದರೆ ನಮ್ಮ ಹಳೆಯ ಪರಂಪರೆಯಲ್ಲಿ ಮೂಢನಂಬಿಕೆಯುಳ್ಳದ್ದು ಎಷ್ಟೋ ಮಟ್ಟಿಗೆ ಇರಬಹುದಾದರೂ, ಮೂಢನಂಬಿಕೆಯಿಲ್ಲದ್ದು ಅದಕ್ಕೂ ಹೆಚ್ಚಾಗಿ ಇದೆಯೆಂದೂ ಮತ್ತು ಅದನ್ನು ಸರಿಯಾಗಿ ತಿಳಿದುಕೊಂಡು ನಾವು ಅನುಷ್ಠಾನದಲ್ಲಿ ತಂದರೆ ಆ ಪರಂಪರೆ ಜೀವನದಾಯಕವಾಗಿದೆಯಷ್ಟೇ ಅಲ್ಲದೆ ಜೀವನವನ್ನು ಉದಾತ್ತಗೊಳಿಸುವುದೆಂಬುದನ್ನೂ ನಾನು ಅರಿತಿದ್ದೇನೆ. ಆದ್ದರಿಂದ ಪಾಶ್ಚಿಮಾತ್ಯ ಜಾದುಗಾರಿಕೆಯ ಥಳಕಿಗೆ ನಾವು ಮರುಳಾಗುವುದು ಬೇಡ.

ಧರ್ಮದ ಜೀವನವನ್ನು ನಡೆಸುವುದರಿಂದಲೇ ಧಾರ್ಮಿಕ ಶಿಕ್ಷಣವು ಕೊಡಲ್ಪಡುತ್ತಿದೆಯೆಂಬುದನ್ನು ನಾನು ಕಂಡಿದ್ದೇನೆ. ಗುರುಗಳು ಹೇಳಿಕೊಡುವ ಪುಸ್ತಕಗಳಿಗಿಂತಲೂ ಇಲ್ಲವೆ ಅವರ ಬಾಯಿಮಾತಿನ ಭಾಷಣಗಳಿಗಿಂತಲೂ ಆ ಗುರುಗಳ ಜೀವನಕ್ರಮದ ಮೂಲಕವಾಗಿಯೇ ವಿದ್ಯಾರ್ಥಿಗಳು ಹೆಚ್ಚಾಗಿ ಗ್ರಹಿಸುತ್ತಾರೆಂಬುದನ್ನು ನಾನು ಅರಿತಿದ್ದೇನೆ. ತಮ್ಮ ಗುರುಗಳ ವಿಚಾರಗಳನ್ನು ಅನಾಯಾಸವಾಗಿಯೇ ಅರಿತುಕೊಳ್ಳುವ ಸೂಕ್ಷ್ಮವಾದ ಶಕ್ತಿಯು ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಇದೆಯೆಂಬುದನ್ನು ಕಂಡು ನನಗೆ ಆನಂದವಾಗಿದೆ. ಬಾಯಿಂದ ಒಂದನ್ನು ಕಲಿಸಿ, ಮನಸ್ಸಿನಲ್ಲಿ ಮತ್ತೊಂದನ್ನು ನೆನೆಯುವ ಶಿಕ್ಷಕನಿಗೆ ಧಿಕ್ಕಾರವಿರಲಿ!

– ಸಿಲೋನಿನಲ್ಲಿ ಗಾಂಧೀಜಿ, 1927

ಧಾರ್ಮಿಕ ಶಿಕ್ಷಣದ ಅಭ್ಯಾಸಕ್ರಮದಲ್ಲಿ ಆ ವ್ಯಕ್ತಿಯ ಧರ್ಮವನ್ನುಳಿದು ಉಳಿದ ಮಹತ್ವತತ್ವಗಳ ಅಭ್ಯಾಸದ ಅನುಕೂಲತೆ ಇರಬೇಕು. ಇದಕ್ಕಾಗಿ, ಪ್ರಪಂಚದ ಮಹಾಮಹಾ ಧರ್ಮತತ್ವಗಳನ್ನು ಪೂಜ್ಯ ಭಾವನೆ ಮತ್ತು ಹೃದಯವೈಶಾಲ್ಯದಿಂದ ತಿಳಿದುಕೊಳ್ಳುವಂಥ ಮತ್ತು ರಸಗ್ರಹಣ ಮಾಡುವಂಥ ತರಬೇತನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಡಬೇಕು. ತನ್ನ ಧರ್ಮವನ್ನಲ್ಲದೆ, ಈ ರೀತಿ ಇತರ ಧರ್ಮತತ್ವಗಳ ಅಭ್ಯಾಸವನ್ನು ವಿದ್ಯಾರ್ಥಿಯು ಮಾಡುವುದರಿಂದ ಎಲ್ಲ ಧರ್ಮಗಳ ಮೂಲ ಭೂಮಿಕೆಯು ಯಾವ ರೀತಿ ಒಂದೇ ಆಗಿದೆಯೆಂಬುದನ್ನೂ ಮತ್ತು ಮತಪಂಥಗಳ ದೂಳಿಯನ್ನು ದಾಟಿ ನಿಂತ ಪರಿಪೂರ್ಣ ಮತ್ತು ವಿಶ್ವಸತ್ಯದ ಸ್ವರೂಪವನ್ನೂ ಅಭ್ಯಸಿಸಿ ಕಾಣಬಲ್ಲನು. ಪೂಜ್ಯಭಾವನೆಯಿಂದ ಬೇರೆ ಧರ್ಮಗಳ ಅಭ್ಯಾಸ ಮಾಡುವುದರಿಂದ ಸ್ವಧರ್ಮದಲ್ಲಿಯ ನಿಷ್ಠೆಯು ಚಲವಿಚಲಿತವಾಗುತ್ತದೆಂದಾಗಲೀ ನಿಶ್ಶಕ್ತವಾಗುತ್ತದೆಂದಾಗಲೀ ಹೆದರುವ ಕಾರಣವಿಲ್ಲ. ಈ ದೃಷ್ಟಿಯಲ್ಲಿ, ಧರ್ಮ ಮತ್ತು ಸಂಸ್ಕೃತಿಗಳು ಒಂದೇ ಬಗೆಯಾಗಿವೆ. ಯಾವ ರೀತಿ ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸುವುದೆಂದರೆ, ಇತರ ಸಂಸ್ಕೃತಿಗಳ ಬಗ್ಗೆ ಅನಾದರವೆಂದಾಗದೆ, ಉಳಿದ ಸಂಸ್ಕೃತಿಗಳಲ್ಲಿಯೂ ಒಳ್ಳೆಯದೆಂಬುದನ್ನೆಲ್ಲ ಸ್ವೀಕರಿಸುವುದೆಂದಾಗುತ್ತದೆಯೋ, ಹಾಗೆಯೇ ಧರ್ಮದ ರೀತಿಯಲ್ಲಿಯೂ ಆಗುತ್ತದೆ. ಇಂದಿನ ನಮ್ಮ ಭಯವೆಲ್ಲ ದೇಶದಲ್ಲುಂಟಾದ ಪರಸ್ಪರ ದ್ವೇಷ, ಅಸೂಯೆ, ಅಪನಂಬಿಕೆಗಳ ವಿಷಪೂರಿತ ವಾತಾವರಣದ ಮೂಲಕ ಉಂಟಾದದ್ದು. ಎಲ್ಲಿಯಾದರೂ ನಮ್ಮ ಮತಶ್ರದ್ಧೆಯನ್ನು ಮತ್ತು ನಮ್ಮ ಹಿತಸಂಬಂಧಗಳ ಮತಶ್ರದ್ಧೆಯನ್ನು ಕಳ್ಳತನದಿಂದ ಹೀಗಳೆವರೋ ಎಂಬ ಹೆದರಿಕೆಯ ಕರಾಳರಾತ್ರಿಯಲ್ಲಿಯೇ ನಾವು ಸದಾ ಮುದುಡುತ್ತಿದ್ದೇವೆ. ಉಳಿದ ಧರ್ಮಗಳು ಮತ್ತು ಅವುಗಳ ಅನುಯಾಯಿಗಳ ಬಗ್ಗೆ ನಾವು ಆದರ ಮತ್ತು ಸಹನೆಯನ್ನು ತಾಳಿದರೆ, ಈ ಅನೈಸರ್ಗಿಕ ಸ್ಥಿತಿಯು ತಾನಾಗಿಯೇ ನಿಂತುಹೋಗುತ್ತದೆ.

–ಯಂಗ್ ಇಂಡಿಯಾ, 1920

ವಿದ್ಯಾರ್ಥಿಗಳಲ್ಲಿ ಶ್ರದ್ಧೆಯು ದಿನದಿನಕ್ಕೆ ಕಡಿಮೆಯಾಗುತ್ತಿರುವುದನ್ನು ಕಂಡು ನಿಜವಾಗಿ ನನಗೆ ವ್ಯಥೆ ಎನಿಸುತ್ತದೆ. ನಾವು ಯಾವನಾದರೂ ಹಿಂದೂ ವಿದ್ಯಾರ್ಥಿಗೆ ರಾಮನಾಮವನ್ನು ಜಪಿಸಲು ಹೇಳಿದರೆ, ಅವನು ನನ್ನ ಕಡೆಗೆ ಕೆಕ್ಕರಿಸಿ ನೋಡಿ ಈ ರಾಮನೆಂದರೆ ಯಾರೆಂದು ತನ್ನೊಳಗೇ ಕೇಳಿಕೊಳ್ಳುತ್ತಾನೆ. ನಾನು ಯಾವನಾದರೂ ಮುಸಲ್ಮಾನ ಹುಡುಗನಿಗೆ ಕುರಾನ್‌ನನ್ನು ಓದಬೇಕೆಂತಲೂ ದೇವರಿಗೆ ಹೆದರಬೇಕೆಂತಲೂ ಹೇಳಿದರೆ, ತನಗೆ ಕುರಾನ್‌ನನ್ನು ಓದಲು ಬಾರದೆಂದು ಹೇಳುವನಲ್ಲದೆ ಅವನು ಪಠಿಸುವ 'ಅಲ್ಲಾ'ನ ಹೆಸರು ಬರಿಯ ತುಟಿಯಿಂದ ಮಾತ್ರ

ಬರುತ್ತದೆ. ನಿಜವಾದ ಶಿಕ್ಷಣದ ಪ್ರಥಮ ಸೋಪಾನವೆಂದರೆ ಶುದ್ಧ ಹೃದಯವೇ ಆಗಿದೆಯೆಂದು ನಾನು ಈ ಹುಡುಗರಿಗೆ ಹೇಗೆ ಮನಗಾಣಿಸಿಕೊಡಲಿ? ನಿಮಗೆ ಕೊಡುತ್ತಿರುವ ಶಿಕ್ಷಣವು ನಿಮ್ಮನ್ನು ದೇವರಿಂದ ದೂರ ಒಯ್ಯುತ್ತಿದ್ದರೆ, ಇಂಥ ಶಿಕ್ಷಣವು ನಿಮಗೆ ಯಾವ ರೀತಿ ಜಗತ್ತಿಗೆ ಸಹಾಯಕರಾಗುತ್ತೀರೆಂಬುದನ್ನೂ ನಾನರಿಯೆ. ನಾನು ಜನಸಾಮಾನ್ಯರ ಸೇವೆಯ ಮುಖಾಂತರವಾಗಿಯೇ ಪರಮಾತ್ಮನನ್ನು ಕಾಣುತ್ತಿದ್ದೇನೆಂದು ನೀವು ಸರಿಯಾಗಿಯೇ ಹೇಳಿದಿರಿ. ಯಾಕೆಂದರೆ, ಪರಮಾತ್ಮನು ಸ್ವರ್ಗ-ಪಾತಾಳಗಳಲ್ಲಿರದೆ ನಾವು ಹಿಂದುವೇ ಇರಲಿ; ಬ್ರಾಹ್ಮಣನೇ ಇರಲಿ; ಕ್ಷತ್ರಿಯನೇ ಇರಲಿ; ವೈಶ್ಯನೇ ಇರಲಿ; ಶೂದ್ರ, ಪಂಚಮ, ಮುಸಲ್ಮಾನ, ಪಾರ್ಸಿ, ಕ್ರಿಶ್ಚಿಯನ್-ಯಾರೇ ಇರಲಿ ನಮ್ಮೆಲ್ಲರ ಹೃದಯದಲ್ಲಿಯೇ ಆ ಪರಮಾತ್ಮನು ಇದ್ದಾನೆಂಬುದನ್ನು ನಾನು ಬಲ್ಲೆ.

–ಯಂಗ್ ಇಂಡಿಯಾ, 1927

ವಿದ್ಯಾರ್ಥಿಗಳು ಮತ್ತು ಭಗವದ್ಗೀತೆ

ಪರಿಪೂರ್ಣತೆ ಕೇವಲ ಪರಮಾತ್ಮನ ಗುಣವಾಗಿದ್ದು, ಆ ಸ್ವರೂಪವನ್ನು ವರ್ಣಿಸಲು ಸಾಧ್ಯವಿಲ್ಲ; ವ್ಯಾಖ್ಯಾನ ಮಾಡಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಪರಿಪೂರ್ಣನಾಗಬಲ್ಲನೆಂದು ನಾನು ನಂಬಿದ್ದೇನೆ. ದೇವರು ಪರಿಪೂರ್ಣನಿದ್ದಂತೆಯೇ ನಾವೆಲ್ಲರೂ ಪರಿಪೂರ್ಣರಾಗಲು ಪ್ರಯತ್ನಿಸಬೇಕು. ಅಂತಲೇ ನಾನು ಅತ್ಯಂತ ವಿನಮ್ರನಾಗಿ ಹೇಳುವುದೆಂದರೆ, ವೇದ, ಪುರಾಣ, ಬೈಬಲ್-ಇವೆಲ್ಲವೂ ಪರಮಾತ್ಮನ ಪರಿಪೂರ್ಣವಾಣಿವಾಗಿವೆ. ಅಪರಿಪೂರ್ಣರಾದ ನಾವು ನಮ್ಮ ವಿಕಾರಗಳಿಂದ ಅತ್ತಿತ್ತ ತೂರಾಡುತ್ತೇವೆ. ಪರಮಾತ್ಮನ ಈ ವಾಣಿಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸಹ ನಮಗೆ ದುಸ್ಸಾಧ್ಯವಾಗಿದೆ. ಅಂತಲೇ ಪ್ರತಿಯೊಬ್ಬ ಹಿಂದು, ಮುಸಲ್ಮಾನ್, ಕ್ರಿಶ್ಚಿಯನ್ ಹುಡುಗನಿಗೆ ನಾನು ಹೇಳುವುದೆಂದರೆ-ಯಾರೂ ತಾವು ಬೆಳೆದು ಬಂದ ಪರಂಪರೆಯ ಬೇರನ್ನು ಕಿತ್ತುಹಾಕಕೂಡದು. ಹಿಂದೂ ವಿದ್ಯಾರ್ಥಿಗಳು ಅವಶ್ಯವಾಗಿ ಭಗವದ್ಗೀತೆಯನ್ನು ಅಭ್ಯಸಿಸಬೇಕು. ನಾವು ಇಂದು ಶಾಲಾ ವಿದ್ಯಾರ್ಥಿಗಳಲ್ಲಿ ಕಾಣುವ ಅ-ಪವಿತ್ರ ಭಾವನೆಗಳು, ಜೀವನದ ಮಹತ್ವದ ವಿಷಯಗಳ ಬಗ್ಗೆ ಅವರಲ್ಲಿ ಕಂಡುಬರುವ ನಿರ್ಲಕ್ಷ್ಯ, ಜೀವನದ ಅತಿ ಮಹತ್ತರವಾದ ಮತ್ತು ಮೂಲಭೂತ ವಿಷಯಗಳಲ್ಲಿ ನಮ್ಮ ವಿದ್ಯಾರ್ಥಿಗಳು ತಾಳುವ ಲಘುವೃತ್ತಿ, ಇವೆಲ್ಲವೂ ಈವರೆಗೆ ನಮ್ಮ ವಿದ್ಯಾರ್ಥಿಗಳು ತಮ್ಮ ಪರಂಪರೆಯನ್ನು ಕಿತ್ತೊಗೆದು ಬೆಳೆದು ಬಂದದ್ದಕ್ಕಾಗಿಯೇ ಎಂದು ನನ್ನ ನಂಬುಗೆ.

(ಆಚಾರ್ಯ ಆನಂದ ಶಂಕರ ಧ್ರುವ ಅವರು ಕಾಶಿ ವಿಶ್ವವಿದ್ಯಾಲಯದಲ್ಲಿ ಗಾಂಧೀಜಿಯವರಿಗೆ ಭಗವದ್ಗೀತೆಯ ಬಗ್ಗೆ ಮಾತಾಡಲು ಹೇಳಿದಾಗ ಗಾಂಧೀಜಿ ಹೀಗೆ ಹೇಳಿದ್ದರು)

–ಯಂಗ್ ಇಂಡಿಯಾ, 1927

ಬರಿಯ ನಿಮ್ಮ ಪುಸ್ತಕದ ಓದು ನಿಮ್ಮ ಮುಂದಿನ ಆಯುಷ್ಯದಲ್ಲಿ ಬಹಳ ಉಪಯೋಗ ಬೀಳಲಾರದು. ಚಕ್ಕಡಿಗಟ್ಟಲೆ ಪುಸ್ತಕಗಳನ್ನು ಓದಿ ತಮ್ಮ ಮೆದುಳಿನಲ್ಲಿ ತುಂಬಿಕೊಂಡಿದ್ದ ವಿದ್ಯಾರ್ಥಿಗಳು ಯಾವ ರೀತಿ ಭಗ್ನರಾಗಿದ್ದಾರೆಂಬುದನ್ನು ಭಾರತದ ಎಲ್ಲ ಕಡೆಯಿಂದ ನನಗೆ ಬರುತ್ತಿರುವ ಪತ್ರಗಳಿಂದ ನಾನು ಬಲ್ಲೆನು. ಹಲವರು ಅಧೀರರಾಗಿದ್ದರೆ, ಹಲವರಂತೂ ಹುಚ್ಚರಾಗಿದ್ದಾರೆ; ಮತ್ತೆ ಹಲವರಂತೂ ನಿಸ್ಸಹಾಯಕವಾದ ಅಪವಿತ್ರ ಬಾಳನ್ನು ನೂಕುತ್ತಿದ್ದಾರೆ. ತಮ್ಮಲ್ಲಿರುವ 'ದೈತ್ಯ'ನನ್ನು ಗೆಲ್ಲಲು ತಾವು ಎಷ್ಟೇ ಪ್ರಯತ್ನಿಸಿದರೂ ತಮ್ಮ ಈಗಿನ ಸ್ಥಿತಿಯನ್ನು ಬಿಟ್ಟು ಮೇಲೆ ಬರಲಾರೆವೆಂದು ಅವರು ಹೇಳಿದಾಗ ನನ್ನ ಹೃದಯವು ಅವರಿಗಾಗಿ ಮರುಕಗೊಳ್ಳುತ್ತದೆ. "ನಮ್ಮನ್ನು ಅದುಮಿ ಹಿಡಿದ 'ದೈತ್ಯ'ನನ್ನು ನಾವು ಗೆಲ್ಲುವ ರೀತಿ ಯಾವುದು? ನಮ್ಮ ಅಪವಿತ್ರತೆಯನ್ನು ನಾವು ಹೇಗೆ ಕಳೆದುಕೊಳ್ಳಬೇಕು? ಹೇಳಿರಿ" ಎಂದು ಅವರು ಖಿನ್ನರಾಗಿ ಕೇಳುತ್ತಿದ್ದಾರೆ. ನಾನು ಅವರಿಗೆ ರಾಮನಾಮವನ್ನು ಪಠಿಸಬೇಕೆಂದೂ, ದೇವರೆದುರು ಪ್ರಣಿಪಾತ ಮಾಡಿ ಅವನ ಸಹಾಯವನ್ನು ಕೋರಬೇಕೆಂದೂ ಹೇಳಿದಾಗ, ಅವರು "ದೇವರೆಲ್ಲಿದ್ದಾನೆ ನಮಗೆ ಗೊತ್ತಿಲ್ಲ" ಎಂದು ಹೇಳುತ್ತಾರೆ. ಅದು ಅವರು ಇಳಿದ ಅಧೋಗತಿ. ಅಂತಲೆ, ನಾನು ವಿದ್ಯಾರ್ಥಿಗಳು ಜಾಗೃತರಾಗಬೇಕೆಂದೂ, ತಮ್ಮ ಕೈಗೆ ಸಿಕ್ಕ ಸಾಹಿತ್ಯವನ್ನೆಲ್ಲ ಓದಕೂಡದೆಂದೂ ಹೇಳುತ್ತಿದ್ದೇನೆ. ಶಿಕ್ಷಕರು ಕೂಡ ತಮ್ಮ ವಿದ್ಯಾರ್ಥಿಗಳ ಹೃದಯವನ್ನು ಸಂಸ್ಕರಿಸಬೇಕೆಂದೂ, ಅವರ ಹೃದಯ ಸಂಬಂಧವನ್ನಿಟ್ಟುಕೊಳ್ಳಬೇಕೆಂದೂ ಕೇಳಿಕೊಳ್ಳುತ್ತಿದ್ದೇನೆ. ಶಿಕ್ಷಕರ ಕೆಲಸವು ಪಾಠಶಾಲೆಯ ಒಳಗಿನಕ್ಕಿಂತ ಹೊರಗೆ ಹೆಚ್ಚಿದೆಯೆಂದು ನಾನು ಭಾವಿಸಿದ್ದೇನೆ. ಇಂದಿನ ದಿನಗೂಲಿಯ ನಿತ್ಯ ಜೀವನದಲ್ಲಿ ತಮ್ಮ ದಿನಗೂಲಿಗಾಗಿ ದುಡಿಯುತ್ತಿರುವ ಶಿಕ್ಷಕರಿಗಾಗಲೀ ಪ್ರಾಧ್ಯಾಪಕರಿಗಾಗಲೀ ಪಾಠಶಾಲೆಗಳ ಹೊರಗೆ ವಿದ್ಯಾರ್ಥಿಗಳ ಸಂಬಂಧವಿಟ್ಟುಕೊಳ್ಳುವುದು ಸಾಧ್ಯವಿಲ್ಲವಾದುದು ನಮ್ಮ ವಿದ್ಯಾರ್ಥಿಗಳ ಜೀವನ ಮತ್ತು ಚಾರಿತ್ರ್ಯದ ಬೆಳವಣಿಗೆಗೆ ದೊಡ್ಡ ಆತಂಕವಾಗಿದೆ. ಪಾಠಶಾಲೆ ಮುಗಿದ ನಂತರ ತಮಗುಳಿದ ವೇಳೆಯೆಲ್ಲವನ್ನು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಸಲುವಾಗಿ

ಮೀಸಲಾಗಿಡಲು ಸಿದ್ಧರಾಗದಿದ್ದರೆ, ಯಾವ ಹೆಚ್ಚಿನ ಕೆಲಸವೂ ಆಗದು. ಶಿಕ್ಷಕರು ವಿದ್ಯಾರ್ಥಿಗಳ ಮೆದುಳನ್ನು ಬಲಿಷ್ಠಗೊಳಿಸುವುದಕ್ಕಿಂತ ಅವರ ಹೃದಯವನ್ನು ಹದಗೊಳಿಸಲಿ!!

–ಯಂಗ್ ಇಂಡಿಯಾ, 1929

ನನ್ನ ಅಭಿಪ್ರಾಯದಲ್ಲಿ ನಾವೇನಾದರೂ ನಿಜವಾದದ್ದನ್ನು ಮತ್ತು ಶಾಶ್ವತವಾದದ್ದನ್ನು ದೊರಕಿಸಬೇಕಾಗಿದ್ದರೆ ಮನಸ್ಸಿನ ನಿರ್ಭೀತಿಯು ತುಂಬಾ ಅವಶ್ಯಕವಾದದ್ದು. ಧಾರ್ಮಿಕ ಪ್ರಜ್ಞೆ ಇಲ್ಲದೆ ಈ ಗುಣವು ಎಂದಿಗೂ ಬಾರದು. ನಾವು ದೇವರಿಗೆ ಹೆದರೋಣ; ಆದರೆ ಮನುಷ್ಯನಿಗೆ ಹೆದರಬೇಕಾಗುವುದಿಲ್ಲ. ನಾವು ಆಡುವ ಪ್ರತಿಯೊಂದು ಮಾತಿಗೂ, ನಮ್ಮ ಪ್ರತಿಯೊಂದು ಕೃತಿಗೂ ಸಾಕ್ಷಿಪುರುಷನಾಗಿ ನಮ್ಮನ್ನು ಸಂರಕ್ಷಿಸಿ ನಮ್ಮನ್ನು ಸತ್ಯದ ಪಥದ ಮೇಲೆ ಕರೆದುಕೊಂಡು ಹೋಗುತ್ತಿರುವ ದೈವತ್ವವೆಂಬುದೊಂದು ನಮ್ಮಲ್ಲಿಯೇ ಅಡಗಿದೆಯೆಂಬುದನ್ನು ನಾವು ಅರಿತರೆ, ಅನಂತರ ನಾವು ದೇವರೊಬ್ಬರನ್ನು ಬಿಟ್ಟು ಬೇರಾರಿಗೂ ಹೆದರಬೇಕಾಗಿಲ್ಲ. ಎಲ್ಲ ಗವರ್ನರರ ಗವರ್ನರನಾಗಿರುವ ಪರಮಾತ್ಮನಲ್ಲಿ ನಮಗೆ ನಿಷ್ಠೆಯಿದ್ದರೆ ಅದು ಎಲ್ಲ ಸ್ವಾಮಿನಿಷ್ಠೆಗೂ ಬೌದ್ಧಿಕ ತಳಹದಿಯನ್ನು ಒದಗಿಸುತ್ತದೆ.

–ಕುಮಾರಪ್ಪ, ಪು. 5

ಯಾವ ಮನುಷ್ಯನೂ ಧರ್ಮವಿಲ್ಲದೆ ಬದುಕನು. ತಮ್ಮ ಬುದ್ಧಿಶಕ್ತಿಯ ಅಹಂಕಾರದ ಮೂಲಕ ಧರ್ಮಕ್ಕೂ ತಮಗೂ ಏನು ಸಂಬಂಧವಿಲ್ಲವೆಂದು ಹೇಳುವ ಜನರು ಕೆಲವರಿದ್ದಾರೆ. ಹೀಗೆ ಹೇಳುವುದೆಂದರೆ–ನಾನು ಉಸಿರಾಡಿಸುತ್ತೇನೆ: ಆದರೂ ನನಗೆ ಮೂಗಿಲ್ಲ–ಎಂದು ಹೇಳಿದಂತೆ. ತರ್ಕದಿಂದಲೇ ಇರಲಿ, ಭಾವನೆಯಿಂದಲೇ ಇರಲಿ, ಇಲ್ಲವೇ ಮೂಢನಂಬಿಕೆಯಿಂದಲೇ ಇರಲಿ ಮನುಷ್ಯನು ಪರಮಾತ್ಮನ ಕೂಡ ಒಂದಿಲ್ಲ ಒಂದು ವಿಧದ ಸಂಬಂಧವನ್ನು ಒಪ್ಪಿಯೇ ಒಪ್ಪುತ್ತಾನೆ. ಎಂಥ ಹಸೀ ನಾಸ್ತಿಕನಿರಲಿ, ವಿತಂಡವಾದಿಯಿರಲಿ, ಯಾವುದಾದರೂ ಒಂದು ನೈತಿಕ ತತ್ವವನ್ನು ಒಪ್ಪಿಯೇ ಒಪ್ಪುತ್ತಾನಲ್ಲದೆ, ಅದರ ಪಾಲನೆಯಿಂದ ಒಳ್ಳೆಯದೂ ಅದರ ಉಲ್ಲಂಘನೆಯಿಂದ ಕೆಟ್ಟದೂ ಆಗುವುದೆಂದು ನಂಬಿರುತ್ತಾನೆ. ತನ್ನ ನಾಸ್ತಿಕತೆಗಾಗಿ ಜಗತ್‌ಪ್ರಸಿದ್ಧನಾಗಿದ್ದ ಬ್ರ್ಯಾಡ್‌ಲಾ ತನ್ನ ಅಂತರಾತ್ಮದ ನಂಬುಗೆಗಳನ್ನು ಯಾವಾಗಲೂ ಸಾರಬಯಸುತ್ತಿದ್ದನು. ಈ ರೀತಿ ಸತ್ಯವನ್ನು ಆಡುವುದರ ಮೂಲಕ ಅವನು ಬಹಳವೇ ಕಷ್ಟಪಡಬೇಕಾಯಿತು. ಆದರೂ, ಅವನು ಸತ್ಯವೇ ಸತ್ಯವಾಡುವುದರ ಪ್ರತಿಫಲವೆಂದು ಹೇಳುತ್ತಿದ್ದನು. ಸತ್ಯವನ್ನಾಡುವುದರಿಂದುಂಟಾಗುವ ಸುಖದ ಕಲ್ಪನೆ

ಅವನಿಗಿರಲಿಲ್ಲವೆಂದಲ್ಲ. ಈ ಬಗೆಯ ಆನಂದವು ಬರುವುದು ಐಹಿಕವಾದದ್ದಲ್ಲ. ಅದರ ಉಗಮವಿರುವುದು ದೈವತ್ವದೊಡನೆ ನಮಗಿರುವ ಸಂಪರ್ಕದ ಮೂಲಕ. ಅಂತಲೇ ನಾನು ಹೇಳುವುದು–ಧರ್ಮವನ್ನು ಹೀಗಳೆಯುವ ವ್ಯಕ್ತಿಯೂ ಸಹ ಧರ್ಮವನ್ನು ಬಿಟ್ಟಿಲ್ಲ. ಧರ್ಮವನ್ನು ಬಿಟ್ಟಿರಲಾರ.

–ಯಂಗ್ ಇಂಡಿಯಾ, **1934**

ಇಂದು ನಾನು ನಿಮ್ಮೆದುರಿಗೆ ಬಂದುದು ಪಂಡಿತ ಎಂಬ ವೇಷದಲ್ಲಲ್ಲ. ನಾನು ಬಂದುದು ನನ್ನಂತಹ ಮತ್ತು ಸರದಾರರಂತಹ ಸಾಮಾನ್ಯ ಜೀವಿಗಳ ಮೇಲೆ ಗೀತೆ ಯಾವ ಪ್ರಭಾವವನ್ನು ಮಾಡಿದೆಯೆಂಬುದನ್ನು ತಿಳಿಸಲಿಕ್ಕೆ. ಸೆರೆಮನೆಯಲ್ಲಿದ್ದಾಗ ಭಗವದ್ಗೀತೆ ಸರದಾರ ವಲ್ಲಭಬಾಯಿಯವರ ಮೇಲೆ ಎಂಥ ಗಾಢವಾದ ಪರಿಣಾಮವನ್ನು ಮಾಡಿತೆಂಬುದನ್ನು ನಿಮ್ಮಲ್ಲಿ ಎಷ್ಟು ಜನ ಬಲ್ಲಿರೋ ನಾನರಿಯೆ. ಅವರು ಯರವಡಾ ಸೆರೆಮನೆಯಲ್ಲಿದ್ದಾಗ ಭಗವದ್ಗೀತೆ ಆಹಾರ–ಪಾನಕ್ಕಿಂತಲೂ ಹೆಚ್ಚಿನ ಪರಿಣಾಮವನ್ನು ಮಾಡಿತೆಂಬುದನ್ನು ನಾನು ಸ್ವಯಂ ಸಾಕ್ಷಿಯಾಗಿ ನಿಮಗೆ ಹೇಳುತ್ತಿದ್ದೇನೆ. ಭಗವದ್ಗೀತೆಯನ್ನು ಮೂಲದಲ್ಲಿ ಓದುವ ದೃಷ್ಟಿಯಿಂದ ಸರದಾರರು ಪಂಡಿತ ಸಾತವಳೆಕರ ಅವರ ಸಂಸ್ಕೃತ–ಸ್ವಬೋಧಿನಿಯನ್ನು ಅಭ್ಯಾಸ ಮಾಡಹತ್ತಿದರು. ಒಮ್ಮೆ ಅವರು ಅದನ್ನು ಪ್ರಾರಂಭಿಸಿದ ಮೇಲೆ ಆ ಪುಸ್ತಕವು ಅವರ ಕೈಯನ್ನು ಬಿಟ್ಟು ಇರಲೇ ಇಲ್ಲ... ಇಂದೂ ನನಗಂತೂ ಭಗವದ್ಗೀತೆಯೆಂದರೆ ನನ್ನ ಬೈಬಲ್ ಆಗಿದೆ; ನನ್ನ ಕುರಾನ್ ಆಗಿದೆ. ಅದಕ್ಕೂ ಹೆಚ್ಚು ನನ್ನ ತಾಯಿಯಾಗಿದೆ. ಗೀತೆಯನ್ನು ಓದುವ ಸಾಮರ್ಥ್ಯವನ್ನು ಪಡೆಯುವುದಕ್ಕಾಗಿಯೇ ನಾನು ಸಂಸ್ಕೃತವನ್ನು ಕಲಿತೆ. ನನ್ನ ಜನ್ಮವಿತ್ತ ಪಾರ್ಥಿವ ತಾಯಿ ಬಹಳ ದಿವಸಗಳ ಹಿಂದೆಯೇ ನನ್ನನ್ನು ಬಿಟ್ಟು ಅಗಲಿ ಹೋದಳು. ಆದರೆ, ಅಂದಿನಿಂದ ಈ ಶಾಶ್ವತ ತಾಯಿ ಯಾವಾಗಲೂ ಅವಳ ಸ್ಥಾನದಲ್ಲಿ ನಿಂತಿದ್ದಾಳೆ. ಅವಳೂ ಎಂದೂ ಬದಲಾಗಿಲ್ಲ. ಎಂದೂ ಅವಳು ನನ್ನ ಕೈಯನ್ನು ಬಿಟ್ಟಿಲ್ಲ. ಅಸ್ಪೃಶ್ಯತೆಯ ವಿರುದ್ಧ ನಾನು ನಡೆಸಿದ ಹೋರಾಟದಲ್ಲಿ ಶಾಸ್ತ್ರ ಪಂಡಿತರು ಮಂಡಿಸಿದ ಅನೇಕವಾದ ಭಿನ್ನ ಭಿನ್ನ ವಿರುದ್ಧಾಭಿಪ್ರಾಯಗಳನ್ನು ನಾನು ಎದುರಿಸಬೇಕಾಯಿತು. ಈ ಸಂದರ್ಭದಲ್ಲಿ ನಾನು ಯಾವ ಪ್ರಾಮಾಣ್ಯವನ್ನು ಅಂಗೀಕರಿಸಬೇಕು? ನಾನು ಸಂತೆಯಲ್ಲಿ ಸಿಕ್ಕಂತಾಗುತ್ತದೆ. ವೇದ ಮತ್ತು ಸ್ಮೃತಿಗಳು ನನಗೆ ಉಪಯೋಗವಿಲ್ಲ. ಆಗ ನಾನು ಗೀತಾಮಾತೆಯ ಹತ್ತಿರ ಹೋಗಿ "ತಾಯೇ, ಈ ಪಂಡಿತರು ನನ್ನನ್ನು ಸಂಕಟ ಸಂದರ್ಭದಲ್ಲಿ ಸಿಲುಕಿಸಿದ್ದಾರೆ. ಈ ಸಂಕಟದಿಂದ ನೀನು ನನ್ನನ್ನು ಪಾರು ಮಾಡು" ಎಂದು ಕೇಳಿಕೊಳ್ಳುತ್ತೇನೆ. ಆಗ ತಾಯಿ

ನಗುಮುಖದಿಂದ ನನಗೆ ಹೇಳುತ್ತಾಳೆ- "ಒಂಭತ್ತನೆಯ ಅಧ್ಯಾಯದಲ್ಲಿ ನಾನಿತ್ತ ಆಶ್ವಾಸನೆಯು ಕೇವಲ ಬ್ರಾಹ್ಮಣರಿಗಾಗಿ ಅನ್ವಯಿಸದೆ, ಪಾಪಕರ್ಮಿಗಳು, ಬಾಹಿರರು, ದಲಿತರು, ಪರಿತ್ಯಕ್ತರು-ಎಲ್ಲರಿಗೂ ಅನ್ವಯಿಸುತ್ತದೆ" ಎಂದು ಹೇಳುತ್ತಾಳೆ.*

"ಆದರೆ, ತಾಯಿಯತ್ತ ಈ ಆಶ್ವಾಸನಕ್ಕೆ ನಾವು ಅರ್ಹರಾಗಬೇಕಾದರೆ, ನಾವು ಅವಳ ನಂಬಿಗಸ್ತ ಮತ್ತು ನಿಷ್ಠ ಮಕ್ಕಳಾಗಬೇಕೇ ವಿನಾ ಬರಿಯ ತೋರಿಕೆಯ ಭಕ್ತಿಯನ್ನು ಧರಿಸಿದ ಅಪ್ರಾಮಾಣಿಕ ಮಕ್ಕಳಾಗಬಾರದು.

ಗೀತೆಯ ಅಭ್ಯಾಸದ ಮೂಲಕವಾಗಿಯೇ ತಮ್ಮ ಸರ್ವಗ್ರಾಹಿಯಾದ ಪಾಂಡಿತ್ಯ ಮತ್ತು ಅಭ್ಯಾಸದಿಂದ ಲೋಕಮಾನ್ಯರು ಮಹತ್ತಮವಾದ ಗ್ರಂಥವನ್ನು ರಚಿಸುವಂತಾಯಿತು. ತಮ್ಮ ಬುದ್ಧಿಶಕ್ತಿಯನ್ನು ಉಪಯೋಗಿಸಲು ಅವರಿಗೆ ಅದೊಂದು ಗಾಢವಾದ ಸತ್ಯಗಳ ಖನಿಯಾಗಿದ್ದಿತು. ಭಗವದ್ಗೀತೆ ಜಗತ್ತಿನ ತಾಯಿ. ವಿಶ್ವಮಾತೆ ಅವಳು ಯಾರನ್ನೂ ಹೊರದೂಡುವುದಿಲ್ಲ. ಬಾಗಿಲು ತಟ್ಟಿದವರನ್ನೆಲ್ಲ ಅವಳು ಎರಡೂ ಕೈಗಳಿಂದ ಸ್ವಾಗತಿಸುತ್ತಾಳೆ. ಭಗವದ್ಗೀತೆಯ ನಿಜವಾದ ಭಕ್ತನಿಗೆ ನಿರಾಶೆ ಎಂಬುದಿಲ್ಲ. ಜ್ಞಾನಸ್ಥಿತಿಯನ್ನು ಕೂಡ ದಾಟಿದ ಅತಿ ಶಾಶ್ವತವಾದ ಶಾಂತಿ ಮತ್ತು ಆನಂದಗಳಲ್ಲಿ ಆ ವ್ಯಕ್ತಿಯು ವಾಸಿಸುತ್ತಾನೆ. ಆದರೆ, ಸುಖ ಶಾಂತಿಗಳು ಸಂಶಯಾತ್ಮನಿಗಾಗಲೀ, ತನ್ನ ಪಾಂಡಿತ್ಯ ಇಲ್ಲವೆ ಬುದ್ಧಿವಂತಿಕೆಗಳ ಬಗ್ಗೆ ಹೆಮ್ಮೆ ಇದ್ದವನಿಗಾಗಲೀ ದೊರಕಲಾರವು.

ಆ ತಾಯಿಯ ಪೂಜೆಗಾಗಿ ಸಂಪೂರ್ಣವಾದ ನಿಷ್ಠೆ ಮತ್ತು ಏಕಮುಖ ಮನಸ್ಸಿನ ವಿನಮ್ರತೆಯುಳ್ಳವರಿಗೆ ಮಾತ್ರ ಅಂಥ ಸುಖ-ಶಾಂತಿಗಳು ಮೀಸಲು. ಈ ಭಾವನೆಯಿಂದ ಆ ತಾಯಿಯನ್ನು ಪೂಜಿಸಿದ ಯಾವ ವ್ಯಕ್ತಿಯೂ ನಿರಾಶನಾಗಿ ಮರಳಿಲ್ಲ.

ನಮ್ಮ ವಿದ್ಯಾರ್ಥಿಗಳು ತೀರ ಕ್ಷುಲ್ಲಕ ಕಾರಣಕ್ಕಾಗಿ ಕ್ಷುಬ್ದರಾಗುವುದುಂಟು. ಪರೀಕ್ಷೆಯಲ್ಲಿ ನಾಪಾಸಾಗುವಂಥ ತೀರ ಕ್ಷುಲ್ಲಕ ಕಾರಣವೂ ಸಹ ಅವರನ್ನು ಉದಾಸೀನಗೊಳಿಸುವುದುಂಟು. ಅಪಯಶಸ್ಸೆಂದು ಕಂಡುಬರುವಂಥ ವಿಷಯದಲ್ಲಿಯೂ ಕೂಡ ಪರಿಶ್ರಮಿಸಬೇಕೆಂದು ಕರ್ತವ್ಯ ಬುದ್ಧಿಯನ್ನು ಗೀತೆಯು ನಮ್ಮಲ್ಲಿ ಉಂಟುಮಾಡುತ್ತದೆ.

---

*ಮಾಂ ಹಿ ಪಾರ್ಥ ವ್ಯಾಪಾಶ್ರಿತ್ಯ ಯೋಽಪಿ ಸ್ಯುಃ ಪಾಪಯೋನಯಃ
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿ ಯಾತಿ ಪರಾಂಗತಿಂ॥

(ನೋಡುವುದು) : (ಲೇಖಕ)

*ಫಲಾಪೇಕ್ಷೆಯಿಲ್ಲದೆ ಕರ್ತವ್ಯ ಮಾಡುವ ಹಕ್ಕು ಮಾತ್ರ ನಮಗಿದೆಯೆಂದೂ ಮತ್ತು ಮೂಲತಃ ಯಶಾಪಯಶಗಳೆರಡೂ ಒಂದೇ ಎಂದು ಗೀತೆ ನಮಗೆ ಬೋಧಿಸುತ್ತದೆ** ಸುತ್ತಿ ಸುಳಿಯುವ ಆಸೆ ಆಮಿಷಗಳ ಇಲ್ಲವೆ ಅನಿಯಂತ್ರಿತ ಭಾವನೆಗಳ ಆಳಾಗುವಂಥ ಮಾನಸಿಕ ವ್ಯಭಿಚಾರಾವಸ್ಥೆಯನ್ನು ಹೊಂದದೆ, ಮನಶ್ಶುದ್ಧಿಯಿಂದ ಆತ್ಮಶುದ್ಧಿಯಿಂದ ಕೇವಲ ಪವಿತ್ರವಾದ ಕರ್ತವ್ಯವನ್ನು ಮಾತ್ರ ನಾವು ಆಚರಿಸಬೇಕೆಂದು ಗೀತೆ ನಮಗೆ ಆಜ್ಞಾಪಿಸುತ್ತದೆ. ಸತ್ಯಾಗ್ರಹಿ ಎನ್ನುವ ದೃಷ್ಟಿಯಿಂದ ಗೀತೆ ನಮಗೆ ಪ್ರತಿದಿನವೂ ನವೀನವಾದ ಪಾಠವನ್ನೇ ಬೋಧಿಸುತ್ತಿದೆಯೆಂದು ಹೇಳಬಲ್ಲೆ. ಯಾರಾದರೂ ಇದು ನನ್ನ ಭ್ರಮೆಯೆಂದು ಹೇಳಿದರೆ, ನಾನು ಅವರಿಗೆ ಉತ್ತರ ಕೊಡುವುದೇನೆಂದರೆ, ನಾನು ಆ ಭ್ರಮೆಯನ್ನೇ ಬಿಡದೆ ಅಪ್ಪಿಕೊಳ್ಳುತ್ತೇನೆಂದು.

ವಿದ್ಯಾರ್ಥಿಗಳಿಗೆ ನಾನು ಮಾಡುವ ಉಪದೇಶವೆಂದರೆ–ಅವರು ಪ್ರತಿದಿವಸ ಪ್ರಾತಃಕಾಲ ಗೀತೆಯ ಪಠನ ಮಾಡಬೇಕು. ನಾನು ಇಂದು ನಿಮಗೆ ಹೇಳುವುದೆಂದರೆ ಗೀತೆಯ ಅಭ್ಯಾಸವನ್ನು ನೀವು ಕೇವಲ ಚಿಕಿತ್ಸಕ ಇಲ್ಲವೆ ಹೀಗಳೆವ ಬುದ್ಧಿಯಿಂದ ಪ್ರಾರಂಭಿಸದೆ, ಭಕ್ತಿಪೂರ್ಣವಾದ ಮತ್ತು ಪವಿತ್ರವಾದ ಭಾವನೆಯಿಂದ ಪ್ರಾರಂಭಿಸಬೇಕು. ಒಮ್ಮೆ ನೀವು ಆ ಅಮೃತವನ್ನು ಸೇವಿಸಿದಿರೆಂದರೆ, ಅದನ್ನು ದಿನದಿನಕ್ಕೆ ನೀವು ಹೆಚ್ಚಾಗಿ ಅಪೇಕ್ಷಿಸುತ್ತೀರಿ. ಗೀತೆಯ ಪಠನವು ನಿಮ್ಮ ಸಂಕಟ ಸಮಯಗಳಲ್ಲಿಯೂ, ದುಃಖಗಳಲ್ಲಿಯೂ, ಏಕಾಂತದ ಕಾರ್ಗತ್ತಲೆಯಲ್ಲಿಯೂ ನಿಮಗೆ ಸಮಾಧಾನವನ್ನೊದಗಿಸುತ್ತದೆ. ನೀವು ಕೊನೆಯ ಕರೆಯನ್ನು ಸ್ವೀಕರಿಸುವಾಗ ಈ ಶ್ಲೋಕಗಳ ಪಠನ ಮಾಡುತ್ತ ನಿಮ್ಮ ಆತ್ಮಾರ್ಪಣ ಮಾಡುವುದಾದರೆ, ಅದೇ ಬ್ರಹ್ಮನಿರ್ವಾಣ–ಅಂತಿಮಮುಕ್ತಿ.

–ಯಂಗ್ ಇಂಡಿಯಾ, 1934

ನಮ್ಮ ಜೀವನದಿಂದ ದೇವರನ್ನು ಕಿತ್ತುಹಾಕಿ, ಚೈತನ್ಯಪೂರ್ಣನಾದ ಆ ಪರಮಾತ್ಮನಲ್ಲಿ ಸಜೀವವಾದ ಶ್ರದ್ಧೆಯನ್ನಿಡದೆ ತೀರ ಹೆಚ್ಚಿನ ಜೀವನವನ್ನು ಸಾಧಿಸುವುದು ಸಾಧ್ಯವೆಂದು ಹೇಳುವುದು ಇತ್ತೀಚಿನ ಒಂದು ಫ್ಯಾಶನ್ ಆಗಿದೆ. ಇಡೀ ವಿಶ್ವಚಾಲಕನಾದ ಒಂದು ಜೀವಂತ ತತ್ವದಲ್ಲಿ ಶ್ರದ್ಧೆಯಿಲ್ಲದೆ ಪರಿಪೂರ್ಣ ಜೀವನವು ಅಸಾಧ್ಯವೆಂದು ನಾನು ನನ್ನ ಅನುಭವದಿಂದ ಹೊರಕ್ಕೆ ಚೆಲ್ಲಿದ ನೀರ

---

*ಕರ್ಮಣ್ಯೇ ವಾಧಿ ಕಾರಸ್ತೇ ಮಾಫಲೇಷು ಕದಾಚನ
ಮಾಕರ್ಮ ಫಲಹೇತು ರ್ಭೂ ಮಾತೇ ಸಂಗೋಸ್ತ್ವ ಕರ್ಮಣೀ
(ನೋಡುವುದು) : (ಲೇಖಕ)

ಹನಿಯಂತೆ. ಆ ಹನಿ ವಿನಾಶ ಹೊಂದಲೇಬೇಕು. ಸಾಗರದಲ್ಲಿರುವ ಪ್ರತಿಯೊಂದು ಕಣವೂ ಸಾಗರದ ರಾಜವೈಭವವನ್ನು ಪಡೆದು ನಮಗೆ ನಮ್ಮ ಜೀವನ ಸಂಜೀವಿನಿಯನ್ನು ಒದಗಿಸುತ್ತಿದೆ.

– ಹರಿಜನ, 1936

ನನ್ನ ದೃಷ್ಟಿಯಲ್ಲಿ ಸುಸ್ವಭಾವ, ನೀತಿ ಮತ್ತು ಧರ್ಮ–ಇವೆಲ್ಲವೂ ಪರ್ಯಾಯ ಪದಗಳು. ಧರ್ಮಸಂಬದ್ಧವಾಗಿರದ ನೀತಿ ಜೀವನ ಉಸುಕಿನ ಮೇಲೆ ಕಟ್ಟಿದ ಮನೆ ಇದ್ದ ಹಾಗೆ. ನೀತಿಯನ್ನುಳಿದ ಧರ್ಮವೆಂದರೆ ಬರಿಯ ಗಲಾಟೆ ಎಬ್ಬಿಸಿ ತಲೆಯನ್ನೊಡೆಯುವ ಕಂಚಿನ ಕಹಳೆ ಇದ್ದ ಹಾಗೆ. ನೀತಿಯಲ್ಲಿ ಸತ್ಯ, ಅಹಿಂಸೆ, ನಿಗ್ರಹ ಎಲ್ಲವೂ ಸೇರಿವೆ. ಮಾನವತೆ ಈವರೆಗೆ ಆಚರಿಸಿದ ಯಾವ ಸದ್ಗುಣವನ್ನು ತೆಗೆದುಕೊಂಡರೂ ಅವುಗಳ ತಳಹದಿ ಈ ಮೂರು ಮೂಲಭೂತವಾದ ಸದ್ಗುಣಗಳಲ್ಲಿದೆ ಎಂದು ಹೇಳಬೇಕು.

– ಹರಿಜನ, 1936

ಪ್ರಾರ್ಥನೆ

ಒಬ್ಬ ವಿದ್ಯಾರ್ಥಿ ಬರೆದ ಪತ್ರದ ಭಾಗವಿದು–

"ನನಗೆ ಪ್ರಾರ್ಥನೆಯಲ್ಲಿ ವಿಶ್ವಾಸವಿಲ್ಲವೆಂದು ನಾನು ಹೇಳಬಯಸುತ್ತೇನೆ. ಯಾವ ದೇವರಿಗೂ ಪ್ರಾರ್ಥನೆ ಮಾಡುವ ವಿಶ್ವಾಸ ನನ್ನಲ್ಲಿಲ್ಲ... ಆದ್ದರಿಂದ ಪ್ರಾರ್ಥನೆಯು ಒತ್ತಾಯದ್ದಾಗಕೂಡದು. ಮನಸ್ಸಿಲ್ಲದೆ ಮಾಡುವ ಕೆಲಸವೆಲ್ಲವೂ ಅನೈತಿಕವಾಗಿದ್ದು, ಅಧೋಗತಿಗೆ ಕಾರಣವಾಗಿದೆ."

ಈ ಪತ್ರದಲ್ಲಿಯ ಅಭಿಪ್ರಾಯವನ್ನು ನಾವು ಪರೀಕ್ಷಿಸೋಣ. ಯಾವುದಾದರೊಂದು ವಿಚಾರದಲ್ಲಿ ನಮ್ಮ ಶ್ರದ್ಧೆಯುಂಟಾಗುವ ಮೊದಲು, ನಾವು ಒಂದು ಶಿಸ್ತಿಗೆ ಒಳಪಡಲೊಪ್ಪುವುದು ಅನೈತಿಕ ಮತ್ತು ಅಧೋಗತಿಯ ಕಾರಣವಾಗಿದೆಯೇ?... "ನನಗೆ ದೇವರಲ್ಲಿ ವಿಶ್ವಾಸವಿಲ್ಲ" ಎಂದು ಹೇಳುವುದು ಬಹಳ ಸರಳವಾದ ಮಾತಾಗಿದೆ. ಯಾಕೆಂದರೆ, ಪರಮಾತ್ಮನು ತನ್ನ ಬಗ್ಗೆ ಏನು ಹೇಳಿದರೂ, ಯಾವ ದಂಡ–ದೋಷವೂ ಇಲ್ಲದೆ ಸುಮ್ಮನಿರುತ್ತಾನೆ. ಅವನು ನಮ್ಮ ಕೃತಿಗಳನ್ನು ವೀಕ್ಷಿಸುತ್ತಿದ್ದಾನೆ. ಪರಮಾತ್ಮನ ಯಾವುದಾದರೂ ಕಾಯದೆ ಭಂಗ ಮಾಡಿದರೆ ಅದಕ್ಕೆ ಸೇಡಿನ ದಂಡನೆಯಿದೆ, ಪವಿತ್ರಗೊಳಿಸುವ ಶಿಕ್ಷೆಯಿದೆ. ದೇವರ ಅಸ್ತಿತ್ವವನ್ನು ಸಿದ್ಧಮಾಡಿ ತೋರಲಾಗದು; ಹಾಗೆ ತೋರಿಸುವ ಅವಶ್ಯಕತೆಯೂ ಇಲ್ಲ.

ದೇವರಿದ್ದಾನೆ.... ಅವನ ಅಸ್ತಿತ್ವದ ಅರಿವು ನಮಗಾಗದಿದ್ದರೆ, ಅದು ನಮಗೇ ಕೆಡಕು... ಇನ್ನು ಪ್ರಾರ್ಥನೆಯ ವಿಷಯ. ಪ್ರಾರ್ಥನೆಯೆಂದರೆ ಯಾಚನೆಯಲ್ಲ. ಅದು ಆತ್ಮದ ಕೂಗಾಗಿದೆ. ಅದು ನಮ್ಮ ನ್ಯೂನತೆಗಳ ಪ್ರತಿದಿನದ ಕ್ಷಮಾಯಾಚನೆಯಾಗಿದೆ. ಮನುಷ್ಯನು ಎಂಥ ಅತಿರಥ ಮಹಾರಥನಾಗಿದ್ದರೂ ವೃದ್ಧಾಪ್ಯ ಮತ್ತು ಗಂಡಾಂತರಗಳ ಬಗ್ಗೆ ಅವನಿಗೆ ಹೆದರಿಕೆಯಿದೆ. ನಾವು ಮರಣದ ಮಧ್ಯದಲ್ಲಿಯೇ ವಾಸಿಸುತ್ತಿದ್ದೇವೆ. ಒಂದು ಕ್ಷಣಮಾತ್ರದಲ್ಲಿ ನಮ್ಮನ್ನೆಲ್ಲ ಇಲ್ಲದಂತೆ ಮಾಡುವ ಶಕ್ತಿ ಇರುತ್ತಿರುವಾಗ ನಮ್ಮ ನಮ್ಮ ಆಸೆ-ಆಕಾಂಕ್ಷೆಗಳ ಬಗ್ಗೆ ದುಡಿಯುವುದಾದರೂ ಏನಿದೆ? ಅದರ ಬದಲು, ಪರಮಾತ್ಮ ಮತ್ತು ಅವನ ಆದೇಶಕ್ಕಾಗಿ ನಾವು ದುಡಿಯುತ್ತೇವೆಂಬ ಭಾವನೆ ನಮ್ಮಲ್ಲಿದ್ದರೆ, ನಾವು ಬಂಡೆಗಲ್ಲಿನಷ್ಟು ಬಲಿಷ್ಠವಾದ ಶಕ್ತಿಯನ್ನು ಪಡೆಯಬಹುದು. ಆಮೇಲೆ ಎಲ್ಲವೂ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗುತ್ತದೆ. ಅದಾದನಂತರ ಯಾವುದೂ ನಾಶಹೊಂದುವುದಿಲ್ಲ. ಆಗ ವಿನಾಶವೆನ್ನುವುದೆಲ್ಲ ಬರೀ ಕಣ್ಣಿಗೆ ಕಾಣುವ ಮಿಥ್ಯೆಯಾಗುತ್ತದೆ. ಮರಣ ಮತ್ತು ವಿನಾಶಗಳ ಅನಿತ್ಯತ್ವ ಆವಾಗಲೇ ನಮ್ಮ ಕಣ್ಣೆದುರಿಗೇ ಕಾಣುವುದು. ಯಾಕೆಂದರೆ, ಅನಂತರ ಮರಣ ಅಥವಾ ವಿನಾಶವೆಂದರೆ ಬರಿಯ ಒಂದು ಬದಲಾವಣೆ. ಮೊದಲಿನಕ್ಕಿಂತಲೂ ಹೆಚ್ಚು ಸುಂದರವಾದ ಚಿತ್ರವನ್ನು ನಿರ್ಮಿಸುವುದಕ್ಕಾಗಿ ಒಬ್ಬ ಕಲಾಕಾರನ ಮೊದಲಿನ ಚಿತ್ರವನ್ನು ನಾಶಗೊಳಿಸುತ್ತಾನೆ. ಒಬ್ಬ ಗಡಿಯಾರ ರಿಪೇರಿ ಮಾಡುವವನು ಹೊಸದಾದ ಮತ್ತು ಉಪಯುಕ್ತವಾದ ಸ್ಪ್ರಿಂಗನ್ನು ಹಾಕುವುದರ ಸಲುವಾಗಿಯೇ ಹಳೆಯದನ್ನು ತೆಗೆದು ಬಿಸಾಕುತ್ತಾನೆ. ಮರಣವೆಂಬುದೂ ಹಾಗೆಯೇ ಎಂಬ ಅರ್ಥವು ಆಗ ನಮಗಾಗುತ್ತದೆ. ಸಾಮೂಹಿಕ ಪ್ರಾರ್ಥನೆಯೆಂದರೆ ಅತ್ಯದ್ಭುತ ಶಕ್ತಿಯುಳ್ಳದ್ದು. ನಾವು ಒಬ್ಬರಾಗಿಯೇ ಮಾಡದ ಕೆಲಸವನ್ನು ಅನೇಕ ಸಲ ನಾವು ಸಾಂಘಿಕವಾಗಿ ಮಾಡುತ್ತೇವೆ. ವಿದ್ಯಾರ್ಥಿಗಳಿಗೆ ಪ್ರಾರ್ಥನೆಯ ಬಗ್ಗೆ ಶ್ರದ್ಧೆಯೆಂಬುದೇನೂ ಇಲ್ಲ. ಪ್ರಾರ್ಥನೆಯ ಕರೆಗೆ ಓಗೊಟ್ಟು ಅವರು ಪ್ರಾರ್ಥನೆಯನ್ನು ಪ್ರಾರಂಭಿಸಿದರೆ ಅವರಿಗೆ ಅದರ ಔನ್ನತ್ಯದ ಅರಿವಾಗುತ್ತದೆ. ಎಷ್ಟೋ ಸಲ ಅನೇಕರಿಗೆ ಹಾಗೆ ಅನಿಸುವುದೂ ಇಲ್ಲ. ಎಷ್ಟೋ ಸಲ ಹಲವರು ಕಿಡಿಗೇಡಿಗಳೂ ಆಗಿರುತ್ತಾರೆ. ಏನೇ ಆದರೂ, ಅ-ಪ್ರಯತ್ನ ಪುರಸ್ಸರವಾಗಿಯಾದರೂ ಪ್ರಾರ್ಥನೆಯ ಪರಿಣಾಮವಾಗದೆ ಹೋಗದು.

ಪ್ರ:- "ನೀವು ವಿಶ್ವಾಸವಿಡಿರಿ; ಅಂದರೆ, ಶ್ರದ್ಧೆ ತಾನಾಗಿಯೇ ಬರುತ್ತದೆ" ಎಂದು ನೀವು ಹೇಳುತ್ತೀರಿ. ಇದು ಬುದ್ಧಿಶಕ್ತಿಯ ಮಾರ್ಗವಲ್ಲ. ಇದು ಕಡ್ಡಾಯಮಾರ್ಗ. ಅಪೂರ್ವವಾದ ಧೈರ್ಯ ಗುಣವನ್ನು ತೋರಿಸಿದ್ದಕ್ಕಾಗಿ, ನಾವು ನಿಮಗೆ ಎಷ್ಟೇ ಋಣಿಯಾಗಿದ್ದರೂ, ನಿಮ್ಮ ಕೆಲಸದ ಬಗ್ಗೆ ಕೊನೆಯ ನಿರ್ಣಯವನ್ನು ಕೊಡುವ

ಪ್ರಸಂಗ ಬಂದರೆ, ನಮ್ಮ ದೇಶದ ಬೌದ್ಧಿಕ ಬೆಳವಣಿಗೆಗೆ ನಿಮ್ಮ ಪ್ರಭಾವವು ಮಹತ್ತರವಾದ ಹಿಂದೇಟನ್ನು ಹಾಕಿತೆಂದು ಹೇಳಬೇಕಾಗುವುದು."

ಉ:- ಈ ವಾಚಕರು ಕಡ್ಡಾಯದ ಪ್ರಾರ್ಥನೆಯನ್ನು ಅಪೇಕ್ಷಿಸುತ್ತಾರೆ. ಮಾಡುವವನಿಗೆ ಅ-ರುಚಿಯಾದ ಕೆಲಸದಲ್ಲೆಲ್ಲ ಅವರು ಕಡ್ಡಾಯವನ್ನು ಕಾಣುತ್ತಾರೆ. ಆದರೆ, ಜಗತ್ತಿನಲ್ಲಿ ಎಲ್ಲಿ ನೋಡಿದರೆ ಅಲ್ಲಿ ಕಡ್ಡಾಯವಿದೆ. ಸ್ವಯಂಪ್ರೇರಣೆಯ ಕಡ್ಡಾಯವೇ ಆತ್ಮನಿಯಂತ್ರಣ. ನಾವು ಅದನ್ನು ಆಲಂಗಿಸಿ, ಅದರಿಂದ ಅಭಿವೃದ್ಧಿಯನ್ನು ಪಡೆಯುತ್ತೇವೆ...ಹೀನವಾದ ಆಜ್ಞೆಗಳಿಗೆ ಬಗ್ಗುವುದೆಂದರೆ ಅಧಮತನ; ಅಂಜುಬುರುಕುತನ. ಆದರೆ, ಪ್ರತಿ ನಿಮಿಷ ನಮ್ಮನ್ನು ಗುಲಾಮರನ್ನಾಗಿ ಹಿಡಿದಿಡಲು ಮುತ್ತಿಮುಸುರುವ ವಾಸನೆಗಳಿಗೆ ಮನಸೋಲುವುದು, ಅದಕ್ಕೂ ಕೆಟ್ಟದ್ದು. ಆದರೆ, ನಮ್ಮ ವಾಚಕರು ತನ್ನನ್ನು ಬಂಧಿಸಿಡುವ ಶೃಂಖಲೆಗೆ ಇನ್ನೊಂದು ಹೆಸರನ್ನು ಕೊಟ್ಟಿದ್ದಾನೆ. ಆ ಹೆಸರೆಂದರೆ, ಆ ಶಕ್ತಿಯುತವಾದ "ಬುದ್ಧಿಶಕ್ತಿ" ಎಂಬುದು. ನನಗೆ ಈ "ಬುದ್ಧಿವಾದದ" ಪೂರ್ಣ ಡೋಜ್ ಸಿಕ್ಕಿದೆ. ಬುದ್ಧಿಶಕ್ತಿಯ ಸ್ಪಷ್ಟವಾದ ಇತಿಮಿತಿಗಳೇನೆಂಬುದನ್ನು ಅರಿತುಕೊಳ್ಳುವಷ್ಟು ಅನುಭವವು ನನ್ನನ್ನು ವಿನಯಶೀಲನನ್ನಾಗಿ ಮಾಡಿದೆ. ವಿಪರ್ಯಸ್ತವಾದ ವಸ್ತುವು ಕಸವಾಗುವಂತೆ, ತಪ್ಪು ಉಪಯುಕ್ತವಾದ ಬುದ್ಧಿಶಕ್ತಿಯು ಹುಚ್ಚುತನವಾಗುತ್ತದೆ. ಸೀಝರನದಾದ್ದನ್ನು ನಾವು ಸೀಝರನಿಗೆ ಕೊಟ್ಟುಬಿಟ್ಟರೆ, ಎಲ್ಲೂ ಒಳ್ಳೆಯದಾಗುತ್ತದೆ. ಬುದ್ಧಿವಾದಿಗಳು ಒಳ್ಳೆಯ ಜನರೇ ಆಗಿದ್ದಾರೆ. ಆದರೆ, ಬುದ್ಧಿವಾದವು ತನಗೆ ಸರ್ವ ಸಾಮರ್ಥ್ಯವಿದೆಯೆಂದು ಪ್ರಸ್ತಾಪಿಸಬಯಸಿದರೆ, ಅದೊಂದು ಭಯಂಕರವಾದ ರಾಕ್ಷಸವಾಗುತ್ತದೆ. ಬುದ್ಧಿಶಕ್ತಿಗೆ ಸರ್ವಸಾಮರ್ಥ್ಯವಾದ ಆಪಾದನೆ ಮಾಡುವುದೆಂದರೆ, ಕಲ್ಲು, ಮರಗಳನ್ನು ದೇವರೆಂದು ಭಾವಿಸಿ, ಅವನ್ನು ಪೂಜಿಸುವ ಮೂರ್ತಿಪೂಜೆಯಷ್ಟೇ ಹೀನವಾಗಿದೆ. ಪ್ರಾರ್ಥನೆಯ ತರ್ಕದ ಬಗ್ಗೆ ಯಾರು ವಿಚಾರ ಮಾಡಿದ್ದಾರೆ? ಅದನ್ನು ಪ್ರಯೋಗಿಸಿದ ನಂತರವೇ ಅದರ ಫಲದ ಕಲ್ಪನೆ ಬರುವುದು. ಇದೇ ಜಗತ್ತಿನ ಉದಾಹರಣೆಯಾಗಿದೆ. ಕಾರ್ಡಿನಲ್ ನ್ಯೂಮನ್‌ನು ಎಂದಿಗೂ ತನ್ನ ಬುದ್ಧಿಶಕ್ತಿಯನ್ನು ಬಿಟ್ಟುಕೊಡಲಿಲ್ಲ. ಆದರೆ, "ನನಗೆ ಒಂದು ಹೆಜ್ಜೆ ಮಾತ್ರ ಸಾಕು" ಎಂದು ಅವನು ವಿನಯದಿಂದ ಹಾಡಿದಾಗ, ಅವನು ಪ್ರಾರ್ಥನೆಗೆ ಹೆಚ್ಚಿನ ಸ್ಥಾನವನ್ನು ಕೊಟ್ಟನು. ಶಂಕರಾಚಾರ್ಯರೆಂದರೆ ಬುದ್ಧಿವಾದಿಗಳ ಅರಸು ಇದ್ದ ಹಾಗೆ. ಶಂಕರರ ಬುದ್ಧಿವಾದವನ್ನು ಮೀರಿಸುವ ಯಾವ ತರ್ಕವೂ ಜಗತ್ತಿನಲ್ಲಿಲ್ಲ. ಆದರೆ, ಅಂಥವರೂ ಸಹ ಪ್ರಾರ್ಥನೆ ಮತ್ತು ಶ್ರದ್ಧೆಗೆ ಪ್ರಥಮ ಸ್ಥಾನವನ್ನು ಕೊಟ್ಟರು...ಧಾರ್ಮಿಕ ಶಿಕ್ಷಣವನ್ನು ಬಿಟ್ಟು ಕೊಡುವುದೆಂದರೆ, ಹೊಲದ ಸರಿಯಾದ ಜ್ಞಾನವಿಲ್ಲದ್ದಕ್ಕಾಗಿ ಅದನ್ನು ಪಡ ಕೆಡವಿ ಕಸ-ಕರಿಕೆಗಳು ಬೆಳೆಯಲು ಅವಕಾಶ ಮಾಡಿಕೊಟ್ಟಂತೆ. ಶ್ರದ್ಧೆ ಮತ್ತು

ಪ್ರಾರ್ಥನೆಗಳಿಲ್ಲದೆ ಕೆಲಸವೆಂದರೆ, ವಾಸನೆಯಿಲ್ಲದ ಕೃತಕ ಪುಷ್ಪದಂತೆ. ನಾನು ಬುದ್ಧಿಶಕ್ತಿಯನ್ನು ಅದುಮಬೇಕೆಂದು ಹೇಳುವುದಿಲ್ಲ. ಆದರೆ, ಆ ಬುದ್ಧಿಶಕ್ತಿಗೇ ಪಾವಿತ್ರ್ಯವನ್ನು ತಂದು ಕೊಡುವ ಇನ್ನೊಂದು ಆತ್ಮಶಕ್ತಿಯನ್ನು ಅರಿತುಕೊಳ್ಳಬೇಕೆಂದು ಮಾತ್ರ ಹೇಳುತ್ತೇನೆ.

ಪ್ರ :- ಪ್ರಾರ್ಥನೆಯ ಸರಿಯಾದ ಸ್ವರೂಪವಾವುದು? ಅದಕ್ಕಾಗಿ ಎಷ್ಟು ವೇಳೆಯನ್ನು ಕಳೆಯಬೇಕು? ನನ್ನ ಅಭಿಪ್ರಾಯದಲ್ಲಿ ಪ್ರಾರ್ಥನೆಯನ್ನು ಮಾತೃಭಾಷೆಯಲ್ಲಿ ಹೇಳಬೇಕು. ಅದೇ ನಮ್ಮ ಆತ್ಮದ ಮೇಲೆ ಸರಿಯಾದ ಪ್ರಭಾವವನ್ನು ಮಾಡಬಲ್ಲದು. ಒಂದು ನಿಮಿಷದ ಪ್ರಾಮಾಣಿಕ ಪ್ರಾರ್ಥನೆಯಾದರೂ ಸಾಕು. ನಾವು ಪಾಪಕೃತ್ಯವನ್ನು ಮಾಡುವುದಿಲ್ಲವೆಂದು ಪರಮಾತ್ಮನಿಗೆ ಆಶ್ವಾಸನವಿತ್ತರಾಯಿತು.

ಉ:- ಪ್ರಾರ್ಥನೆಯೆಂದರೆ ಪ್ರಣೀಪಾತ ಬುದ್ಧಿಯಿಂದ ಪರಮಾತ್ಮನನ್ನು ಕೇಳಿಕೊಳ್ಳುವುದು. ಆದರೆ, ಯಾವುದೇ ಭಕ್ತಿಯ ಕಾರ್ಯದ ಬಗ್ಗೆಯೂ ಈ ಶಬ್ದವನ್ನು ಉಪಯೋಗಿಸಲಾಗುತ್ತದೆ. ಪ್ರಾರ್ಥನೆಯೆಂದರೆ, ಪರಮಾತ್ಮನ ಕೂಡ ನಾವು ಒಂದಾಗಿ, ಅವನ ದಿವ್ಯ ಪ್ರೇರಣೆಯನ್ನು ಸೂಚಿಸುವ ಹೃದಯದ ಕೂಗಾಗಿದೆ. ಈ ದೃಷ್ಟಿಯಿಂದ ಇಲ್ಲಿ ಶಬ್ದಗಳಿಗಿಂತ ನಮ್ಮ ಮನಸ್ಸಿನ ನಿಲುವಿಗೆ ಮಹತ್ವವಿದೆ. ಆದರೆ, ಅನೇಕ ಸಲ ಪರಂಪರಾಗತವಾಗಿ ನಡೆದು ಬಂದ ಶಬ್ದಗಳಿಗೆ ಒಂದು ವಿಶಿಷ್ಟಾರ್ಥವಿದ್ದು, ಅದನ್ನು ನಮ್ಮ ಮಾತೃಭಾಷೆಯಲ್ಲಿ ಭಾಷಾಂತರಿಸುವುದರಿಂದ, ಎಷ್ಟೋ ಸಲ ಅದರ ಪ್ರಭಾವವು ಮಾಯವಾಗುತ್ತದೆ. ಈ ರೀತಿ ಗುಜರಾತಿಯಲ್ಲಿ ಭಾಷಾಂತರಿಸಿ ಹೇಳಿದ ಗಾಯತ್ರಿಗೆ, ಮೂಲದ ಗಾಯತ್ರಿಯಷ್ಟು ಶಕ್ತಿ ಬಾರದು "ರಾಮ" ಎಂದ ಹೆಸರನ್ನು ಉಚ್ಚರಿಸಿದಾಕ್ಷಣಕ್ಕೆ ಲಕ್ಷಾಂತರ ಹಿಂದೂ ಜನರ ಹೃದಯದಲ್ಲಿ ಸ್ಪಂದನವುಂಟಾದಂತೆ "God" ಎಂಬುದರ ಅರ್ಥವು ಗೊತ್ತಿದ್ದರೂ, ನಮ್ಮ ಮನಸ್ಸಿನ ಮೇಲೆ ಈ ಶಬ್ದದಿಂದ ಏನೂ ಪರಿಣಾಮವಾಗದು. ಬಹುಕಾಲ ಉಪಯೋಗ ಮಾಡುವುದರಿಂದಲೂ ಮತ್ತು ಅದಕ್ಕೆ ಹೊಂದಿಕೊಂಡ ಪಾವಿತ್ರ್ಯದ ಮೂಲಕವು ಶಬ್ದಗಳಿಗೆ ಶಕ್ತಿ ಬರುವುದುಂಟು. ಭಗವದ್ಗೀತೆಯ ನನ್ನ ಪ್ರತಿಯ ಬಗ್ಗೆ ನನಗಿರುವಷ್ಟು ಗೌರವಭಾವವು ಅಂಗಡಿಯ ಕಪಾಟಿನಲ್ಲಿರುವ ಪ್ರತಿಯೊಂದು ಪುಸ್ತಕದ ಬಗ್ಗೆಯೂ ನನಗೆ ಇರಲಾರದು.

ಪ್ರಾರ್ಥನೆಗೆ ನಿಶ್ಚಿತವಾದ ವೇಳೆಯೆಂಬುದಿಲ್ಲ. ತಮ್ಮ ದೇಹದ ತುಂಬೆಲ್ಲ ಪರಮಾತ್ಮನೇ ವ್ಯಾಪಿಸಿರುವ ಜನರಿಗೆ, ಕೆಲಸ ಮಾಡುವುದೆಂದರೆ ಪ್ರಾರ್ಥನೆಯಾಗುವುದು. ಅವರ ಜೀವನವೆಂದರೆ ಒಂದು ನಿರಂತರವಾದ ಪ್ರಾರ್ಥನೆ ಇಲ್ಲವೆ ಪೂಜೆಯಾಗಿದೆ.

ವಿದ್ಯಾರ್ಥಿಗಳ ದೋಷಗಳು

ಧೂಮಪಾನ

ಕಲ್ಕತ್ತಾದ ಪ್ರಾಧ್ಯಾಪಕರ ವಿನಂತಿಯ ಮೇರೆಗೆ ಈಗ ನಾನು ನಿಮಗೆ ಸಿಗರೇಟು ಸೇದುವುದು ಮತ್ತು ಚಹ-ಕಾಫಿಗಳನ್ನು ಸೇವಿಸುವುದು ಇವುಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇವು ಜೀವನಾವಶ್ಯಕ ವಿಷಯಗಳಲ್ಲ. ದಿನಕ್ಕೆ ಹತ್ತು ಕಪ್ಪು ಕಾಫಿ ಕುಡಿಯುವವರು ಹಲವರಿದ್ದಾರೆ. ಅವರ ಆರೋಗ್ಯಯುತ ಬೆಳವಣಿಗೆಗಾಗಲೀ, ಅವರನ್ನು ಕಾರ್ಯನಿರ್ವಹಣೆಗೆ ಸು-ಸಜ್ಜಿತವಾಗಿ ಇಡುವುದಕ್ಕಾಗಲೀ ಇದು ಅವಶ್ಯವೇ? ತಮ್ಮನ್ನು ಎಚ್ಚರವಾಗಿಡುವುದಕ್ಕೆ ವಿದ್ಯಾರ್ಥಿಗಳಿಗೆ ಚಹ-ಕಾಫಿಗಳ ಅಗತ್ಯವಿದ್ದರೆ, ಅವರು ಚಹ-ಕಾಫಿ ಕುಡಿಯದೆ ನಿದ್ದೆ ಹೋಗಲಿ. ನಾವು ಈ ವಿಷಯಗಳ ಗುಲಾಮರಾಗಕೂಡದು. ಆದರೆ ಚಹ-ಕಾಫಿ ಸೇವಿಸುವ ಬಹುಮಂದಿ ಈ ಚಟಗಳ ಗುಲಾಮರಾಗಿರುತ್ತಾರೆ. ಸಿಗಾರ್ ಇಲ್ಲವೆ ಸಿಗರೇಟುಗಳು ಸ್ವ-ದೇಶಿಯವೇ ಇರಲಿ, ವಿದೇಶಿಯವೇ ಇರಲಿ ಅವನ್ನು ಬಿಡಬೇಕು. ಸಿಗರೇಟು ಸೇದುವುದು ಉನ್ಮಾದಕವಾಗಿದ್ದು, ನೀವು ಸೇದುವ ಸಿಗಾರುಗಳಲ್ಲಿ ಅಫೀಮಿನ ಅಂಶವಿದೆ. ಅವು ನಿಮ್ಮ ನರಗಳ ಮೇಲೆ ಪರಿಣಾಮ ಮಾಡುತ್ತಿದ್ದು, ನೀವು ಅನಂತರ ಅವನ್ನು ಬಿಡಲಾರಿರಿ. ಯಾವನಾದರೂ ವಿದ್ಯಾರ್ಥಿಯು ತನ್ನ ಬಾಯನ್ನು ಹೊಗೆಗಿಂಡಿಯಾಗಿ ಮಾರ್ಪಡಿಸಿ ಹೊಲಸು ಮಾಡಿಕೊಳ್ಳುವುದಾದರೂ ಹೇಗೆ? ನೀವು ಈ ಚಟಗಳನ್ನು ಬಿಟ್ಟರೆ ಎಷ್ಟು ಉಳಿಸಬಹುದೆಂಬುದನ್ನೂ ಅರಿತುಕೊಳ್ಳುತ್ತೀರಿ. ಟಾಲ್‌ಸ್ಟಾಯ್‌ರು ಹೇಳಿದ ಒಂದು ಕಥೆಯನ್ನು ನೀವು ಬಲ್ಲಿರಿ. ಆ ಕಥೆಯಲ್ಲಿಯ ಕುಡಕ ಕೊಲೆಗಡುಕನು ಸಿಗರೇಟು ಸೇದದೆ ಕೊಲೆಮಾಡಲು ಹಿಂದುಮುಂದು ನೋಡುತ್ತಿದ್ದನು. ಆದರೆ, ಒಂದೆರಡು ಝುರಕಿಯನ್ನು ಎಳೆದವನೇ ನಗುತ್ತ ಎದ್ದು "ಎಂಥ ಹೇಡಿ ನಾನು!" ಅನ್ನುತ್ತ ತನ್ನ ಚೂರಿಯನ್ನು ಹಿರಿದು ಕೊಲೆಯ ಕೆಲಸವನ್ನು ಪೂರ್ತಿ ಮಾಡಿದನು. ಟಾಲ್‌ಸ್ಟಾಯ್ ಹೇಳಿದುದು

ಅನುಭವದಿಂದ. ಅವರು ಯಾವುದನ್ನೂ ಸ್ವಾನುಭವವಿಲ್ಲದೆ ಬರೆಯಲಿಲ್ಲ. ಅವರು ಸುರಾಪಾನಕ್ಕಿಂತ ಸಿಗಾರ್ ಮತ್ತು ಸಿಗರೇಟು ಸೇವನೆಯನ್ನು ಖಂಡಿಸುತ್ತಾರೆ. ಇದರಿಂದ ಸುರಾಪಾನ ಮತ್ತು ಸಿಗರೇಟು ಸೇವನೆಯಲ್ಲಿ ಸುರಾಪಾನವು ಕಡಿಮೆಯ ವಿಪತ್ತೆಂದು ಭಾವಿಸಬೇಡಿರಿ. ಸಿಗರೇಟ್ ಬೀಲ್ಝಬಬ್ ಆದರೆ, ಸುರೆ ಸೈತಾನ. (ಸಿಗರೇಟು ಕುಂಭಕರ್ಣನಾದರೆ, ಸುರೆ ರಾವಣ.)

(ಮದ್ರಾಸಿನ ಪಚ್ಚಿಯಪ್ಪಾ ಕಾಲೇಜಿನಲ್ಲಿ ಗಾಂಧೀಜಿ ಅವರ ಭಾಷಣದ ಆಯ್ದ ಭಾಗ)

– ಯಂಗ್ ಇಂಡಿಯಾ, 1927

ನೀವು ಯಾರಾದರೂ ಸಿಗರೇಟು ಸೇದುತ್ತಿದ್ದರೆ, ತಕ್ಷಣ ಆ ಚಟವನ್ನು ಬಿಟ್ಟುಬಿಡಬೇಕು. ಸೇದುವುದರಿಂದ ನಿಮ್ಮ ಉಸಿರು ಹೊಲಸಾಗುತ್ತದೆ. ಅದು ತೀರ ಹೇಸಿಗೆಯ ಚಟ. ರೈಲಿನಲ್ಲಿ ಪ್ರವಾಸ ಮಾಡುವಾಗ ಈ ಚಟವಿದ್ದ ಮನುಷ್ಯನು ತನ್ನ ಸುತ್ತಮುತ್ತಲು ಕುಳಿತವರು ಸ್ತ್ರೀಯರಿರಲಿ ಇಲ್ಲವೇ ಸೇದದವರಿರಲಿ ಇದಾವುದನ್ನೂ ಪರಿವೆಗೆ ತೆಗೆದುಕೊಳ್ಳುವುದಿಲ್ಲ. ತನ್ನ ಮುಖದಿಂದ ಬರುವ ದುರ್ನಾತವು ಅವರಿಗೆ ಹೇಸಿಗೆ ತರಿಸುತ್ತದೆಂಬುದನ್ನು ಅವನು ಗಮನಿಸುವುದಿಲ್ಲ. ದೂರದಿಂದ ಸಿಗರೇಟು ಸಣ್ಣದಾಗಿ ಕಂಡರೂ, ಅದರ ಹೊಗೆ ಒಂದು ಸಲ ಬಾಯಲ್ಲಿ ಹೋಗಿ ಬಂದಿತೆಂದರೆ, ವಿಷವಾಗಿ ಪರಿಣಮಿಸುತ್ತದೆ. ಸೇದುವವರಿಗೆ ತಾವು ಎಲ್ಲಿ ಉಗುಳುತ್ತೇವೆಂಬುದರ ಪರಿವೆಯೇ ಇರುವುದಿಲ್ಲ. ಟಾಲ್ಸ್ಟಾಯರು ಹೇಳಿದ ಕಥೇ ಗೊತ್ತೇ ಇದೆ. ಸೇದುವುದರಿಂದ ನಮ್ಮ ಬುದ್ಧಿ ಶಕ್ತಿಯು ಮಂದವಾಗುತ್ತದೆ. ನೀವು ಡಾಕ್ಟರರನ್ನು ಕೇಳಿದರೆ, ಒಳ್ಳೆಯ ಡಾಕ್ಟರರು ಸೇದುವುದರಿಂದ ಕ್ಯಾನ್ಸರ್ ರೋಗ ಉಂಟಾಗುತ್ತದೆಂಬುದನ್ನು ಹೇಳುತ್ತಾರೆ. ಹಾಗಿದ್ದಲ್ಲಿ ಜೀವನಕ್ಕೆ ಅದರ ಅವಶ್ಯಕತೆ ಇಲ್ಲದಾಗ ಯಾಕೆ ಸೇದಬೇಕು? ಸಿಗರೇಟು ಆಹಾರವಲ್ಲ. ನೀವು ಒಳ್ಳೆಯ ವಿದ್ಯಾರ್ಥಿಗಳಾಗಿದ್ದಲ್ಲಿ, ಸೇದುವುದನ್ನು ಬಿಟ್ಟುಬಿಟ್ಟು ಅದೇ ಉಳಿದ ಹಣವನ್ನು ಉಪವಾಸದಿಂದ ಸಾಯುತ್ತಿರುವ ನಿಮ್ಮ ದೇಶ ಬಾಂಧವರ ಸಹಾಯಧನವಾಗಿ ನನ್ನೆಡೆಗೆ ಕಳಿಸಿರಿ.

(ಸಿಂಹಳದ ಧರ್ಮರಾಜಾ ಕಾಲೇಜಿನ ಗಾಂಧೀಜಿ ಅವರ ಭಾಷಣದ ಆಯ್ದ ಭಾಗ)

ವರದಕ್ಷಿಣೆ ಪ್ರತಿಬಂಧದ ಬಗ್ಗೆ ಶಾಲೆ-ಕಾಲೇಜುಗಳಲ್ಲಿ ಮತ್ತು ಕನ್ಯೆಯರ ತಾಯಿ-ತಂದೆಗಳಲ್ಲಿ ಜಾಗೃತಿ ಪ್ರಾರಂಭವಾಗಬೇಕು. ಮದುವೆಗಾಗಿ ಮಾರಾಟದ ಬೆಲೆಯನ್ನು ಕೇಳುವ ಯುವಕನನ್ನು ವರಿಸಲು ತಮ್ಮ ಮಕ್ಕಳು ನಿರಾಕರಿಸಿ, ಇಂಥ ಹೀನ ಕರಾರುಗಳಿಗೆ ಮಣಿಯುವುದಕ್ಕಿಂತಲೂ ಅವಿವಾಹಿತರಾಗಿಯೇ ಉಳಿಯುವಂತೆ ನಿಶ್ಚಯಿಸುವ ಶಿಕ್ಷಣವನ್ನು ಕನ್ಯೆಯರ ತಾಯಿ-ತಂದೆಗಳು ತಮ್ಮ ಮಕ್ಕಳಿಗೆ ಕೊಡಬೇಕು. ಪರಸ್ಪರ ಪ್ರೀತಿ ಮತ್ತು ಒಪ್ಪಿಗೆಗಳೇ ಮದುವೆಯ ನಿಜವಾದ ಗೌರವಯುತವಾದ ಕರಾರುಗಳಾಗಿವೆ.

– ಯಂಗ್ ಇಂಡಿಯಾ, 1928

ತನ್ನ ಅಕ್ಕ ತಂಗಿಯರನ್ನು ಕಾಮುಕ ದೃಷ್ಟಿಯಿಂದ ನೋಡುವ ವಿದ್ಯಾರ್ಥಿಯು ಬ್ರಹ್ಮಚಾರಿಯಲ್ಲ.

ನಿಮ್ಮ ಹೆಂಡಂದಿರನ್ನು ನಿಮ್ಮ ಮನೆ-ಮನಗಳನ್ನು ರಾಜ್ಞಿಯರನ್ನಾಗಿ ಮಾಡದೆ, ಮಾರಾಟದ ಸರಕಿನಂತೆ ಕಾಣುತ್ತಿದ್ದೀರಿ. ಇಂಗ್ಲೀಷ್ ಸಾಹಿತ್ಯದ ಅಭ್ಯಾಸದಿಂದ ನೀವು ಕಲಿತ ಪಾಠವು ಇದೇ ಆಗಿದೆಯೇ? ಸ್ತ್ರೀ ಎಂದರೆ ಅರ್ಧಾಂಗಿ-ಉತ್ತಮಾಂಗಿ ಎಂದು ವರ್ಣಿಸಲಾಗಿದೆ. ಆದರೆ, ಅವಳನ್ನು ನೀವು ಗುಲಾಮಗಿರಿಗೆ ಇಳಿಸಿಬಿಟ್ಟಿದ್ದರಿಂದ ದೇಶಕ್ಕೆ ಪಾರ್ಶ್ವವಾಯುವುಂಟಾಗಿದೆ. ಸ್ವರಾಜ್ಯವು ಅಂಜುಬುರುಕರಿಗಾಗಿ ಇಲ್ಲವೆಂದು ಬಗೆದು ನಗು ನಗುತ್ತ ಶೂಲವನ್ನೇರುತ್ತ ತಮ್ಮ ಕಣ್ಣಿಗೆ ಅರಿವೆಯನ್ನು ಕೂಡ ಕಟ್ಟಿಕೊಳ್ಳಬಯಸದ ವೀರರಿಗೆ ಮಾತ್ರ ಸ್ವಾತಂತ್ರ್ಯವು ಮೀಸಲಾಗಿದೆ. ಈ ವರದಕ್ಷಿಣೆಯ ಕಲಂಕವನ್ನು ತೊಡೆದುಹಾಕಿ ನಿಮ್ಮ ಹೆಂಡಂದಿರಿಗೂ ಮತ್ತು ಅಕ್ಕ-ತಂಗಿಯರಿಗೂ ಸಂಪೂರ್ಣ ಸ್ವಾತಂತ್ರ್ಯ ಮತ್ತು ಪ್ರತಿಷ್ಠೆಯನ್ನು ತಂದು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಿದ್ಧರಾಗಿದ್ದೀರೆಂದು ನಾನು ಭಾವಿಸುತ್ತೇನೆ. ಹೆಣ್ಣು ಮಕ್ಕಳಿಗೆ ನಾನು ಹೇಳುವುದೇನೆಂದರೆ, ನನ್ನ ರಕ್ಷಣೆಯಲ್ಲಿ ಯಾವಳಾದರೂ ಹುಡುಗಿ ಇದ್ದರೆ ಅವಳನ್ನು ಹೆಂಡತಿಯಾಗಿ ಸ್ವೀಕರಿಸಲು ಒಂದು ಬಿಡಿ ಕಾಸನ್ನು ಬಯಸುವ ಯಾವ ವ್ಯಕ್ತಿಗೂ ಅವಳನ್ನು ಮದುವೆ ಮಾಡಿಕೊಡದೆ, ಇಡೀ ಆಯುಷ್ಯದುದ್ದಕ್ಕೂ ಅವಳನ್ನು ಅವಿವಾಹಿತಳನ್ನಾಗಿ ಇಡುತ್ತಿದ್ದೆ.

– ಯಂಗ್ ಇಂಡಿಯಾ, 1928

ಐಷಾರಾಮದ ಜೀವನ

ಸಾರ್ವಜನಿಕ ಖಜಾನೆಯಿಂದ ನಿಮ್ಮ ಶಿಕ್ಷಣಕ್ಕಾಗಿ ವೆಚ್ಚವಾಗುವ ಹಣ ತೀರ ಸ್ವಲ್ಪ ಅಂಶವಾದರೂ ಸಹ ನಿಮ್ಮ ಫೀ ಹಣದಿಂದ ಬರುವುದಿಲ್ಲವೆಂಬುದನ್ನು ಅರ್ಥಶಾಸ್ತ್ರದ ವಿದ್ಯಾರ್ಥಿಗಳಾದ ನೀವು ಅರಿತಿರಬಹುದು. ನನ್ನ ಮುದ್ದು ವಿದ್ಯಾರ್ಥಿಗಳೇ, ಈ ಉಳಿದ ಹಣ ಎಲ್ಲಿಂದ ಬರುತ್ತಿದೆಯೆಂಬ ಕಲ್ಪನೆಯಾದರೂ ನಿಮಗೆ ಬಂದಿದೆಯೇ? ಈ ಹಣವು ಬರುವುದು ತಮ್ಮ ಮುಖದ ಮೇಲೆ ನಿರಾಶೆಯ ಚಿತ್ರವನ್ನು ಬರೆದು ತಮ್ಮ ನಿಸ್ತೇಜ ಕಣ್ಣುಗಳುಳ್ಳವರೂ, ವರ್ಷದುದ್ದಕ್ಕೂ ಹೊಟ್ಟೆ ಕೊರೆಯುವ ಹಸಿವೆಯಿಂದ ನರಳುತ್ತಿರುವ ದೇಹವುಳ್ಳವರೂ, ತಮ್ಮ ಒಂದು ಹಿಡಿ ಮುಗ್ಗು ಅಕ್ಕಿ ಮತ್ತು ಒಂದು ಚಿಮಟೆ ಉಪ್ಪಿಗಾಗಿ ಯಾಚಿಸಿ, ತಮ್ಮ ಸೊಕ್ಕಿದ ಔದಾರ್ಯದಲ್ಲಿ ಚಿಮಟೆ ಉಪ್ಪನ್ನು ಬಿಸಾಕುವ ಶ್ರೀಮಂತ ಗುಜರಾಥಿ ಇಲ್ಲವೆ ಮಾರವಾಡಿಗಳೆದುರು ಸಾಲಾಗಿ ನಿಂತ ಬಡಜನರ ಸಜೀವ ಅಸ್ಥಿ ಪಂಜರಗಳ ಕಿಸೆಯಿಂದ ಬಂದುದು ಈ ನಿಮ್ಮ ಅಣ್ಣ ತಮ್ಮಂದಿರಿಗಾಗಿ ನೀವು ಏನನ್ನು ಮಾಡಿದ್ದೀರಿ? ತಮಗೆ ಒಂದೆರಡು ಬಿಡಿ ಕಾಸುಗಳನ್ನು ಒದಗಿಸುತ್ತಿದ್ದ, ನಿಮ್ಮ ಬಡ ಅಕ್ಕ ತಂಗಿಯರ ಪವಿತ್ರ ಹಸ್ತದಿಂದ ನಿರ್ಮಿತವಾಗುತ್ತಿರುವ ಸ್ವದೇಶೀ ಖಾದಿಯನ್ನು ನೀವು ಧರಿಸದೆ, ಪ್ರತಿ ವರುಷ ಪರದೇಶಕ್ಕೆ 60 ಕೋಟಿ ರೂಪಾಯಿ ಕಳಿಸಿ ನಮ್ಮ ಬಡ ಭಾರತೀಯರ ಬಾಯಿಂದ ರೊಟ್ಟಿಯನ್ನು ಕಸಿದುಕೊಳ್ಳುತ್ತಿರುವ ವ್ಯಾಪಾರಿಗಳ ವಿದೇಶೀ ವಸ್ತ್ರಗಳನ್ನು ಧರಿಸುತ್ತಿದ್ದೀರಿ. ಇದರ ಪರಿಣಾಮವಾಗಿ ದೇಶವು ಪುಡಿ ಪುಡಿಯಾಗಿದೆ. ಹಿಂದುಸ್ತಾನದ ರಕ್ತವನ್ನು ಹೀರುವುದಾದರೆ ಗಂಟು ಕಟ್ಟಿದ ಭಾಗಕ್ಕೆ ಶಸ್ತ್ರವನ್ನು ಹೆಚ್ಚಬೇಕೆಂದು ಲಾರ್ಡ್ ಸ್ಯಾಲಿಸ್‌ಬರಿಯಡ್‌ವರು ಹೇಳಿದ್ದರು. ಈ ರಕ್ತ ಹೀರುವಿಕೆಯ ಕ್ರಮದಿಂದಲೇ ಲಾರ್ಡ್ ಸ್ಯಾಲಿಸ್‌ಬರಿಯ ಕಾಲಕ್ಕೆ ಭಾರವಾದ ಆದಾಯವು ಬರುತ್ತಿದ್ದರೆ, ಅನೇಕ ವರುಷಗಳ ಸುಲಿಗೆಯಿಂದ ಹೆಚ್ಚು ಬಡವಾದ ಇಂದಿನ ಭಾರತದ ಕಾಲಕ್ಕೆ ಪರಿಸ್ಥಿತಿ ಎಷ್ಟು ವಿಪರೀತವಾಗಿರಬಹುದು? ಭಾರತದ ಜನಸಾಮಾನ್ಯರ ಈ ಜೀವನ ರಕ್ತದಿಂದ ನಮ್ಮ ಶಿಕ್ಷಣವು ಪೋಷಣವಾಗುತ್ತಿದೆಯೆಂಬುದನ್ನು ನೀವು ಲಕ್ಷ್ಯದಲ್ಲಿಡಿರಿ. ಇದೂ ಅಲ್ಲದೆ, ಕುಪ್ರಸಿದ್ಧವಾದ ಸೇಂದಿ ಶೆರೆಗಳ ಮೇಲಿನ ಕರದ ಮೂಲಕ ದೊರಕುವ ಹಣದಿಂದ ನಿಮ್ಮ ದೇಶ ಬಾಂಧವರನ್ನು ಅಧಃಪತನಕ್ಕೊತ್ತಿ ಅದರಿಂದ ನಿಮ್ಮ ಶಿಕ್ಷಣಕ್ಕೆ ಹಣವು ದೊರಕುವುದೆಂಬುದನ್ನು ನೀವು ಅರಿತಿರಬೇಕು. ಆದ್ದರಿಂದ ಆ ಪರಮಾತ್ಮನ ನಿರ್ಣಾಯಕ ಸಿಂಹಾಸನದೆದುರು ನೀವು ಈ ಭಯಂಕರವಾದ ಪ್ರಶ್ನೆಗೆ ಉತ್ತರ ಹೇಳಬೇಕಾಗಿದೆ: "ನೀವು ನಿಮ್ಮ ಅಣ್ಣ ತಮ್ಮಂದಿರಿಗಾಗಿ ಏನನ್ನು ಮಾಡಿದ್ದೀರಿ?" ಇದಕ್ಕೆ ನೀವು ಕೊಡುವ ಉತ್ತರವೇನು?

ನಿಮಗೆ ಹಜರತ್ ಉಮರರ ಕಥೆ ಗೊತ್ತಿದೆ. ಮುಸಲ್ಮಾನ ಸರದಾರರು ಐಷಾರಾಮಿ ಜೀವನಕ್ಕೆ ಮೆಚ್ಚಿ ಒಳ್ಳೆಯ ವಸ್ತ್ರಗಳನ್ನು ಧರಿಸಿದಾಗ ಹಜರತ್ ಉಮರರು ಚಾಳಿಸದಿದ್ದ ಹಿಟ್ಟಿನ ರೊಟ್ಟಿಯನ್ನು ತಿನ್ನದವರೂ, ಬಿರುಸಾದ ವಸ್ತ್ರವನ್ನು ಧರಿಸದವರೂ ಮಹಮದ ಪೈಗಂಬರರ ನಿಜವಾದ ಅನುಯಾಯಿಗಳಲ್ಲವೆಂದೂ ಅದಕ್ಕಾಗಿ ಅಂಥವರು ತಮ್ಮಿಂದ ದೂರ ಸಾರಿ ಹೋಗಬೇಕೆಂದೂ ಹೇಳಿದರು. ಪರಮಾತ್ಮ ಭೀರುವಾದ ಈ ಖಲೀಫನ ಜೀವನದಿಂದ ನೀವೊಂದು ಪಾಠವನ್ನು ಕಲಿಯಬೇಕಾಗಿದೆ.

– ಯಂಗ್ ಇಂಡಿಯಾ, 1929

ವರದಕ್ಷಿಣೆ

ಇತ್ತೀಚೆಗೆ, ಸಿಂದ ಹೈದರಾಬಾದದಲ್ಲಿ ವರಗಳ ಬೆಲೆ ವಿಪರೀತವಾಗಿ ಹೆದರಿಕೆ ಬರುವ ರೀತಿಯಲ್ಲಿ ಹೆಚ್ಚುತ್ತಿದೆಯೆಂದೂ, ಇಂಪೀರಿಯಲ್ ಟೆಲಿಗ್ರಾಫ್ ಎಂಜಿನಿಯರಿಂಗ್ ನೌಕರಿಯಲ್ಲಿದ್ದ ಒಬ್ಬ ಮನುಷ್ಯನು ಮದುವೆಯ ನಿಶ್ಚಯದ ಕಾಲಕ್ಕೆ 20,000 ರೂಪಾಯಿ ಸೆಳೆದುಕೊಂಡನೆಂದೂ ಮತ್ತು ಅನಂತರದ ಮದುವೆಯ ಕಾಲಕ್ಕೆ ಮತ್ತು ಇತರ ಸಂದರ್ಭಗಳಿಗಾಗಿ ಹಣದ ಆಶ್ವಾಸನೆಯನ್ನು ಪಡೆದಿದ್ದಾನೆಂದೂ ತಿಳಿಸುವ ಒಂದು ವರ್ತಮಾನ ಪತ್ರದ ವರದಿಯನ್ನು ಓದುಗರೊಬ್ಬರು ನನಗೆ ಕಳಿಸಿದ್ದಾರೆ. ವರದಕ್ಷಿಣೆಯನ್ನೇ ಮದುವೆಯ ಪಣವಾಗಿ ಮಾಡುವ ವ್ಯಕ್ತಿಯು ತಾನು ದೊರಕಿಸಿದ ಶಿಕ್ಷಣಕ್ಕೂ ತನ್ನ ದೇಶಕ್ಕೂ ಅನ್ಯಾಯ ಮಾಡುತ್ತಾನಲ್ಲದೆ, ಇಡೀ ಸ್ತ್ರೀತ್ವಕ್ಕೇ ಅಪಮಾನವನ್ನು ಮಾಡುತ್ತಿದ್ದಾನೆ. ದೇಶದಲ್ಲಿ ಅನೇಕ ಯುವ ಚಳುವಳಿಗಳು ನಡೆದಿವೆ. ಈ ಚಳುವಳಿಗಳು ಇಂಥ ಪ್ರಶ್ನೆಗಳ ಬಗ್ಗೆಯೂ ವಿಚಾರಿಸಬೇಕೆಂದು ನಾನು ಅಪೇಕ್ಷಿಸುತ್ತೇನೆ. ಜನ ಸಾಮಾನ್ಯರಿಂದ ದೊರಕುವ ಪ್ರಶಸ್ತಿಯೇ ತಮ್ಮ ಪ್ರತಿಫಲವೆಂದು ಯುವಕರು ಭಾವಿಸಬೇಕು. ವರದಕ್ಷಿಣೆಯ ಹೀನ ಕ್ರಮವನ್ನು ಖಂಡಿಸುವ ಸಾರ್ವಜನಿಕ ಅಭಿಪ್ರಾಯವು ನಿರ್ಮಿತವಾಗಬೇಕಲ್ಲದೆ, ಇಂಥ ಅ–ಪವಿತ್ರ ಧನಸಂಚಯದಿಂದ ತಮ್ಮ ಕೈಯನ್ನು ಮಲಿನಗೊಳಿಸುತ್ತಿರುವ ಯುವಕರನ್ನು ಸಮಾಜವು ಬಹಿಷ್ಕರಿಸಬೇಕು. ಇಂಗ್ಲೀಷ್ ಪದವಿಗಳ ಥಳಕಿಗೆ ಕಣ್ ಸೋಲದೆ, ಕನ್ಯೆಯರ ಮಾತಾಪಿತೃಗಳ ತಮ್ಮ ಸಣ್ಣ ಮತ್ತು ಪ್ರಾಂತಗಳ ಹೊರಗೆ ಹೋಗಿ ಮದುವೆಗಾಗಿ ನಿಜವಾದ ಉದಾರ ಹೃದಯಿಗಳನ್ನು ಹುಡುಕಲು ಹಿಂದು ಮುಂದು ನೋಡಬಾರದು.

– ಯಂಗ್ ಇಂಡಿಯಾ, 1930

ವಿದ್ಯಾರ್ಥಿ-ವಿದ್ಯಾರ್ಥಿನಿಯರ ನಡವಳಿಕೆ

ಪಂಜಾಬದ ಕಾಲೇಜ್ ವಿದ್ಯಾರ್ಥಿನಿಯು ಬರೆದ ಒಂದು ಅತಿ ಕಾರುಣ್ಯಪೂರ್ಣವಾದ ಪತ್ರವು ನನ್ನ ಕಾಗದ ಪತ್ರಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಇದೆ. ಆ ಪತ್ರಕ್ಕೆ ಉತ್ತರವನ್ನು ಕೊಡದಿರುವುದಕ್ಕೆ ವೇಳೆಯ ಅಭಾವವು ಒಂದು ನೆಪ ಮಾತ್ರವಾಗಿದ್ದಿತು. ನನಗೆ ಉತ್ತರವು ಗೊತ್ತಿದ್ದರೂ ನಾನು ಹೇಗೋ ಆ ಕೆಲಸವನ್ನು ತಪ್ಪಿಸುತ್ತಿದ್ದೆ. ಇಷ್ಟರಲ್ಲಿಯೇ ಸಾಕಷ್ಟು ಅನುಭವವುಳ್ಳ ಇನ್ನೊಬ್ಬಳು ಭಗಿನಿಯಿಂದಲೂ ಬಂದ ಪತ್ರದ ಮೂಲಕ ನಾನು ಈ ಕಾಲೇಜ್ ವಿದ್ಯಾರ್ಥಿನಿಯ ನಿಜವಾದ ಸಮಸ್ಯೆಗೆ ಉತ್ತರ ಕೊಡಬೇಕಾದ ಹೊಣೆಯನ್ನು ತಪ್ಪಿಸಲಾರೆನಾದೆ. ಈ ಭಗಿನಿಯು ತನ್ನ ಪತ್ರವನ್ನು ಶುದ್ಧವಾದ ಹಿಂದೀ ಭಾಷೆಯಲ್ಲಿ ಬರೆದಿದ್ದು ಅದರ ಪ್ರಮುಖವಾದ ಸಾರಾಂಶವನ್ನು ಈ ಕೆಳಗೆ ಕೊಡುತ್ತೇನೆ.

"ಯುವತಿಯರಿಗಾಗಲೀ, ದೊಡ್ಡವರಾದ ಹೆಣ್ಣು ಮಕ್ಕಳಿಗಾಗಲೀ, ಅವರಿಗೆ ಬೇಕಾಗಿರಲಿ ಬಿಡಲಿ, ಅನೇಕ ಸಲ ಒಬ್ಬರೇ ಒಂದು ಊರಿನಿಂದ ಮತ್ತೊಂದು ಊರಿಗೆ ಇಲ್ಲವೆ ಅದೇ ಊರಿನಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗಬೇಕಾದ ಪ್ರಸಂಗಗಳು ಬರುತ್ತವೆ. ಅವರು ಈ ರೀತಿಯಾಗಿ ಒಬ್ಬಂಟಿಗರಾಗಿ ಸಿಕ್ಕಾಗ ಪಾಪಿಷ್ಠ ಜನರು ಅವರಿಗೆ ತೊಂದರೆ ಕೊಡುತ್ತಾರೆ. ಹಾಯ್ದು ಹೋಗುವಾಗ ಇಂಥ ಜನರು ಅಯೋಗ್ಯವಾದ ಎಷ್ಟೋ ಸಲ ಅಶ್ಲೀಲವಾದ-ಭಾಷೆಯನ್ನು ಉಪಯೋಗಿಸುತ್ತಾರೆ. ಅಂಜಿಕೆಯು ಅವರನ್ನು ತಡೆಯದಿದ್ದರೆ, ಇದಕ್ಕೂ ಹೆಚ್ಚಿನ ಸ್ವಾತಂತ್ರ್ಯವನ್ನೂ ವಹಿಸುತ್ತಾರೆ. ಇಂಥ ಪ್ರಸಂಗದಲ್ಲಿ ಅಹಿಂಸೆಯಿಂದ ಮಾಡಬೇಕಾದುದೇನು? ಹಿಂಸೆಯನ್ನಂತೂ ಉಪಯೋಗಿಸಲು ಸಾಧ್ಯವಿದೆ. ಆ ಯುವತಿ ಇಲ್ಲವೆ ಹೆಣ್ಣುಮಗಳಿಗೆ ಸಾಕಷ್ಟು ಧೈರ್ಯವಿರದಿದ್ದರೆ, ತನ್ನಲ್ಲಿದ್ದ ಶಕ್ತಿಯನ್ನೆಲ್ಲ ಉಪಯೋಗಿಸಿ ಈ ಕಿಡಿಗೇಡಿಗಳಿಗೆ ಬುದ್ಧಿಯನ್ನು ಕಲಿಸುತ್ತಾಳೆ. ಏನಿಲ್ಲೆಂದರೂ,

ಕೂಗಿಕೊಂಡು ಗೊಂದಲವನ್ನೆಬ್ಬಿಸಿಯಾದರೂ, ಈ ಕಿಡಿಗೇಡಿಗಳನ್ನು ಚೆನ್ನಾಗಿ ಥಳಿಸಬಹುದು. ಆದರೆ, ಇಂಥ ಉಪಕ್ರಮದ ಪರಿಣಾಮವು ನೋವನ್ನು ಮುಂದು ಹಾಕಿದಂತೆಯೇ ಹೊರತು, ಶಾಶ್ವತವಾದ ನಿವಾರಣೆಯಾಗದು. ಇಂಥ ಪ್ರಸಂಗಗಳಲ್ಲಿ ಆ ಬಡಪಾಯಿ ಹುಡುಗಿ ಅಥವಾ ಹೆಣ್ಣು ಮಗಳು ಮಾಡಬೇಕಾದುದೇನು?

ಉದಾಹರಣೆಗಾಗಿ, ನಿನ್ನಿನ (26 ಅಕ್ಟೋಬರ್ 1938) ನನ್ನದೇ ಅನುಭವವನ್ನು ನಿಮಗೆ ವಿವರಿಸುತ್ತೇನೆ. ನಿನ್ನೆ ಸಂಜೆಯ ವೇಳೆ 7–30ರ ಸುಮಾರಿಗೆ ನಾನು ನನ್ನ ಗೆಳತಿಯೊಬ್ಬಳ ಕೂಡ ಒಂದು ಮಹತ್ವದ ಕೆಲಸದ ಸಲುವಾಗಿ ಹೊರಟಿದ್ದೆ. ಆ ವೇಳೆಯಲ್ಲಿ ಜೊತೆಗೆ ಯಾವ ಗಂಡಸೂ ಸಿಗುವಂತಿರಲಿಲ್ಲ. ಕೆಲಸವನ್ನು ಮುಂದು ಹಾಕಲೂ ಬರುವಂತಿರಲಿಲ್ಲ. ದಾರಿಯಲ್ಲಿ ಒಬ್ಬ ಸಿಖ್ ಯುವಕನು ನಮಗೆ ಕೇಳುವ ಹಾಗೆ ಏನನ್ನೋ ಗುಣಗುಟ್ಟುತ್ತ ಸಾಯಕಲ್ ಮೇಲಿಂದ ಬದಿಗೆ ಹಾಯ್ದು ಹೋದನು. ಅದು ನಮ್ಮನ್ನು ಉದ್ದೇಶಿಸಿಯೇ ಇತ್ತೆಂದು ನಮಗೆ ಗೊತ್ತಾಯಿತು. ನಮಗೆ ಆಘಾತವೆನಿಸಿ ಚಡಪಡಿಸಿದೆವು. ದಾರಿಯಲ್ಲಿ ಜನರ ಗದ್ದಲವೂ ಇರಲಿಲ್ಲ. ನಾವು ಹಲವು ಹೆಜ್ಜೆ ಹೋಗುವುದರಲ್ಲಿಯೇ ಆ ಯುವಕನು ಮರಳಿ ಬಂದನು. ಅವನು ಸ್ವಲ್ಪ ದೂರವಿರುವುದರಲ್ಲಿಯೇ ನಾವು ಅವನ ಗುರುತನ್ನು ಹಿಡಿದೆವು. ಅವನು ನಮ್ಮ ಕಡೆಗೆ ಸೈಕಲ್ ಗಾಲಿಯನ್ನು ತಿರುಗಿಸಿದನು. ಅವನೇನು ನಮ್ಮನ್ನು ದಾಟಿ ಹೋಗುವವನಿದ್ದನೋ ಇಲ್ಲವೆ ನಮ್ಮ ಹತ್ತಿರ ಇಳಿಯುವವನಿದ್ದನೋ ನಮಗೆ ಗೊತ್ತಾಗಲಿಲ್ಲ. ನಾವು ಗಂಡಾಂತರದಲ್ಲಿದ್ದೇವೆಂದು ನಮಗನಿಸಿತು. ನಮ್ಮ ದೈಹಿಕ ಶಕ್ತಿಯ ಬಗ್ಗೆ ನಮಗೆ ವಿಶ್ವಾಸವಿರಲಿಲ್ಲ. ನಾನಂತೂ ಒಬ್ಬ ಸಾಮಾನ್ಯ ಹುಡುಗಿಯರಿಗಿಂತ ಹೆಚ್ಚು ಅಶಕ್ತಳಾಗಿದ್ದೇನೆ. ಆದರೆ, ನನ್ನ ಕೈಯಲ್ಲೊಂದು ದೊಡ್ಡ ಪುಸ್ತಕವಿದ್ದಿತು. ಅದು ಹೇಗೋ ಏನೋ ಒಮ್ಮೆಲೆಯೇ ನನ್ನಲ್ಲಿ ಧೈರ್ಯ ಸಂಚಾರವಾಯಿತು. ಆ ದೊಡ್ಡ ಪುಸ್ತಕವನ್ನು ಸೈಕಲ್ ಕಡೆಗೆ ಬೀಸಿ "ಇನ್ನೊಮ್ಮೆ ಕುಚೇಷ್ಟೆ ಮಾಡಲು ಪ್ರಯತ್ನಿಸುತ್ತೀಯಾ?" ಎಂದು ಗುಡುಗಿದೆ. ಅವನು ತನ್ನ ಸಮತೋಲನವನ್ನು ಕಾಯ್ದುಕೊಳ್ಳುವುದಾಗದೆ, ಜೋರಿನಿಂದ ಸೈಕಲ್ ಓಡಿಸಿ ಪಲಾಯನ ಹೇಳಿದನು. ಈಗ, ನಾನು ಆ ಪುಸ್ತಕವನ್ನು ಒಗೆದಿರದಿದ್ದರೆ, ಆ ಮನುಷ್ಯನು ನಮ್ಮ ಪ್ರಯಾಣ ಮುಗಿಯುವವರೆಗೂ ಹೇಸಿ ಮಾತುಗಳನ್ನು ಆಡುತ್ತ ನಮಗೆ ತೊಂದರೆ ಕೊಡುತ್ತಿದ್ದನು. ಇದು ಬಹುಶಃ ಸಾಮಾನ್ಯವಾದ ಕ್ಷುಲ್ಲಕ ಘಟನೆ. ಆದರೆ, ನೀವು ಇಲ್ಲಿ ಲಾಹೋರಕ್ಕೆ ಬಂದು ದುರ್ದೈವಿಗಳಾದ ನಮ್ಮ ಹೆಣ್ಣು ಮಕ್ಕಳ ಸಂಕಟಗಳನ್ನು ಕೇಳಬೇಕು. ಅದಕ್ಕೂ ಮೊದಲು, ಈ ಮೇಲಿನ ಪ್ರಸಂಗದಲ್ಲಿ ಹುಡುಗಿಯರು ಅಹಿಂಸೆಯಿಂದ ತಮ್ಮನ್ನು

ಹೇಗೆ ರಕ್ಷಿಸಿಕೊಳ್ಳಬೇಕೆಂಬುದನ್ನು ನೀವು ತಿಳಿಸಬೇಕು. ಎರಡನೆಯದಾಗಿ, ಹೀಗೆ ಸ್ತ್ರೀಯರ ಅಪಮಾನವನ್ನು ಮಾಡುವ ಗರ್ಹಣೀಯವಾದ ಚಟವುಳ್ಳ ಯುವಕರನ್ನು ತಿದ್ದುವ ಮಾರ್ಗವಾವುದೆಂಬುದನ್ನು ತಿಳಿಸಬೇಕು. ಸ್ತ್ರೀಯರಿಗೆ ಮರ್ಯಾದೆಯನ್ನು ತೋರಿಸಬೇಕೆಂದು ತಮ್ಮ ಬಾಲ್ಯದಿಂದಲೂ ಕಲಿಸಲ್ಪಟ್ಟ ಜನಾಂಗವು ನಿರ್ಮಾಣವಾಗುವವರೆಗೆ ನಾವು ತಡೆಯಬೇಕೆಂದು ನೀವು ಸೂಚಿಸುವುದಿಲ್ಲವೆಂದು ನಾವು ಬಗೆದಿದ್ದೇನೆ. ಈ ಸಾಮಾಜಿಕ ದುಷ್ಪ್ರವೃತ್ತಿಯನ್ನು ಎದುರಿಸಲು ಸರಕಾರಕ್ಕೆ ಮನಸ್ಸಾದರೂ ಇಲ್ಲ. ಅಥವಾ ಶಕ್ತಿಯಾದರೂ ಇಲ್ಲ. ನಾಡಿನ ದೊಡ್ಡ ಮುಖಂಡರಿಗೆ ಇಂಥ ಪ್ರಶ್ನೆಗಳನ್ನು ವಿಚಾರಿಸಲು ವೇಳೆಯಿಲ್ಲ. ಅವ್ಯವಹಾರಿಯಾದ ಯುವಕನಿಗೆ ಯಾವಳಾದರೂ ಹುಡುಗಿಯ ಧೈರ್ಯದಿಂದ ಛೀ ಹಾಕಿದ್ದನ್ನು ಕೇಳಿದರೆ ಹಲವರು "ಭಾಪು! ಸರಿಯಾದ ಕೆಲಸ!! ಎಲ್ಲ ಹುಡುಗಿಯರೂ ಇದೇ ರೀತಿಯಾಗಿ ನಡೆದುಕೊಳ್ಳಬೇಕು" ಎಂದು ಅನ್ನುತ್ತಾರೆ. ಹಲವು ಸಲ ಕೆಲವು ಮುಖಂಡರು ಇಂಥ ಅಸಭ್ಯ ವರ್ತನೆಯ ವಿದ್ಯಾರ್ಥಿಗಳ ವಿರುದ್ಧ ತಮ್ಮ ವಾಗ್ವೈಖರಿಯನ್ನು ಪ್ರದರ್ಶಿಸುತ್ತಾರೆ. ಆದರೆ, ಯಾರೂ ಬಿಟ್ಟೂ ಬಿಡದೆ ಈ ಗಂಭೀರ ಸಮಸ್ಯೆಯನ್ನು ಪರಿಶೀಲಿಸುತ್ತಿಲ್ಲ. ದೀಪಾವಳಿಯ ಕಾಲದಲ್ಲಿ ಮನೆ ಬಿಟ್ಟು ಹೊರಗೆ ಬರಬಾರದೆಂದೂ ಆಗ ದೀಪೋತ್ಸವವನ್ನು ನೋಡಲು ಸಹ ಹೆಣ್ಣು ಮಕ್ಕಳು ಹೊರಗೆ ಹೋಗಬಾರದೆಂದೂ ನಮ್ಮ ಕಡೆಗೆ ಜಾಹಿರಾತುಗಳನ್ನು ಹಂಚುತ್ತಾರೆಂದೂ ನಿಮಗೆ ಬಹುಶಃ ಸಖೇದಾಶ್ಚರ್ಯವಾಗಬಹುದು. ಪ್ರಪಂಚದ ಅರಿವು ಇದೊಂದು ಘಟನೆಯಿಂದ ನಿಮಗೆ ಸ್ಪಷ್ಟವಾಗಬಹುದು. ಇಂಥ ಜಾಹಿರಾತುಗಳನ್ನು ಹೊರಡಿಸಬೇಕಾಗುತ್ತದಲ್ಲ ಎಂಬುದರ ಬಗ್ಗೆ ಅವನ್ನು ಓದುವವರಿಗಾಗಲೀ ಬರೆದವರಿಗಾಗಲೀ ಯಾವ ರೀತಿಯ ನಾಚಿಕೆಯೂ ಅನಿಸುವುದಿಲ್ಲ....

ನಾನು ಈ ಪತ್ರವನ್ನು ಓದಲಿಕ್ಕೆ ಕೊಟ್ಟ ಇನ್ನೊಬ್ಬ ಪಂಜಾಬಿ ಹುಡುಗಿಯ ತನ್ನ ಕಾಲೇಜು ದಿನದ ಅನುಭವದಿಂದ ಈ ಹೇಳಿಕೆಯನ್ನು ಸಮರ್ಥಿಸಿದಳಲ್ಲದೆ, ನನ್ನ ವಾಚಕಳು ಬರೆದ ಅನುಭವವು ಅನೇಕ ವಿದ್ಯಾರ್ಥಿನಿಯರ ಸಾಮಾನ್ಯವಾದ ಅನುಭವವಾಗಿದೆಯೆಂದು ಹೇಳಿದಳು.

ಇನ್ನೊಬ್ಬ ಅನುಭವಿಕ ಸ್ತ್ರೀಯು ಬರೆದ ಪತ್ರವು ಲಖನೌದಲ್ಲಿರುವ ಅವಳ ಗೆಳತಿಯರ ಅನುಭವಗಳಿಗೆ ಸಂಬಂಧಪಟ್ಟದ್ದಾಗಿದೆ. ಹಿಂದಿನ ಸಾಲಿನ ಕುರ್ಚಿಯಲ್ಲಿ ಕುಳಿತು ಎಲ್ಲ ತರಹದ ಅವಾಚ್ಯ ಮಾತುಗಳನ್ನಾಡುತ್ತಾ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರನ್ನು ಹಿಂಸಿಸುತ್ತಾರೆ. ವಿದ್ಯಾರ್ಥಿಗಳ ಈ ಭಾಷೆಯನ್ನು ನಾನು

ಅ–ಸಭ್ಯ ಎಂದು ಮಾತ್ರ ಇಲ್ಲಿ ಕರೆಯುತ್ತೇನೆ. ಅದೂ ಅಲ್ಲದೆ, ಈ ವಾಚಕಳ ಪ್ರಕಾರ ಹಲ ಕೆಲವು ಸಲ ಇಲ್ಲಿ ನಾನು ವಿವರಿಸಿದಷ್ಟು ಅತಿಯಾದ ಕುಚೇಷ್ಟೆಗಳನ್ನು ಕೂಡ ವಿದ್ಯಾರ್ಥಿಗಳು ಮಾಡುತ್ತಾರೆಂದೂ ಹೇಳಲಾಗಿದೆ....

ತುರ್ತಾದ ವೈಯಕ್ತಿಕ ನಿವಾರಣೆಯು ಮಾತ್ರ ಬೇಕಾಗಿದ್ದರೆ, ತಾನು ಅಶಕ್ತಳೆಂದೂ ಹೇಳಿಕೊಂಡು ಸೈಕಲ್ಲಿಗೆ ಪುಸ್ತಕವನ್ನು ಒಗೆದ ವಿದ್ಯಾರ್ಥಿನಿಯು ಅಂಗೀಕರಿಸಿದ ಉಪಾಯವು ಸಂಪೂರ್ಣ ಸರಿಯಾದದ್ದಾಗಿದೆ. ಇದು ಪರಂಪರಾಗತವಾಗಿ ಹೇಳಿದಂತೆ, ಮನುಷ್ಯನು ಹಿಂಸಾತ್ಮಕನಾಗ ಬಯಸಿದಾಗ, ದೈಹಿಕ ದುರ್ಬಲತೆಯು ಬೇಕಾದಂಥ ಬಲಿಷ್ಠನನ್ನು ಕೂಡ ಅವನು ಎದುರಿಸುವಲ್ಲಿ ಅಡ್ಡ ಬಾರದು. ಇನ್ನು ಅ–ವಾಚ್ಯ ಮಾತುಗಳ ವಿಷಯ ಇವುಗಳ ಬಗ್ಗೆ ತಳಮಳವೂ ಇರಕೂಡದು, ಉದಾಸೀನ ಭಾವವೂ ಇರಕೂಡದು. ಇಂಥ ಎಲ್ಲ ಘಟನೆಗಳನ್ನೂ ವೃತ್ತಪತ್ರಿಕೆಗಳಲ್ಲಿ ಪ್ರಸಿದ್ಧಿಸಬೇಕು. ಅಪರಾಧಿಗಳನ್ನು ಪತ್ತೆ ಹಚ್ಚಿದಾಗ ಅವರ ಹೆಸರನ್ನೂ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಇಂಥ ದುಷ್ಪ್ರ ವೃತ್ತಿಯನ್ನು ಬಹಿರಂಗಗೊಳಿಸುವ ಬಗ್ಗೆ ಯಾವ ತೋರಿಕೆಯ ವಿನಯಭಾವವೂ ಉಪಯುಕ್ತವಾದದ್ದಲ್ಲ. ಸಾಮಾಜಿಕ ಅವ್ಯವಹಾರವನ್ನು ಛೀ ಹಾಕಲು ಸಾರ್ವಜನಿಕ ಅಭಿಪ್ರಾಯದಷ್ಟು ಪ್ರಬಲವಾದದ್ದು ಬೇರಾವುದೂ ಇಲ್ಲ. ನಮ್ಮ ವಾಚಕರು ತಿಳಿಸಿದ ಪ್ರಕಾರ ಇಂಥ ವಿಷಯಗಳ ಬಗ್ಗೆ ಸಾರ್ವಜನಿಕ ಔದಾಸೀನ್ಯವಿದೆಯೆಂಬುದರಲ್ಲೇನೂ ಸಂಶಯವಿಲ್ಲ. ಆದರೆ, ಇದರಲ್ಲಿ ಸಾರ್ವಜನಿಕರಷ್ಟೇ ನಿಂದಾರ್ಹರಾಗಿಲ್ಲ. ಅವರೆದುರಿಗೆ ನಾವು ಭೀಭತ್ಸ ನಡತೆಯ ದೃಷ್ಟಾಂತಗಳನ್ನು ಎತ್ತಿತೋರಿಸಬೇಕು. ಕಳ್ಳತನದ ಘಟನೆಗಳನ್ನು ಪ್ರಕಟಿಸಿ ಅವುಗಳ ಬೆನ್ನು ಹತ್ತದ ಹೊರತು ಹೇಗೆ ಕಳ್ಳತನವು ಮಾಯವಾಗಲಾರದೋ ಹಾಗೆಯೇ, ಭೀಭತ್ಸ ನಡತೆಯನ್ನು ಬಹಿರಂಗಗೊಳಿಸದ ಹೊರತು ಅವುಗಳ ವಿಷಯವಾಗಿ ಏನೂ ಮಾಡಲಾಗುವುದಿಲ್ಲ. ಅಪರಾಧ ಮತ್ತು ಪಾಪಗಳು ಸುಳಿದಾಡಲಿಕ್ಕೆ ಸಾಮಾನ್ಯವಾಗಿ ಕತ್ತಲೆ ಬೇಕು. ಅವುಗಳ ಮೇಲೆ ಬೆಳಕು ಬಿದ್ದಾಕ್ಷಣಕ್ಕೆ ಅವು ಇಲ್ಲವಾಗುತ್ತದೆ.

ಇವೆಲ್ಲವುಗಳಲ್ಲಿ ಮುಖ್ಯ ಪ್ರಶ್ನೆಯೆಂದರೆ, ಒಳ್ಳೆಯ ಹುಡುಗಿಯರು ಸದಾಕಾಲದಲ್ಲಿಯೂ ತಮ್ಮ ಕೀಟಲೆಗೆ ಹೆದರಿರುವ ಹಾಗೆ ಮಾಡುವ ಅಸಂಸ್ಕೃತ ನಡತೆಯು ನಮ್ಮ ವಿದ್ಯಾರ್ಥಿಗಳಲ್ಲಿ ಏಕಿರಬೇಕೋ ತಿಳಿಯದಾಗಿದೆ. ನಮ್ಮ ವಿದ್ಯಾರ್ಥಿಗಳಲ್ಲಿ ಬಹುಜನರು ಸ್ತ್ರೀಯರ ಬಗ್ಗೆ ಇರುವ ಔದಾರ್ಯಭಾವವನ್ನು

ಕಳೆದುಕೊಂಡಿದ್ದರೆ, ನನಗೆ ನಿಜವಾಗಿಯೂ ಕೆಡಕೆನಿಸುತ್ತದೆ. ವಿದ್ಯಾರ್ಥಿಗಳು ತಮ್ಮ ವರ್ಗದ ಮರ್ಯಾದೆಯ ಬಗ್ಗೆ ಬಹಳೆ ಜಾಗೃತರಾಗಿದ್ದು, ಇಂಥ ಪ್ರತಿಯೊಂದು ಕಿಡಿಗೇಡಿತನದ ಪ್ರಸಂಗವನ್ನು ಸರಿಯಾಗಿ ದಾರಿಗೆ ತರಬೇಕು. ಸ್ವತಃ ತಮ್ಮ ಅಕ್ಕ-ತಂಗಿ ಇಲ್ಲವೆ ತಾಯಿಯ ಮರ್ಯಾದೆಯಷ್ಟು ಪ್ರತಿಯೊಬ್ಬ ಹೆಣ್ಣು ಮಗಳ ಮರ್ಯಾದೆಯೂ ಪ್ರಿಯವಾದದ್ದೆಂಬುದನ್ನು ಅವರು ಅರಿತುಕೊಳ್ಳಬೇಕು. ವಿದ್ಯಾರ್ಥಿಗಳು ಒಳ್ಳೆಯ ನಡತೆಯನ್ನು ಕಲಿಯದಿದ್ದರೆ, ಎಲ್ಲ ಶಿಕ್ಷಣವೂ ನಿರರ್ಥಕವಾದದ್ದೇ, ಅದೂ ಅಲ್ಲದೆ, ವರ್ಗದ ಅಭ್ಯಾಸ ವಿಷಯಗಳಲ್ಲಿ ವಿದ್ಯಾರ್ಥಿಗಳನ್ನು ಸಿದ್ಧ ಮಾಡುವಂತೆ, ವಿದ್ಯಾರ್ಥಿಗಳ ನಡತೆಯಲ್ಲಿಯೂ ಸಜ್ಜನಿಕೆ ಇರುವಂತೆ ನೋಡಿಕೊಳ್ಳುವುದು ಶಿಕ್ಷಕರು ಮತ್ತು ಪ್ರಾಧ್ಯಾಪಕರ ಕರ್ತವ್ಯವಾಗಿಲ್ಲವೇ?

– **ಹರಿಜನ, 1938**

ವಿದ್ಯಾರ್ಥಿನಿಯರನ್ನು ಕುರಿತು

ವರದಕ್ಷಿಣೆ ಇಲ್ಲವೆ ಮಾರಾಟದ ಮದುವೆ

ವರದಕ್ಷಿಣೆಯ ಪದ್ಧತಿಯು ಹೋಗಲೇಬೇಕು. ಮದುವೆಯೆಂದರೆ ಹಣದ ಸಲುವಾಗಿ ತಾಯಿ ತಂದೆಗಳು ಮಾಡಿದ ವ್ಯವಸ್ಥೆ ಎಂಬ ಪದ್ಧತಿ ನಿಲ್ಲಬೇಕು. ಈ ಕ್ರಮವು ನಮ್ಮ ಜಾತಿಯ ಪದ್ಧತಿಯ ಕೂಡ ಹೊಂದಿಕೊಂಡಿದೆ. ಎಲ್ಲಿಯವರೆಗೆ ಆಯ್ಕೆಯು ಆ ಜಾತಿಯ ಕೇವಲ ನೂರಿಪ್ಪತ್ತು ಸ್ತ್ರೀ–ಪುರುಷರಿಗೆ ಮಾತ್ರ ಮರ್ಯಾದಿತವಾಗಿರುತ್ತದೆಯೋ, ಅಲ್ಲಿಯವರೆಗೆ ನಾವು ಈ ಪದ್ಧತಿಯ ವಿರುದ್ಧವಾಗಿ ಎಷ್ಟೇ ಹೇಳಿದರೂ, ಇದು ಹಾಗೆಯೇ ಮುಂದುವರಿಯುವುದೇ. ಈ ಅನಿಷ್ಟ ಪದ್ಧತಿಯ ನಿವಾರಣೆಯಾಗಬೇಕಾದರೆ, ನಮ್ಮ ಹುಡುಗ–ಹುಡುಗಿಯರೂ ಮತ್ತು ಅವರ ತಾಯಿ–ತಂದೆಗಳೂ ಜಾತಿಯ ಬಂಧನವನ್ನು ಮುರಿದು ಹಾಕಬೇಕು. ಅದೂ ಅಲ್ಲದೆ, ಕನ್ನೆಯರ ಮದುವೆಯ ವಯಸ್ಸನ್ನೂ ಹೆಚ್ಚಿಸಬೇಕಲ್ಲದೆ, ಸರಿಯಾದ ವರನು ಸಿಗದಿದ್ದರೆ ನಮ್ಮ ಹುಡುಗಿಯರು ಅವಶ್ಯ ಬಿದ್ದರೆ, ಅವಿವಾಹಿತರಾಗಿಯೂ ಉಳಿಯಲು ಸಿದ್ಧರಾಗಬೇಕು. ಇದಲ್ಲವೆಂದರೆ ನಮ್ಮ ಯುವ ಜನಾಂಗದ ದೃಷ್ಟಿಕೋನದಲ್ಲಿ ಕ್ರಾಂತಿಯನ್ನುಂಟು ಮಾಡುವಂಥ ಚಾರಿತ್ರ್ಯದ ಶಿಕ್ಷಣವು ನಮಗೆ ಬೇಕು. ದುರ್ದೈವದಿಂದ, ನಮ್ಮ ಶಿಕ್ಷಣಕ್ಕೂ ನಮ್ಮ ಸುತ್ತಲಿನ ವಾತಾವರಣಕ್ಕೂ ಯಾವ ಸಂಬಂಧವೂ ಇಲ್ಲದ ಮೂಲಕ ಪರಿಸ್ಥಿತಿಯು ಹಾಗೆಯೇ ಉಳಿಯುತ್ತ ಬಂದಿದೆ. ಆದ್ದರಿಂದ, ಈ ಅನಿಷ್ಟ ಪದ್ಧತಿಯು ಕಡಿಮೆಯಾಗುವಂತೆ ಮಾಡುವ ಪ್ರಯತ್ನಗಳಂತೂ ಇರಲಿ, ಇದರ ಜೊತೆಗೆ ಈ ಪ್ರಶ್ನೆಯನ್ನು ಬಿಡಿಸಬೇಕಾದರೆ ಕ್ಷಣ ಕ್ಷಣಕ್ಕೆ ಬದಲಾಗುತ್ತಿರುವಂಥ ಸಮಾಜ ಪರಿವರ್ತನೆಗೆ ಅನುವರ್ತಿತವಾಗಿರುವ ಶಿಕ್ಷಣ ಪದ್ಧತಿಯು ನಮ್ಮಲ್ಲಿ ಬೇಕು. ಇಲ್ಲವಾದರೆ, ತಮ್ಮ ಭವಿತವ್ಯವನ್ನು ಇಷ್ಟು ಪ್ರಬಲವಾಗಿ ಮಾರ್ಪಡಿಸುವಂಥ ಮದುವೆಯ ವಿಷಯವಾದ ಇಂಥ ಅನಿಷ್ಟ ಪದ್ಧತಿಯ ವಿರುದ್ಧ ತಮ್ಮ ಪ್ರತಿಕ್ರಿಯೆಯನ್ನು ಕಾಲೇಜು ಪರೀಕ್ಷೆಗಳನ್ನು ಕೂಡ ಪಾಸಾದ ಯುವಕ

ಯುವತಿಯರು ಏಕೆ ವ್ಯಕ್ತಪಡಿಸುತ್ತಿಲ್ಲ? ತಮಗೆ ಸರಿಯಾದ ವರನು ಸಿಗಲಿಲ್ಲವೆಂದು ಕಾಲೇಜ್ ವಿದ್ಯಾರ್ಥಿನಿಯರು ಆತ್ಮಹತ್ಯೆ ಮಾಡಿಕೊಳ್ಳುವುದಾದರೂ ಏಕೆ? ಯಾವ ರೀತಿಯಿಂದಲೂ ಸಮರ್ಥಿಸಲಾರದಂಥ ಮತ್ತು ನೀತಿಮತ್ತೆಗೆ ಆಘಾತವನ್ನುಂಟು ಮಾಡುವಂಥ ಈ ಹೀನ ಸಂಪ್ರದಾಯವನ್ನು ಪ್ರತಿಭಟಿಸುವ ಧೈರ್ಯವನ್ನು ನಮ್ಮ ಶಿಕ್ಷಣ ಪದ್ಧತಿಯೂ ಕೊಡದಿದ್ದರೆ ಅದರ ಉಪಯೋಗವಾದರೂ ಏನು? ಇದರ ಉತ್ತರ ಸ್ಪಷ್ಟವೇ ಇದೆ. ಸಾಮಾಜಿಕ ಇಲ್ಲವೆ ಇತರ ದುಷ್ಟ ಸಂಪ್ರದಾಯಗಳ ವಿರುದ್ಧ ಪ್ರತಿಭಟಿಸುವ ಸಾಮರ್ಥ್ಯವನ್ನು ನಮ್ಮ ಯುವಕ ಯುವತಿಯರಿಗೆ ಕೊಡದಿರುವ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಆಮೂಲಾಗ್ರವಾದ ದೋಷವಿದೆ. ಜೀವನದ ಪ್ರತಿಯೊಂದು ವಿಭಾಗದಲ್ಲಿಯ ಸಮಸ್ಯೆಯನ್ನು ಸರಿಯಾಗಿ ನಿವಾರಿಸುವ ಶಕ್ತಿಯನ್ನು ನಮ್ಮ ಯುವಕ ಯುವತಿಯರಿಗೆ ಕೊಡುವ ಶಿಕ್ಷಣವೇ ನಿಜವಾಗಿ ಬೆಲೆಯುಳ್ಳದ್ದು.

(ಗಾಂಧೀಜಿಯವರು ನವ ಯುವತಿಯು ಆರು ಜನ ರೋಮಿಯೋಗಳ ಕೂಡ ಜ್ಯೂಲಿಯೆಟ್ ಆಟವಾಡಲು ಬಯಸುತ್ತಾಳೆ ಎಂದು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಆಕ್ಷೇಪಿಸಿ ಹಲವು ವಿದ್ಯಾರ್ಥಿನಿಯರು ಬರೆದ ಪತ್ರಕ್ಕೆ ಗಾಂಧೀಜಿ ಈ ರೀತಿ ಉತ್ತರ ಕೊಟ್ಟರು)

– ಹರಿಜನ, 1936

ಹನ್ನೊಂದು ಜನ ಹುಡುಗಿಯರ ಪರವಾಗಿ ಬರೆಯಲ್ಪಟ್ಟ ಪತ್ರವೊಂದು ನನಗೆ ಬಂದಿದೆ. ಅದರ ಅರ್ಥದಲ್ಲಿ ಯಾವ ಬದಲಾವಣೆಯೂ ಆಗದಂತೆ ಮತ್ತು ಅದು ವಾಚನಾರ್ಹವಾಗುವಂತೆ ಅದರಲ್ಲಿ ಸ್ವಲ್ಪ ಮಾರ್ಪಾಡುಗಳನ್ನು ಮಾಡಿ ಅದನ್ನು ಕೊಡುತ್ತಿದ್ದೇನೆ.

"......ನೀವು ಆಧುನಿಕ ಯುವತಿಯನ್ನು ಆರು ರೋಮಿಯೋಗಳ ಜ್ಯೂಲಿಯೆಟ್ ಆಟವಾಡಲು ಬಯಸುವ ವ್ಯಕ್ತಿಯೆಂದು ವರ್ಣಿಸುವ ಮಟ್ಟಿಗೆ ನವ ಯುವತಿಯರು ನಿಮ್ಮನ್ನು ಉದ್ರೇಕಿಸಿದಂತೆ ಕಾಣುತ್ತದೆ. ಸಾಮಾನ್ಯವಾಗಿ ಸ್ತ್ರೀಯರೆಲ್ಲರ ಬಗ್ಗೆಯೂ ನೀವು ವ್ಯಕ್ತಪಡಿಸಿದ ಈ ಅಭಿಪ್ರಾಯವು ಉತ್ಸಾಹಜನಕವಾಗಿಲ್ಲ. ಪುರುಷರ ಸಹಾಯಕರಾಗಿ ಅವರ ಜೀವನದ ಹೊಣೆಯಲ್ಲಿ ಸಮಾನವಾದ ಭಾಗವನ್ನು ವಹಿಸಲು ಸ್ತ್ರೀಯರು ಅವರನ್ನು ಹಿಂಸಿಸಿದಾಗಲೂ ಇನ್ನೂ ಸ್ತ್ರೀಯರನ್ನೇ ದೂಷಿಸುವುದೆಂದರೆ ನಿಜವಾಗಿಯೂ ಆಶ್ಚರ್ಯಕರವಾದುದು. ಎರಡೂ ಕಡೆಗೆ ಅಷ್ಟೇ ತಪ್ಪುಗಳಿದ್ದ ಉದಾಹರಣೆಗಳನ್ನೇನೋ ಕೊಡಬಹುದು. ಆರು ಜನ ರೋಮಿಯೋಗಳ ಕೂಡ ಜ್ಯೂಲಿಯೆಟ್ ಆಟವಾಡುವ ಹಲವು ಹುಡುಗಿಯರಿರಬಹುದು. ಆದರೆ, ಇದರರ್ಥವೆಂದರೆ, ದಾರಿಯಲ್ಲಿ ಜ್ಯೂಲಿಯೆಟ್‌ರನ್ನು ಹುಡುಕುತ್ತ ಅಲೆದಾಡುವ

ಆರು ಜನ ರೋಮಿಯೋಗಳೂ ಇದ್ದಾರೆಂಬುದನ್ನು ಲಕ್ಷ್ಯದಲ್ಲಿಡಬೇಕು. ಇದರಿಂದ ಎಲ್ಲ ಆಧುನಿಕ ಯುವತಿಯರೂ ಸ್ಪಷ್ಟವಾಗಿ ಜ್ಯೂಲಿಯೆಟ್‌ರಾಗಿದ್ದಾರೆಂದೂ, ಎಲ್ಲ ಯುವಕರೂ ರೋಮಿಯೋಗಳಾಗಿದ್ದಾರೆಂದೂ ಗ್ರಹಿಸಬಾರದು. ನಿಮಗೇ ಸಂಪರ್ಕ ಬಂದ ಅನೇಕ ನವ ಯುವತಿಯಲ್ಲಿರುವ ದೃಢ ನಿಶ್ಚಯ, ಸ್ವಾರ್ಥತ್ಯಾಗ ಮತ್ತು ಇತರ ಸ್ತ್ರೀ ಸುಸ್ವಭಾವಗಳನ್ನು ನೀವು ಗುರುತಿಸಿರಬಹುದು. ಪುರುಷರ ಇಂಥ ಹೀನ ನಡವಳಿಕೆಯ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಸ್ತ್ರೀಯರು ರೂಪಿಸದಿರುವುದು ನಾಚಿಕೆಯ ತಪ್ಪು ಕಲ್ಪನೆಯ ಮೂಲಕವಲ್ಲ. ಇಂಥ ಪ್ರಯತ್ನದ ನಿರುಪಯುಕ್ತತೆಯ ಮೂಲಕ. ಆದ್ದರಿಂದ ಇಡೀ ಜಗತ್ತಿನಲ್ಲೆಲ್ಲ ಪೂಜೆವೆತ್ತ ನಿಮ್ಮಂಥವರ ಬಾಯಿಯಿಂದ ಇಂಥ ಅಭಿಪ್ರಾಯವು ಬರುವುದೆಂದರೆ ಆ ಹಳೆಯ ಜೀರ್ಣವಾದ ಮತ್ತು ಅಪಮಾನಕರವಾದ "ಸ್ತ್ರೀಯರೆಂದರೆ ನರಕದ ಹೆಬ್ಬಾಗಿಲು" ಎಂಬ ಹೇಳಿಕೆಯನ್ನು ಸಮರ್ಥಿಸಿದಂತೆಯೇ. ಇದರಿಂದ ಆಧುನಿಕ ಯುವತಿಯರಿಗೆ ನಿಮ್ಮ ಬಗ್ಗೆ ಗೌರವಭಾವವಿಲ್ಲ ಎಂದು ದಯಮಾಡಿ ಭಾವಿಸಬಾರದು. ಪ್ರತಿಯೊಬ್ಬ ಯುವಕನು ಕೊಡುವಷ್ಟು ಮರ್ಯಾದೆಯನ್ನೇ ಪ್ರತಿಯೊಬ್ಬ ಯುವತಿಯೂ ನಿಮಗೆ ಕೊಡುತ್ತಿದ್ದಾಳೆ. ಅವಳು ಆಕ್ಷೇಪಿಸುವುದು, ಯಾರಾದರೂ ಅವಳನ್ನು ದ್ವೇಷಿಸುವುದನ್ನು ಇಲ್ಲವೆ ಅವಳ ಬಗ್ಗೆ ಕರುಣೆ ತೋರಿಸುವುದನ್ನು.

ನಾನು ಭಾರತೀಯ ಸ್ತ್ರೀಯರ ಸೇವೆಯನ್ನು ಈ ನವ ಯುವತಿಯರು ಹುಟ್ಟುವುದಕ್ಕಿಂತ ಮೊದಲು ಸುಮಾರು 40 ವರ್ಷಗಳ ಹಿಂದೆಯೇ ದಕ್ಷಿಣ ಆಫ್ರಿಕೆಯಲ್ಲಿ ಪ್ರಾರಂಭಿಸಿದನೆಂಬುದನ್ನು ಈ ಬರಹಗಾರರು ಬಹುಶಃ ಅರಿತಿರಲಿಕ್ಕಿಲ್ಲ. ಸ್ತ್ರೀತ್ವದ ಬಗ್ಗೆ ಅಪಮಾನಕಾರಕವಾದ ಯಾವ ಮಾತನ್ನೂ ಬರೆಯಲು ನಾನು ಅಸಮರ್ಥನಾಗಿದ್ದೇನೆಂದು ನನ್ನ ಭಾವನೆ. ಸ್ತ್ರೀಯರ ಬಗ್ಗೆ ಯಾವ ರೀತಿಯಿಂದಲೂ ಹೀನವಾಗಿ ಭಾವಿಸಲಾರದಷ್ಟು ನನಗೆ ಅವರ ಬಗ್ಗೆ ಗೌರವ ಭಾವನೆಯಿದೆ. ಇಂಗ್ಲೀಷ್‌ನಲ್ಲಿ ಹೇಳಿದಂತೆ ಅವಳು ಮಾನವನ 'ಉತ್ತಮಾಂಗಿ' ಆಗಿದ್ದಾಳೆ. ನಾನು ಲೇಖನವನ್ನು ಬರೆದದ್ದು ವಿದ್ಯಾರ್ಥಿಗಳ ನಾಚಿಕೆಗೇಡನ್ನು ಬಹಿರಂಗಗೊಳಿಸುವುದಕಾಗಿಯಲ್ಲದೆ, ಹುಡುಗಿಯರ ಲೋಪದೋಷಗಳನ್ನು ಜಾಹಿರಾತು ಮಾಡುವುದಕ್ಕಲ್ಲ. ನಾನು ರೋಗದ ಸರಿಯಾದ ವಿಧಾನ ಮತ್ತು ಚಿಕಿತ್ಸೆಯನ್ನು ಹೇಳಬೇಕಾದರೆ ರೋಗವುಂಟಾಗಲಿಕ್ಕೆ ಇರುವ ಕಾರಣಗಳೆಲ್ಲವನ್ನೂ ಹೇಳಬೇಕಾಯಿತು.... "ನವಯುವತಿ"ಯೆಂದರೆ ವಿಶಿಷ್ಟಾರ್ಥವಿದೆ. ಇಂಗ್ಲೀಷ್ ಶಿಕ್ಷಣವನ್ನು ಪಡೆದವರೆಲ್ಲ "ನವಯುವತಿ"ಯರಲ್ಲ. ಈ "ನವಯುವತಿಯ" ಹೊಸ ಗಾಳಿ ಕೂಡ ಸೋಕದಿದ್ದವರು ಸ್ತ್ರೀಯರಲ್ಲಿದ್ದಾರೆಂಬುದನ್ನು ನಾನು ಬಲ್ಲೆ. ಈ "ನವಯುವತಿ"ಯ ಅನುಕರಣೆ ಮಾಡಿ, ಈಗಾಗಲೇ ಗಂಭೀರವಾದ ಸಮಸ್ಯೆಯನ್ನು ಮತ್ತಷ್ಟು

ಜಟಿಲಗೊಳಿಸಬಾರದೆಂಬ ಎಚ್ಚರಿಕೆಯನ್ನು ಕೊಡುವ ದೃಷ್ಟಿಯಿಂದ ನಾನು ಆ ಅಭಿಪ್ರಾಯವನ್ನು ವ್ಯಕ್ತಮಾಡಿದ್ದು. ವಿದ್ಯಾರ್ಥಿಗಳ ಅನಾಗರಿಕ ನಡವಳಿಕೆಯ ವಿರುದ್ಧ ಪ್ರಬಲ ಚಳುವಳಿಯನ್ನು ಪ್ರಾರಂಭಿಸಲು ನಾನು ಈ ಹನ್ನೊಂದು ಜನ ಯುವತಿಯರನ್ನು ಆಹ್ವಾನಿಸುತ್ತೇನೆ. ಸ್ವಂತ ಉದ್ಧಾರವನ್ನು ಮಾಡಿಕೊಳ್ಳುವವರಿಗೇ ದೇವರು ಸಹಾಯಕನಾಗಿದ್ದಾನೆ. ಮನುಷ್ಯನ ಕಾಡು ನಡವಳಿಕೆಯ ವಿರುದ್ಧ ತಮ್ಮನ್ನು ಸಂರಕ್ಷಿಸಿಕೊಳ್ಳುವ ಕಲೆಯನ್ನು ಹುಡುಗಿಯರು ಕಲಿತುಕೊಳ್ಳಬೇಕು.

– ಹರಿಜನ., 1936

ಜ್ಯೂಲಿಯೆಟ್ ಪ್ರವೃತ್ತಿ

ವಿದ್ಯಾರ್ಥಿಗಳ ಇಂಥ ಭೀಭತ್ಸ ವರ್ತನದ ಘಟನೆಗಳೆಲ್ಲವನ್ನೂ ಪತ್ರಿಕೆಗಳಲ್ಲಿ ಪ್ರಕಟಿಸಬೇಕು. ಇದರ ಬಗ್ಗೆ ಇಲ್ಲದ ತೋರಿಕೆಯ ವಿನಯವು ಇರಕೂಡದು...

ಆದರೂ ಈ ಮಾತಿನ ಬಗ್ಗೆ ನನಗೂ ಒಂದು ಹೆದರಿಕೆಯಿದೆ. ನವನಾಗರಿಕತೆಯ ಯುವತಿಯು ಹತ್ತಾರು ರೋಮಿಯೋಗಳ ಕೂಡ ಜ್ಯೂಲಿಯೆಟ್‌ಳಾಗಿ ಚೆಲ್ಲಾಟವಾಡ ಬಯಸುತ್ತಾಳೆ. ಆಧುನಿಕ ಯುವತಿಗೆ ಸಾಹಸ ಬೇಕು. ನವ ಯುವತಿಯು ವಸ್ತ್ರಗಳನ್ನು ಧರಿಸುವುದು ಮಳೆ–ಗಾಳಿ–ಬಿಸಿಲಿನಿಂದ ತನ್ನನ್ನು ಸಂರಕ್ಷಿಸಿಕೊಳ್ಳುವುದಕ್ಕಲ್ಲ; ಹೆರವರ ಕಣ್ಣನ್ನು ಸೆಳೆಯುವುದಕ್ಕೆ. ಅವಳು ತನ್ನ ಮುಖ–ತುಟಿಗಳಿಗೆ ಬಣ್ಣ ಬಳೆದುಕೊಂಡು ವಿಚಿತ್ರವಾಗಿ ಕಂಡು ಪ್ರಕೃತಿಯನ್ನು ಮೀರಿಸಬಯಸುತ್ತಾಳೆ. ಇಂಥ ಹುಡುಗಿಯರಿಗೆ ಅಹಿಂಸೆಯ ಮಾರ್ಗವಿಲ್ಲ. ನಮ್ಮಲ್ಲಿ ಅಹಿಂಸಾ ಪ್ರವೃತ್ತಿಯು ಬೆಳೆಯಬೇಕಾದರೆ ವಿಶಿಷ್ಟವಾದ ನಿಯಮಗಳಿವೆ. ಅಹಿಂಸೆ ತುಂಬಾ ಪರಿಶ್ರಮಪೂರ್ವಕವಾದ ಪ್ರಯತ್ನ. ನಮ್ಮ ವಿಚಾರ ಮತ್ತು ಆಚಾರಗಳಲ್ಲಿ ಅದು ಕ್ರಾಂತಿಯನ್ನುಂಟು ಮಾಡುತ್ತದೆ. ಅಹಿಂಸೆಯನ್ನು ಕಲಿತರೆ ಯುವತಿಯರಿಗೆ ಜನರು ಮರ್ಯಾದೆಯನ್ನು ತೋರಿಸಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಒಂದು ಕಾಲಕ್ಕೆ ಅಕಸ್ಮಾತ್ತಾಗಿ, ಅವಳ ಪಾವಿತ್ರ್ಯಕ್ಕೆ ಏನಾದರೂ ಗಂಡಾಂತರವುಂಟಾಗುವುದಾದರೆ, ಮನುಷ್ಯನಲ್ಲಿಯ ಪಾಶವೀವೃತ್ತಿಗೆ ಮಣಿಯುವುದಕ್ಕಿಂತ ಸಾಯಲು ಸಿದ್ಧಳಾಗುವ ಧೈರ್ಯವನ್ನು ಅವಳು ಹೊಂದಬೇಕು.

(ವಿದ್ಯಾರ್ಥಿಗಳು ವಿದ್ಯಾರ್ಥಿನಿಯರಿಗೆ ಕೀಟಲೆ ಕೊಡುತ್ತಾರೆ ಎಂದು ಗಾಂಧೀಜಿಯವರಿಗೆ ತಿಳಿಸಿದಾಗ, ಇಂಥ ವಿದ್ಯಾರ್ಥಿಗಳ ಹೀನ ವರ್ತನೆಯನ್ನು ಖಂಡಿಸಿ ಗಾಂಧೀಜಿ ಮತ್ತೂ ಹೀಗೆ ಹೇಳಿದರು.)

– ಹರಿಜನ., 1938

ಬಣ್ಣದ ಬೀಸಣಿಕೆಗಳು

ನಿಮ್ಮ ತಂದೆ ತಾಯಿಗಳು ನಿಮ್ಮನ್ನು ಶಾಲೆಗೆ ಕಳಿಸುವುದು ನೀವು ಬಣ್ಣದ ಗೊಂಬೆ ಇಲ್ಲವೆ ಬಣ್ಣದ ಬೀಸಣಿಕೆಯಾಗಬೇಕೆಂದಲ್ಲ. ತದ್ವಿರುದ್ಧ ನೀವು ದಯೆಯ ಭಗಿನಿಯರೂ ದಾಯಿಗಳೂ ಆಗಬೇಕಾಗಿದೆ. ದಯೆಯ ಭಗಿನಿಯರು ಇಲ್ಲವೆ ದಾಯಿಗಳೆಂದರೆ, ಒಂದು ವಿಶಿಷ್ಟವಾದ ಉಡುಪನ್ನು ಮಾತ್ರ ಧರಿಸಿದವರಲ್ಲ. ಯಾವ ಸ್ತ್ರೀಯು ತನ್ನ ಬಗ್ಗೆ ಕಡಿಮೆ ವಿಚಾರ ಮಾಡಿ ತನಗಿಂತ ಹೆಚ್ಚು ಬಡವರು ಮತ್ತು ದುರ್ದೈವಿಗಳೆನಿಸಿದವರ ಬಗ್ಗೆ ಹೆಚ್ಚು ಹೆಚ್ಚು ವಿಚಾರ ಮಾಡುತ್ತಾಳೋ ಅವಳೇ ದಯಾಭಾಗಿನಿ–ದಾಯಿ. ಅಲ್ಪಸ್ವಲ್ಪ ಹಣವನ್ನು ಕೊಡುವುದೇನೂ ದೊಡ್ಡ ಮಾತಲ್ಲ. ಸ್ವಂತ ಏನಾದರೂ ಕೆಲಸವನ್ನು ಮಾಡುವುದು ಕಠಿಣವಾದದ್ದು. ನೀವು ಈಗ ನಿಧಿ ಕೊಟ್ಟವರ ಬಗ್ಗೆ ನಿಮಗೇನಾದರೂ ನಿಜವಾಗಿ ಅನಿಸುತ್ತಿದ್ದರೆ, ಈ ಬಡ ಜನರು ಸಿದ್ಧ ಮಾಡುವ ಖಾದಿಯನ್ನು ನೀವು ಧರಿಸಬೇಕು. ನಿಮ್ಮೆದುರು ಖಾದಿಯನ್ನು ತಂದಾಗ "ಖಾದಿ ಸ್ವಲ್ಪ ಉರುಟಾಗಿದೆ; ನಾವು ಅದನ್ನು ಧರಿಸಲಾರೆವು" ಎಂದು ನೀವೆಂದರೆ, ನಿಮ್ಮಲ್ಲಿ ಸ್ವಾರ್ಥ ತ್ಯಾಗದ ಭಾವನೆಯಿಲ್ಲವೆಂದು ನಾನು ತಿಳಿಯುತ್ತೇನೆ.

ವಿದ್ಯಾರ್ಥಿನಿಯರ ಕರ್ತವ್ಯ

ಪ್ರತಿ ವರುಷ ಈ ದಿವಸವನ್ನು ಆಚರಿಸಿ ಖಾದಿ ಕೆಲಸದ ಸಲುವಾಗಿ ನೀವು ಹಣವನ್ನು ಕೂಡಿಸುವುದಾಗಿ ಕೊಟ್ಟ ಆಶ್ವಾಸನೆಯನ್ನು ಕೇಳಿ ನಾನು ಹರ್ಷಪುಲಕಿತನಾದೆ. ಇದು ನೀವು ಲಘು ಭಾವನೆಯಿಂದ ಕೊಟ್ಟ ಆಶ್ವಾಸನೆಯಲ್ಲವೆಂದೂ ನಾನು ಬಲ್ಲೆ, ನೀವು ಪ್ರದರ್ಶನಕ್ಕಾಗಿ ವೇಷ ಧರಿಸದೆ ನಿಮ್ಮ ದೇಹವನ್ನು ಮುಚ್ಚಿಕೊಳ್ಳುವುದಕ್ಕಾಗಿ ವಸ್ತ್ರವನ್ನು ಧರಿಸುವುದಾದರೆ, ನೀವು ಖಾದಿಯನ್ನು ಧರಿಸುವುದರಲ್ಲಿ ಏನೂ ಹಿಂದು ಮುಂದು ನೋಡುವುದಿಲ್ಲವೆಂದೂ ಮತ್ತು ತನ್ಮೂಲಕ ನಮ್ಮ ದೇಶದ ಲಕ್ಷಾಂತರ ಬಡ ಬಾಂಧವರ ಕೂಡ ಸಂಪರ್ಕವನ್ನಿಟ್ಟುಕೊಳ್ಳುವಿರೆಂದೂ ನಾನು ನಂಬಿದ್ದೇನೆ. ನಿಮ್ಮ ವಾರ್ಷಿಕ ಸಂಚಿಕೆಯಲ್ಲಿ ಇಂತಿಂತಹವರು ಇಂತಿಂತಹವರ ಕೂಡ ಮದುವೆಯಾದರು ಇತ್ಯಾದಿ ನಿಮ್ಮ ಹಳೆಯ ವಿದ್ಯಾರ್ಥಿನಿಯರ ಬಗ್ಗೆ ಉಲ್ಲೇಖ ಮಾಡಿದ್ದೀರಿ. ವಯಸ್ಸಿಗೆ ಬಂದ ಹುಡುಗಿಯು ತನ್ನ ವಯಸ್ಸಿನ 22 ಅಥವಾ 25 ವರುಷಕ್ಕೆ ಮದುವೆಯಾಗುವುದರಲ್ಲಿ ಯಾವ ತಪ್ಪೂ ಇಲ್ಲ. ಆದರೆ ನಿಮ್ಮ ಸಂಚಿಕೆಯಲ್ಲಿ ಯಾವ ಒಬ್ಬ ಹಳೆಯ ವಿದ್ಯಾರ್ಥಿನಿಯೂ ತನ್ನ ಇಡೀ ಜೀವನವನ್ನು ಸೇವೆಗಾಗಿ ಮುಡುಪಿಟ್ಟ ಬಗ್ಗೆ ನಾನು ಓದಲಿಲ್ಲ. ಅಂತಲೇ ನಾನು ಬೆಂಗಳೂರಿನ ಮಹಾರಾಜ ಕಾಲೇಜಿನ ವಿದ್ಯಾರ್ಥಿನಿಯರಿಗೆ ಹೇಳಿದ ಮಾತನ್ನೆ ಇಲ್ಲಿ ಪುನಃ ಹೇಳುತ್ತಿದ್ದೇನೆ. ಇಂಥ ಶಿಕ್ಷಣ ಸಂಸ್ಥೆಗಳಿಂದ ನೀವು

ಹೊರಗೆ ಹೋದ ಕ್ಷಣಕ್ಕೆ ಬರಿಯ ಬಣ್ಣದ ಗೊಂಬೆಗಳಾಗಿ ಜೀವನ ರಂಗದಿಂದ ನಿಷ್ಕ್ರಮಿಸುವುದಾದರೆ, ಶಿಕ್ಷಣ ತಜ್ಞರು ನಿಮಗಾಗಿ ಮಾಡಿದ ಮಹಾ ಮಹಾ ಪ್ರಯತ್ನಗಳೂ ಮತ್ತು ಶ್ರೀಮಂತರು ಇದಕ್ಕಾಗಿ ಕೊಟ್ಟ ಉದಾರ ದೇಣಿಗೆಗಳೂ ಅಲ್ಪ ಪ್ರತಿಫಲವನ್ನಿತ್ತವೆಂದು ಭಾವಿಸುತ್ತೇನೆ....ಪ್ರತಿಯೊಬ್ಬ ಭಾರತೀಯ ಹುಡುಗಿಯ ಕೇವಲ ಮದುವೆ ಮಾಡಿಕೊಳ್ಳಲು ಹುಟ್ಟಿಲ್ಲ. ಇಂದು ಕೇವಲ ಒಬ್ಬ ಮನುಷ್ಯನ ಸೇವೆಯನ್ನು ಮಾತ್ರ ಗೈಯದೆ, ಇಡೀ ಮಾನವ ಜನಾಂಗದ ಸೇವೆಗಾಗಿ ಮಾತ್ರ ಜೀವನವನ್ನು ಮುಡುಪಿಟ್ಟವರ ಅನೇಕ ದೃಷ್ಟಾಂತಗಳನ್ನು ನಾನು ಕೊಡಬಲ್ಲೆ. ಪ್ರತಿಯೊಬ್ಬ ಹಿಂದೂ ಹುಡುಗಿಯೂ ಸೀತಾ–ಪಾರ್ವತಿಯರ ಪ್ರತಿರೂಪವನ್ನು ಸಾಧ್ಯವಾದರೆ ಅದಕ್ಕಿಂತ ಹೆಚ್ಚು ಉದಾತ್ತವಾದ ಪ್ರತಿರೂಪವನ್ನು ನಿರ್ಮಿಸುವ ಕಾಲವು ಬಂದಿದೆ.

ಇಲ್ಲಿ ದುಷ್ಟವಾದ ವರದಕ್ಷಿಣೆಯ ಸಂಪ್ರದಾಯವು ಇದೆಯಾಗಿ ನಾನು ಕೇಳಿದ್ದೇನೆ. ಇದರಿಂದ ಯೋಗ್ಯರಾದ ಗಂಡಂದಿರನ್ನು ದೊರಕಿಸುವುದು ಕಠಿಣವಾದ ಮಾತಾಗಿದೆ. ಪ್ರಬುದ್ಧ ಹುಡುಗೆಯರಾದ ನೀವು ಇಂಥ ಪ್ರಲೋಭನವನ್ನೆಲ್ಲ ಪ್ರತಿಭಟಿಸಬೇಕು. ನೀವು ಇಂಥ ದುಷ್ಟ ಸಂಪ್ರದಾಯವನ್ನು ಪ್ರತಿಭಟಿಸಬೇಕಾದರೆ, ನಿಮ್ಮಲ್ಲಿ ಅನೇಕರು ಹಲಕೆಲವು ವರುಷಗಳಾಗಲೀ ಅಥವಾ ಇಡೀ ಆಯುಷ್ಯದವರೆಗಾಗಲೀ ಅವಿವಾಹಿತರಾಗಿಯೇ ಉಳಿಯಬೇಕಾಗುವುದು, ಹಣ ಇಲ್ಲವೆ ಕೀರ್ತಿ ಇಲ್ಲವೆ ಸುಂದರವಾದ ರೂಪವಿದ್ದ ಜೀವನ ಸಂಗಾತಿಯನ್ನು ಆರಿಸಲು ಹಾತೊರೆಯದೆ, ಸಚ್ಚಾರಿತ್ರ್ಯ ಶಿರೋಮಣಿಯಾಗಿದ್ದ ಪಾರ್ವತೀದೇವಿಯು ತನ್ನ ಸಮಾನ ಚರಿತ್ರನನ್ನು ವರಿಸಿದ ಹಾಗೆ ನೀವೂ ಲಗ್ನವಾಗಬಯಸುವಿರಿ. ನಾರದಜಿಯವರು ಪಾರ್ವತಿಗೆ ಶಿವನನ್ನು ಯಾವ ರೀತಿ ವರ್ಣಿಸಿದರೆಂಬುದನ್ನು ನೀವು ಬಲ್ಲಿರಿ. ವಿಭೂತಿ ಲೇಪಿತ ಕಡು ದರಿದ್ರ; ಸುಂದರನೇನಲ್ಲ; ಬ್ರಹ್ಮಚಾರಿ. ಪಾರ್ವತಿ ತಟ್ಟನೆ ಹೇಳಿದರು "ಹೌದು, ಅವನೇ ನನ್ನ ಪತಿ" ಎಂದು. ನೀವು ಪಾರ್ವತಿಯ ಹಾಗೆ ಸಾವಿರಾರು ವರುಷವಲ್ಲದಿದ್ದರೂ, ಕೆಲ ಕಾಲವಾದರೂ ತಪಸ್ಸನ್ನು ಮಾಡದೆ, ಇಂಥ ಶಿವ ನಿಮಗೆ ಸಿಗಲಾರ. ನಾನು ಹೇಳಿದ ಈ ಕರಾರುಗಳನ್ನು ಒಪ್ಪುವುದಾದರೆ, ನೀವು ಗೊಂಬೆಗಳ ರಾಜ್ಯದಲ್ಲಿ ಲೀನವಾಗಿ ಹೋಗಲಿಚ್ಛಿಸದೆ, ಪಾರ್ವತಿ, ದಮಯಂತಿ, ಸೀತೆ, ಸಾವಿತ್ರಿಯರ ಹಾಗೆ ಉದಾತ್ತ ಸತಿಯರಾಗುವಿರಿ. ಹೀಗೆ ಮಾಡಿದರೇನೇ ನೀವು ಇಂಥ ಶಿಕ್ಷಣ ಸಂಸ್ಥೆಯಲ್ಲಿ ಕಲಿತದ್ದು ಸಾರ್ಥಕ.

– ಸಿಲೋನ್‌ನಲ್ಲಿ ಗಾಂಧೀಜಿ, ಪು. 141

(ಜಾಫ್ನಾದಲ್ಲಿಯ ರಾಮನಾಥನ್ ಕಾಲೇಜದಲ್ಲಿ ಮಾಡಿದ ಭಾಷಣದಿಂದ)

ಕಾಯ್ದೆ ವಿದ್ಯಾರ್ಥಿಗಳನ್ನು ಕುರಿತು

ನೀವು ಈ ಪ್ರಶ್ನೆಯನ್ನು ಕೇಳಿದ್ದಕ್ಕಾಗಿ ನನಗೆ ಆನಂದವಾಗಿದೆ.... ಇಡೀ ನನ್ನ ಕಾಯ್ದೆ ವ್ಯವಸಾಯದ ಜೀವನದಲ್ಲಿ ಒಂದು ಸಲವೂ ಸಹ ನಾನು ಸತ್ಯ ಮತ್ತು ಪ್ರಾಮಾಣಿಕತೆಗಳ ಮಾರ್ಗವನ್ನು ಬಿಡಲಿಲ್ಲ.

ಕಾಯ್ದೆ ವ್ಯವಸಾಯದಲ್ಲಿ ಆಧ್ಯಾತ್ಮಿಕತೆ ಬರಬೇಕಾದರೆ, ನೀವು ಮೊಟ್ಟ ಮೊದಲು ಮಾಡಬೇಕಾದ ಕೆಲಸವೆಂದರೆ ಈಗ ನೀವು ದುರ್ದೈವದಿಂದ ಈ ವೃತ್ತಿಯನ್ನು ಹಣದ ಗುಲಾಮವನ್ನಾಗಿ ಮಾಡಿದ ಹಾಗೆ ಮಾಡದೆ, ದೇಶದ ಸೇವೆಗಾಗಿ ಕಾಯ್ದೆ ಜ್ಞಾನವನ್ನು ಉಪಯೋಗಿಸಬೇಕು. ಪ್ರತಿಯೊಂದು ದೇಶದಲ್ಲಿಯೂ ಮಹಾ ಮಹಾ ಮೇಧಾವಿಗಳಾದ ವಕೀಲರು ತಮಗೆ ಎಷ್ಟೇ ಬಡತನ ಬಂದರೂ, ಸ್ವಾರ್ಥತ್ಯಾಗವನ್ನು ಮಾಡಿ ಇಡೀ ತಮ್ಮ ಜಾಜ್ವಲ್ಯಮಾನವಾದ ಕಾಯ್ದೆ ಪಾಂಡಿತ್ಯವನ್ನು ಮಾನವೀಯ ಸೇವೆಗಾಗಿ ಮುಡುಪಿಟ್ಟ ದೃಷ್ಟಾಂತಗಳನ್ನು ಕಾಣುತ್ತೇವೆ. ಭಾರತದಲ್ಲಿ ನಿಮಗೆ ದಿವಂಗತ ಮನಮೋಹನ ಘೋಷರ ದೃಷ್ಟಾಂತವಿದೆ. ನೀಲಿ ವ್ಯವಸಾಯದ ಕೂಲಿಕಾರರ ಹಿತರಕ್ಷಣೆಗಾಗಿ ತಮ್ಮ ಸ್ವಂತ ಆರೋಗ್ಯ ಮತ್ತು ಜೀವನ ಪರಿವೆಯಿಲ್ಲದೆ, ಒಂದು ಕಾಸನ್ನು ಸಹ ಕೂಲಿಕಾರರಿಂದ ಅಪೇಕ್ಷಿಸದೆ, ಅವರು ಹೋರಾಡಿದರು. ಅವರು ಮೇಧಾವಿಗಳಾದ ವಕೀಲರಾಗಿದ್ದಂತೆ, ಮಾನವೀಯ ಅಂತಃಕರಣವುಳ್ಳವರೂ ಆಗಿದ್ದರು. ಅವರ ಉದಾಹರಣೆಯು ನಿಮ್ಮ ಮುಂದೆ ತಮ್ಮ "Unto this last" (ಸರ್ವೋದಯ) ಎಂದ ಪುಸ್ತಕದಲ್ಲಿ ಕೊಟ್ಟ ಸಂದೇಶವನ್ನು ನೀವು ಅನುಸರಿಸಬೇಕು. "ಒಬ್ಬ ವಕೀಲನು ತನ್ನ ಕೆಲಸದ ಸಲುವಾಗಿ 15 ಪೌಂಡು ಯಾಕೆ ವಸೂಲು ಮಾಡಬೇಕು?" ಎಂದು ರಸ್ಕಿನ್ ಕೇಳುತ್ತಾರೆ. ಪ್ರತಿಯೊಂದು ಕಡೆಗೂ ವಕೀಲರು ವಸೂಲು ಮಾಡುವ ಫೀ ಹಣವು ಔಚಿತ್ಯ ಧರ್ಮಕ್ಕೆ ಹೊಂದುವಂತಹದಲ್ಲ. ನಾನು ಸಹ ವಸೂಲು ಮಾಡಿದ ಹಣವು ಹೆಚ್ಚಿನದೆ ಆಗಿತ್ತೆಂದು ಒಪ್ಪಿಕೊಳ್ಳಬೇಕು....

ಇನ್ನೊಂದು ವಿಷಯದ ಬಗ್ಗೆಯೂ ನಾನು ನಿಮಗೆ ಎಚ್ಚರಿಕೆ ಕೊಡಬೇಕು. ಇಂಗ್ಲಂಡದಲ್ಲಿಯೇ ಆಗಲಿ, ದಕ್ಷಿಣ ಆಫ್ರಿಕೆಯಲ್ಲಿಯೇ ಆಗಲಿ, ಅಥವಾ ಇತರ ಕಡೆಗೇ ಆಗಲಿ, ತಮ್ಮ ಪಕ್ಷಕಾರರ ಸಲುವಾಗಿ ವಕೀಲರು ಅರಿತೋ ಅರಿಯದೆಯೋ ಅ-ಸತ್ಯದ ಕಡೆಗೆ ಎಳೆಯಲ್ಪಡುವುದುಂಟು. ಪಕ್ಷಕಾರನು ಅಪರಾಧಿಯಿದ್ದಾನೆಂದು ತನಗೆ ಸ್ವತಃ ಗೊತ್ತಿದ್ದರೂ, ಅವನ ಸಮರ್ಥನೆಯನ್ನು ಮಾಡುವುದು ವಕೀಲನಾದವನ ಕರ್ತವ್ಯವಾಗಿದೆ ಎನ್ನುವ ಮಟ್ಟಿಗೂ ಒಬ್ಬ ಸುಪ್ರಸಿದ್ಧ ಇಂಗ್ಲೀಷ್ ವಕೀಲರು ಹೋಗಿದ್ದಾರೆ. ಇದು ನನಗೆ ಸಮ್ಮತವಿಲ್ಲ. ಅಪರಾಧಿಗಳು ನಿರಪರಾಧಿಗಳೆಂದು ತೋರಿಸುವುದು ವಕೀಲರ ಕರ್ತವ್ಯವಾಗಿರದೆ, ಯಾವಾಗಲೂ ನ್ಯಾಯಾಧೀಶರೆದುರು ವಿಷಯಗಳನ್ನು ಮಂಡಿಸಿ, ಅವರು ಸತ್ಯವನ್ನು ಅರಿತುಕೊಳ್ಳುವಲ್ಲಿ ಸಹಾಯಕರಾಗುವುದು ಅವರ ಕರ್ತವ್ಯವಾಗಿದೆ. ನಿಮ್ಮ ವೃತ್ತಿಯ ಗೌರವವನ್ನು ಕಾಯ್ದುಕೊಳ್ಳುವುದು ನಿಮ್ಮ ಕೈಯಲ್ಲಿದೆ. ನೀವು ನಿಮ್ಮ ಕರ್ತವ್ಯದಲ್ಲಿ ಸೋತರೆ, ಉಳಿದ ವೃತ್ತಿಗಳ ಗತಿ ಏನು?.... ಉಪ್ಪೇ ತನ್ನ ಗುಣವನ್ನು ಕಳೆದುಕೊಂಡರೆ, ಅದಕ್ಕಾಗಿ ಹೊರಗಿನ ಯಾವ ಉಪ್ಪನ್ನು ತಂದು ಕೂಡಿಸಬೇಕು? ಬೇಲಿಯೇ ಹೊಲವನ್ನು ಮೇಯ್ದರೆ ಯಾರು ಸಂರಕ್ಷಿಸಬೇಕು?

–ಹಿಂಗೋರಾಣಿ, ಪು. 228–239

(ಕೊಲಂಬೋದ ಕಾನೂನು ಕಾಲೇಜಿನಲ್ಲಿ "ಕಾಯ್ದೆ ವ್ಯವಸಾಯವನ್ನು ಆಧ್ಯಾತ್ಮೀಕರಿಸುವುದು ಹೇಗೆ?" ಎಂದು ಕೇಳಿದ ಪ್ರಶ್ನೆಗೆ ಗಾಂಧೀಜಿ ಈ ರೀತಿ ಹೇಳಿದರು).

ವಿದ್ಯಾರ್ಥಿಗಳು ಮತ್ತು ಜಾತೀಯತೆ

ಸಾಮಾನ್ಯ ಹಿಂದೂ ಜನರು ಇಂಥ ಗೊಂದಲದ ವಿಷಯದ ಬಗ್ಗೆ ಯಾವ ತೊಂದರೆಯನ್ನೂ ವಹಿಸುವುದಿಲ್ಲ. ಚುನಾವಣೆಯ ಸ್ಥಾನಗಳು ಇಲ್ಲವೆ ಆಡಳಿತ ನೌಕರಿಗಳು ಇಂಥ ಸಣ್ಣ ಪುಟ್ಟ ತುಣುಕುಗಳ ಬಗ್ಗೆ ಸಾಮಾನ್ಯ ಜನರು ಯಾವ ತೊಂದರೆಯನ್ನೂ ಮಾಡಿಕೊಳ್ಳುವುದಿಲ್ಲ. ಈ ಜಾತೀಯತೆಯ ಭೂತವು ಕೇವಲ ಪಟ್ಟಣಗಳಿಗೆ ಮಾತ್ರ ಅಂಟಿಕೊಂಡಿದ್ದು, ಈ ಪಟ್ಟಣಗಳೆಂದರೆ ನಿಜವಾದ ಭಾರತವಾಗಿಲ್ಲ. ಅವು ಇಂಗ್ಲೆಂಡದ ದಲ್ಲಾಳಿಗಳಾಗಿದ್ದು, ನಿಮ್ಮ ಹಾಗೆಯೇ ಹಳ್ಳಿಗಳನ್ನು ಹೀರುವ ಲಂಡನ್ ಇಲ್ಲವೆ ಇತರ ಪಾಶ್ಚಿಮಾತ್ಯ ಪಟ್ಟಣಗಳ ಪ್ರತಿಕೃತಿ ಅಥವಾ ಒತ್ತು ಕರಡಾಗಿವೆ. ಭಾರತದ ಸ್ವಾತಂತ್ರ್ಯದ ಪ್ರಶ್ನೆಯೆದುರು ಈ ಜಾತೀಯ ಪ್ರಶ್ನೆಗೆ ಯಾವ ಮಹತ್ವವೂ ಇಲ್ಲ. ನಿಮ್ಮ ಮಂತ್ರಿಗಳು ಈ ಪ್ರಶ್ನೆಗಳು ತಪ್ಪಿಸಹತ್ತಿದ್ದಾರೆ. ಕೆಲ ಕಲ ಭಾರತೀಯ ಸಮಾಜವನ್ನು ಕೊರೆಯುತ್ತಿರುವ ಈ ಜಾತೀಯ ರೋಗಕ್ಕಿಂತ ಭಾರತದ ಸ್ವಾತಂತ್ರ್ಯದ ಪ್ರಶ್ನೆಯು ಹೆಚ್ಚಿನದಾಗಿದೆ....ವಿದೇಶೀಯ ಬೆಣೆಯನ್ನು ತೆಗೆದ ಕ್ಷಣವೇ ಭಿನ್ನ ಭಿನ್ನವಾದ ಜಾತಿಗಳು ಒಂದುಗೂಡುತ್ತವೆ...ಆದ್ದರಿಂದ, ಇಂಗ್ಲೆಂಡಿನ ನೀವು ಈ ಪ್ರಶ್ನೆಯ ಅಭ್ಯಾಸವನ್ನು ಮಾಡತೊಡಗಿ ಅದರ ಗೊಂದಲಗೆಡಿಸುವ ವಿವರಗಳಲ್ಲಿ ಹೋಗಹತ್ತಿದರೆ, ನಾವೆಲ್ಲರೂ ಥೇಮ್ಸ ನದಿಯಲ್ಲಿ ಮುಳುಗಿಹೋಗಿದ್ದರೆ ಒಳ್ಳೆಯವರಾಗುತ್ತಿತ್ತೆಂದು ನಾನು ಭಾವಿಸುವೆ.

ಈ ಜಾತೀಯ ಪ್ರಶ್ನೆಯು ಮಹತ್ವದ್ದಲ್ಲವೆಂದೂ ಅದು ನಿಮಗೆ ಯಾವ ವಿಧದ ತೊಂದರೆಯನ್ನೂ ಕೊಡಕೂಡದೆಂದೂ ನಾನು ದೇವರ ಸಾಕ್ಷಿಯಾಗಿ ಹೇಳುತ್ತಿದ್ದೇನೆ. ನಿಮಗೆ ಇತಿಹಾಸವನ್ನೇ ಅಭ್ಯಸಿಸಬೇಕಾಗಿದ್ದರೆ, ಇದಕ್ಕೂ ಹೆಚ್ಚಿನ ಪ್ರಶ್ನೆಯನ್ನು ಅಭ್ಯಸಿಸಿರಿ. ಅದೆಂದರೆ, ಲಕ್ಷಾಂತರ ಜನರು ಅಹಿಂಸೆಯನ್ನು ತಮ್ಮ ಶಸ್ತ್ರವನ್ನಾಗಿ ಉಪಯೋಗಿಸಲು ಹೇಗೆ ನಿಶ್ಚಯಿಸಿದರು, ಮತ್ತು ಅದಕ್ಕೆ ಹೇಗೆ ಅಂಟಿಕೊಂಡರು

ಎಂಬುದೇ ಆ ಪ್ರಶ್ನೆಯಾಗಿದೆ. ಅನಾಗರಿಕವಾದ ಕಾಡು ನೀತಿಯನ್ನು ಅನುಸರಿಸುವ ಮನುಷ್ಯನ ಪಾಶವೀ ಸ್ವಭಾವವನ್ನು ಅಭ್ಯಸಿಸದೆ, ವೈಭವಯುತನಾದ ಮಾನವನ ಅಭ್ಯಾಸವನ್ನು ಮಾಡಿಸಿ ಜಾತೀಯ ಹೊಡೆದಾಟದಲ್ಲಿ ತೊಡಗಿದ ಮನುಷ್ಯರು ಹುಚ್ಚರ ಆಸ್ಪತ್ರೆಯಲ್ಲಿಯ ಪ್ರಾಣಿಗಳಂತೆ. ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ, ಯಾರಿಗೂ ಸ್ವಲ್ಪವೂ ನೋವನ್ನುಂಟುಮಾಡದೆ, ತನ್ನ ಜೀವನವನ್ನು ಧಾರೆಯೆರೆಯುತ್ತಿರುವ ಉದಾತ್ತ ಮಾನವನ ಅಭ್ಯಾಸವನ್ನು ಮಾಡಿರಿ. ಮಾನವನು ತನ್ನ ಉದಾತ್ತವಾದ ಪ್ರಕೃತಿಯನ್ನು ಅನುಸರಿಸಿ, ಅಂತಃಕರಣದ ಪ್ರೇಮ ಜೀವನವನ್ನು ಸಾಗಿಸುವ ಚಿತ್ರದ ಅಭ್ಯಾಸವನ್ನು ಮಾಡಿದರೆ ನೀವು ಬೆಳೆದು ದೊಡ್ಡವರಾದಾಗ ನಿಮ್ಮ ಮಾನವೀಯ ಪರಂಪರೆಯನ್ನೇ ನೀವು ಹೆಚ್ಚು ಶ್ರೀಮಂತವಾಗಿಸುತ್ತೀರಿ.

– ಹಿಂಗೋರಾಣಿ, 263–64

(1931ರಲ್ಲಿ ಗಾಂಧೀಜಿಯವರು ಇಂಗ್ಲೆಂಡಿಗೆ ಹೋದಾಗ ಈಟನ್ ಕಾಲೇಜ್ ವಿದ್ಯಾರ್ಥಿಗಳು ಹಿಂದು ಮುಸ್ಲಿಂ ಜಾತೀಯತೆಯ ಬಗ್ಗೆ ಕೇಳಿದ ಪ್ರಶ್ನೆಗೆ ಗಾಂಧೀಜಿ ಹೀಗೆ ಹೇಳಿದರು.)

(ಇತರ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಗಳಿವು)

ಪ್ರಶ್ನೆ : ಜಾತೀಯ ಪ್ರಶ್ನೆಯ ಬಗ್ಗೆ ಬ್ರಿಟಿಷರು ತಳೆದ ನಿಲುಮೆಯು ನಿಮ್ಮ ಮಾರ್ಗದಲ್ಲಿ ಎಷ್ಟರ ಮಟ್ಟಿಗೆ ಅಡೆತಡೆಯಾಗಿದೆ?

ಉತ್ತರ : ಬಹುಮಟ್ಟಿಗೆ, ಅಥವಾ ಅರ್ಧಕರ್ಧ, ಭಾರತದಲ್ಲಿಯೂ ವಿಂಗಡಿಸು ಮತ್ತು ಆಳು ಎಂಬ ಧೋರಣೆಯು ಪ್ರಯತ್ನಪೂರ್ವಕವಾಗಿ ಇಲ್ಲವೆ ಅಪ್ರಯತ್ನ ಪೂರಕವಾಗಿ ಇದ್ದುದು ಕಂಡುಬರುತ್ತದೆ. ಬ್ರಿಟಿಷ್ ಅಧಿಕಾರಿಗಳು ಒಂದು ಕಾಲಕ್ಕೆ ಒಂದು ವರ್ಗದ ಕೂಡ, ಇನ್ನೊಂದು ಕಾಲಕ್ಕೆ ಇನ್ನೊಂದು ವರ್ಗದ ಕೂಡ ಮುದ್ದಾಟವಾಡುತ್ತಿದ್ದಾರೆ. ನಾನೂ ಬ್ರಿಟಿಷ್ ಅಧಿಕಾರಿಯಾಗಿದ್ದರೆ ಬಹುಶಃ ಹೀಗೇ ಮಾಡಿ ಪರಸ್ಪರ ಹೊಡೆದಾಟಗಳಲ್ಲಿಯ ಲಾಭವನ್ನು ತೆಗೆದುಕೊಂಡು ನನ್ನ ಆಳ್ವಿಕೆಯನ್ನು ಸ್ಥಿರೀಕರಿಸಿಕೊಳ್ಳುತ್ತಿದ್ದೆನೇನೋ! ಈ ಮಾತಿನಲ್ಲಿ (ಭಾರತೀಯರಾದ) ನಮ್ಮ ಜವಾಬುದಾರಿಯೆಂದರೆ, ನಾವು ಈ ಆಟದ ಬಲೆಯಲ್ಲಿ ಅನಾಯಾಸವಾಗಿ ಬೀಳುತ್ತಿದ್ದೇವೆ.

–ಹಿಂಗೋರಾಣಿ, ಪು.269

ಜಾತಿಯ ಬಗ್ಗೆ ಹೇಳುವುದಾದರೆ, ಇಂದಿನ ಹೊಸ ಅರ್ಥದಲ್ಲಿ ಜಾತಿಯಲ್ಲಿ ನನಗೆ ವಿಶ್ವಾಸವಿಲ್ಲ. ಅದೊಂದು ಹೊರಗಿನ ಬಳಸು ಮತ್ತು ಪ್ರಗತಿಯ ಆತಂಕ. ಮಾನವರ ಅಸಮಾನತೆಯಲ್ಲಿಯೂ ನನಗೆ ವಿಶ್ವಾಸವಿಲ್ಲ. ನಾವೆಲ್ಲರೂ ಸಂಪೂರ್ಣವಾಗಿ ಸಮನಾಗಿದ್ದೇವೆ. ಆದರೆ ಈ ಸಮಾನತ್ವವು ಆತ್ಮಿಕವಾದದ್ದೇ ಹೊರತು ದೈಹಿಕವಾದದ್ದಲ್ಲ. ಆದ್ದರಿಂದ ಅದೊಂದು ಮಾನಸಿಕ ಸ್ಥಿತಿ. ಭೌತಿಕ ಜಗತ್ತಿನಲ್ಲಿ ನಾವು ಅನೇಕ ವಿಷಮತೆಗಳನ್ನು ನೋಡುತ್ತಿರುವುದರಿಂದ ನಾವು ಸಮತೆಯ ಬಗ್ಗೆ ವಿಚಾರ ಮಾಡಲೇಬೇಕಾಗಿದೆ. ಒಬ್ಬ ವ್ಯಕ್ತಿಗಿಂತ ಮತ್ತೊಬ್ಬನನ್ನು ತಾನು ಶ್ರೇಷ್ಠನೆಂದು ಭಾವಿಸುವುದೆಂದರೆ ದೇವರ ವಿರುದ್ಧ ಮತ್ತು ಮನುಷ್ಯನ ವಿರುದ್ಧ ಮಾಡುವ ಪಾಪವಾಗಿದೆ. ಆದ್ದರಿಂದ ಜಾತಿಯ ಸ್ಥಾನಮಾನಗಳಲ್ಲಿಯ ವಿಷಮತೆಯನ್ನು ಸೂಚಿಸುವುದಾದರೆ, ಅದೊಂದು ಪಾಪವೇ.

ಆದರೆ, ಪರಂಪರಾಗತವಾಗಿ ನಡೆದು ಬಂದ ವೃತ್ತಿಗಳನ್ನು ಆಧರಿಸಿದ ವರ್ಣಾಶ್ರಮದಲ್ಲಿ ನನಗೆ ನಂಬುಗೆಯಿದೆ. ಸಾರ್ವತ್ರಿಕವಾದ ನಾಲ್ಕು ವೃತ್ತಿಗಳನ್ನು ನಿರ್ದೇಶಿಸುವುದಕ್ಕಾಗಿ ನಾಲ್ಕು ವರ್ಣಗಳಿವೆ. ಅವೆಂದರೆ ಜ್ಞಾನಬೋಧೆ, ಅರಕ್ಷಿತರ ಸಂರಕ್ಷಣೆ, ವ್ಯವಸಾಯ ಮತ್ತು ವ್ಯಾಪಾರಗಳನ್ನು ನಡೆಸುವುದು ಮತ್ತು ದೈಹಿಕ ಶ್ರಮದಿಂದ ಸೇವೆ ಮಾಡುವುದು. ಈ ವೃತ್ತಿಗಳು ಮಾನವತೆಗೆಲ್ಲ ಸಮಾನವಾಗಿದ್ದು, ಹಿಂದೂ ಧರ್ಮವು ಇವನ್ನು ನಮ್ಮ ಜೀವನದ ನೀತಿಯಾಗಿ ಮನ್ನಿಸಿದ್ದರಿಂದ ಸಾಮಾಜಿಕ ನಡೆವಳಿಕೆ ಮತ್ತು ಸಂಬಂಧವನ್ನು ನಿಯಂತ್ರಿಸುವುದಕ್ಕಾಗಿ ಇದನ್ನು ಉಪಯೋಗಿಸಿದೆ...ಭಿನ್ನ ಭಿನ್ನ ವರ್ಣಗಳ ಜನರು ಪರಸ್ಪರ ಊಟ ಉಪಚಾರ ಮಾಡಬಹುದು, ಮದುವೆಯಾಗಬಹುದು. ಪಾವಿತ್ರ್ಯಕ್ಕೆ ಮತ್ತು ಆರೋಗ್ಯದ ದೃಷ್ಟಿಯಿಂದ ಈ ನಿಯಂತ್ರಣಗಳ ಅವಶ್ಯಕತೆ ಇರಬಹುದು. ಒಬ್ಬ ಶೂದ್ರ ಹುಡುಗಿಯನ್ನು ಮದುವೆಯಾಗುವ ಬ್ರಾಹ್ಮಣನಾಗಲೀ ಇಲ್ಲವೆ ತದ್ವಿರುದ್ಧವಾಗಿ ಮದುವೆಯಾಗುವ ಶೂದ್ರನಾಗಲೀ ವರ್ಣಾಶ್ರಮ ತತ್ತ್ವವನ್ನೇನೂ ಭಂಗಿಸುವುದಿಲ್ಲ. ಅಂತರಜಾತೀಯರಾಗಿ ಕೂಡಿ ಊಟ ಮಾಡುವುದಕ್ಕೂ, ಮದುವೆಯಾಗುವುದಕ್ಕೂ ಮತ್ತು ಜಾತೀಯ ಐಕ್ಯತೆಗೂ ಯಾವ ಸಂಬಂಧವಿಲ್ಲವೆಂದು ನನ್ನ ದೃಢವಾದ ಅಭಿಪ್ರಾಯವಾಗಿದೆ. ಜಾತೀಯ ಹೊಡೆದಾಟದ ಕಾರಣಗಳನ್ನು ನಿವಾರಿಸಬೇಕಾಗಿದೆ. ಯುರೋಪದಲ್ಲಿ ಪರಸ್ಪರ ಕೂಡಿ ಊಟ ಮಾಡುವುದೂ ಮದುವೆಯಾಗುವುದೂ ಇದ್ದರೂ ಇಡೀ ಇತಿಹಾಸದಲ್ಲಿ ಹಿಂದೂ ಮತ್ತು ಮುಸಲ್ಮಾನರಾದ ತಾವು ಎಂದೂ ಹೋರಾಡಿರದಷ್ಟು ಅವರು ತಮ್ಮ ತಮ್ಮಲ್ಲಿಯೇ ಹೋರಾಡಿದ್ದಾರೆ.

–ಹಿಂಗೋರಾಣಿ, ಪು. 294

ವಿದ್ಯಾರ್ಥಿಗಳು ಮತ್ತು ಲೈಂಗಿಕ ಜ್ಞಾನ

ಲೈಂಗಿಕ ಜ್ಞಾನ

ಭಾರತದ ಇತರ ಭಾಗಗಳಲ್ಲಿಯಂತೆಯೇ ಇಂದು ಗುಜರಾಥದಲ್ಲಿಯೂ ಕೂಡ ಲೈಂಗಿಕ ಪ್ರವೃತ್ತಿಯು ನಿಧಾನವಾಗಿ ಬೆಳೆಯುತ್ತಿದೆ. ಅದಕ್ಕೂ ಹೆಚ್ಚಿನದೆಂದರೆ ಅದರ ಪಾಶದಲ್ಲಿ ಬಿದ್ದ ವ್ಯಕ್ತಿಗಳು ಅದರಲ್ಲಿ ಏನೋ ಮಹಾಸಾಧನೆ ಇದ್ದಹಾಗೆ ತಿಳಿದುಕೊಳ್ಳುತ್ತಾರೆ. ಯಾವಾಗ ಗುಲಾಮನು ತನ್ನ ಶೃಂಖಲೆಗಳ ಬಗ್ಗೆಯೇ ಅಭಿಮಾನವನ್ನು ತಾಳಿ ಅವನ್ನೇ ಅಪ್ಪಿಕೊಳ್ಳಹತ್ತುತ್ತಾನೋ, ಆಗ ಆ ಗುಲಾಮನ ಒಡೆಯನ ಯಶಸ್ಸು ಪರಿಪೂರ್ಣವಾದಂತೆ. ಆದರೆ, ಕಾಮನ ಈ ಯಶಸ್ಸು ಎಷ್ಟೇ ಬಣ್ಣ ಬಣ್ಣ ಪೂರ್ಣವಾಗಿ ಅದ್ಭುತರಂಜಕವಾಗಿ ಕಂಡರೂ, ಅದು ವಿಷವಳಿದ ಚೇಳಿನ ಜೀವನದ ಹಾಗೆ ಕೊನೆಗೆ ಲಘು ಜೀವಿತವುಳ್ಳದ್ದೂ, ಅನುದಾತ್ತವೂ, ಸತ್ವಹೀನವೂ ಆಗುತ್ತಿದೆಯೆಂಬುದರ ಬಗ್ಗೆ ಸಂದೇಹವಿಲ್ಲ. ಇದರರ್ಥವೆಂದರೆ ನಾವು ಕಾಲು ಚಾಚಿ ಸುಮ್ಮನೆ ಕೂಡಬೇಕೆಂದಲ್ಲ. ಕಾಮದ ಸೋಲು ನಿಶ್ಚಿತವೆಂಬ ಮಾತು ನಮ್ಮಲ್ಲಿ ಆಲಸ್ಯವನ್ನಾಗಲೀ ಆತ್ಮತೃಪ್ತ ಭಾವನೆಯನ್ನಾಗಲೀ ತರಕೂಡದು.

ಕಾಮನನ್ನು ಗೆಲ್ಲುವುದು ಸ್ತ್ರೀ ಇಲ್ಲವೆ ಪುರುಷನ ಜೀವನದ ತೀರ ಹೆಚ್ಚಿನ ಸಾಧನೆಯಾಗಿದೆ. ಈ ಕಾಮನನ್ನು ಗೆದ್ದು ಹೊರತು ಮನುಷ್ಯನು ತನ್ನನ್ನೇ ತಾನು ಆಳಲಾರ. ಮನುಷ್ಯನು ತನ್ನನ್ನೇ ತಾನು ಆಳಲಿಲ್ಲವಾದರೆ, ಸ್ವ-ರಾಜ್ಯವಾಗಲೀ ರಾಮರಾಜ್ಯವಾಗಲೀ ದೊರಕದು. ಹೊರಗಿನವರೆಲ್ಲರನ್ನೂ ಆಳಿ, ತನ್ನನ್ನೇ ತಾನು ಆಳದಿರುವುದೆಂದರೆ ಹೊರಗೆ ಚೆಲುವಾಗಿ ಕಂಡು ಒಳಗಿನಿಂದ ಪೊಳ್ಳಾಗಿರುವ ಆಟದ ಬಣ್ಣದ ಮಾವಿನ ಹಣ್ಣಿನಂತೆ ಮೋಸದಾಯಕವೂ ನಿರಾಶಾಜನಕವೂ ಆಗಿದೆ. ಕಾಮನನ್ನು ಗೆದಿಯದಿದ್ದ ಯಾವ ವ್ಯಕ್ತಿಯೂ ಹರಿಜನ ಕಾರ್ಯಕ್ಕಾಗಲೀ, ಜಾತೀಯ ಐಕ್ಯತೆಗಾಗಲೀ, ಖಾದಿ, ಗೋಸಂರಕ್ಷಣೆ ಇಲ್ಲವೆ ಗ್ರಾಮ ಪುನರುದ್ಧಾರ ಕಾರ್ಯಕ್ಕಾಗಲೀ ಯಾವ ಸೇವೆಯನ್ನೂ ಸಲ್ಲಿಸಲಾರ. ಇಂಥ ಮಹಾಕಾರ್ಯಗಳು ಬರಿಯ

ಬುದ್ಧಿಮತ್ತೆಯಿಂದ ಮಾತ್ರ ಆಗುವವಲ್ಲ. ಅವಕ್ಕೆ ಆಧ್ಯಾತ್ಮಿಕ ಪ್ರಯತ್ನ ಇಲ್ಲವೆ ಆತ್ಮಿಕ ಶಕ್ತಿ ಬೇಕು. ಈ ಆತ್ಮಿಕ ಶಕ್ತಿಯು ದೊರಕುವುದು ಪರಮಾತ್ಮನ ಕೃಪೆಯಿಂದ ಮಾತ್ರ ಕಾಮದ ಗುಲಾಮನಾಗಿದ್ದವನಿಗೆ ಪರಮಾತ್ಮನ ಕೃಪೆಯು ದೊರಕದು.

ಹಾಗಿದ್ದಲ್ಲಿ ನಮ್ಮ ಶಿಕ್ಷಣ ಕ್ರಮದಲ್ಲಿ ಲೈಂಗಿಕ ವಿಜ್ಞಾನಕ್ಕೆ ಇರುವ ಸ್ಥಾನವಾದರೂ ಯಾವುದು? ಅಥವಾ ಅದಕ್ಕೆ ಸ್ಥಾನವಾದರೂ ಉಂಟೇ? ಲೈಂಗಿಕ ವಿಜ್ಞಾನವು ಎರಡು ಬಗೆಯದಾಗಿದೆ. ಒಂದು ಲೈಂಗಿಕ ಪ್ರವೃತ್ತಿಯನ್ನು ಗೆಲ್ಲುವುದು ಇಲ್ಲವೆ ನಿಯಂತ್ರಿಸುವುದಕ್ಕಾಗಿ ಇನ್ನೊಂದು ಈ ಪ್ರವೃತ್ತಿಯನ್ನು ಉದ್ರೇಕಿಸಿ ಅದನ್ನು ಬೆಳೆಸುವುದಕ್ಕಾಗಿ. ಮಗುವಿನ ತರಬೇತಿಯನ್ನು ಎರಡನೆಯ ಬಗೆಯ ಶಿಕ್ಷಣವು ವಿಘಾತಕ ಮತ್ತು ಭಯಾನಕವಾಗಿದ್ದಷ್ಟೇ ಮೊದಲನೆಯ ಬಗೆಯ ಶಿಕ್ಷಣವು ತುಂಬಾ ಅವಶ್ಯಕವಾಗಿದೆ. ಪ್ರಪಂಚದ ಎಲ್ಲ ದೊಡ್ಡ ಧರ್ಮಗಳೂ ಕಾಮವು ಮನುಷ್ಯನ ಕಡುವೈರಿಯೆಂದು ಸರಿಯಾಗಿಯೇ ಭಾವಿಸಿದೆ. ಕಾಮದ ನಂತರ ಕ್ರೋಧದ್ವೇಷಗಳು ಬರುವವು. ಭಗವದ್ಗೀತೆಯ ಪ್ರಕಾರ ಕ್ರೋಧ ದ್ವೇಷಗಳು ಕಾಮದ ಕೂಸು, ಗೀತೆಯಲ್ಲಿ ಕಾಮ ಪದವು ಆಸೆ ಎಂಬ ವಿಶಾಲಾರ್ಥದಲ್ಲೇನೋ ಬಂದಿದೆ. ಆದರೆ, ಈಗ ನಾವು ಸದ್ಯ ಬಳಸುತ್ತಿರುವ ಅರ್ಥದಲ್ಲಿಯೂ ಈ ಮಾತು ಸರಿಹೋಗುತ್ತದೆ.

ಪುಟ್ಟ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜನನೇಂದ್ರಿಯಗಳ ಉಪಯೋಗ ಮತ್ತು ಕರ್ತವ್ಯಗಳ ವಿಷಯವಾಗಿ ಜ್ಞಾನವನ್ನು ಮಾಡಿಕೊಡಬೇಕೋ ಕೊಡಬಾರದೋ ಎಂಬ ಪ್ರಶ್ನೆಗೆ ನಾವೇನೂ ಇನ್ನೂ ಉತ್ತರ ಕೊಟ್ಟಂತಾಗಲಿಲ್ಲ.. ಕೆಲಮಟ್ಟಿಗೆ, ಈ ಜ್ಞಾನವನ್ನು ಮಾಡಿಕೊಡಬೇಕೆಂದು ನನಗನಿಸುತ್ತದೆ. ಈಗ ಸದ್ಯ ಅವರು ಈ ಜ್ಞಾನವನ್ನು ಹೇಗೆ ಹೇಗೋ ಪಡೆದು ಆ ಮೂಲಕ ಅನೇಕ ದುಷ್ಟ ಚಟಗಳಿಗೆ ಒಳಗಾಗುತ್ತಾರೆ. ಈ ವಿಷಯದಿಂದ ಬರಿ ಮುಖ ತಿರುಗಿಸುವುದರಿಂದ ನಾವು ಲೈಂಗಿಕ ಭಾವನೆಯನ್ನು ಗೆಲ್ಲಲಾರೆವು. ಆದ್ದರಿಂದ ಯುವಜನರು ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ಜನನೇಂದ್ರಿಯಗಳ ಮಹತ್ವ ಮತ್ತು ಸರಿಯಾದ ಉಪಯೋಗದ ಜ್ಞಾನವನ್ನು ಹೇಳಿಕೊಡಬೇಕೆಂಬುದು ನನ್ನ ದೃಢವಾದ ಅಭಿಪ್ರಾಯವಾಗಿದೆ. ನನ್ನದೇ ಆದ ರೀತಿಯಲ್ಲಿ, ನಾನು ಈ ಜ್ಞಾನವನ್ನು ನನ್ನ ಮೇಲ್ವಿಚಾರಣೆಯಲ್ಲಿರುವ ಯುವಜನರಿಗೆ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಕೊಡಲು ಯತ್ನಿಸಿದ್ದೇನೆ.

ನಾನು ಹೇಳುವ ಲೈಂಗಿಕ ಶಿಕ್ಷಣವೆಂದರೆ, ಲೈಂಗಿಕ ಪ್ರವೃತ್ತಿಯನ್ನು ಗೆಲ್ಲುವ ಮತ್ತು ಉದಾತ್ತೀಕರಿಸುವ ಉದ್ದೇಶವುಳ್ಳದ್ದಾಗಿರಬೇಕು. ಆದ್ದರಿಂದ ಕುರುಡು ಅನಿಸಿಕೆಗಳಿಗಾಗಿ ಬುದ್ಧಿ ಶಕ್ತಿಯ ಸಾಮ್ರಾಜ್ಯವನ್ನು ಕಳೆದುಕೊಳ್ಳುವುದೆಂದರೆ, ಮಾನವ ಭಾಗ್ಯವನ್ನೇ

ಕಳೆದುಕೊಂಡಂತೆಂಬುದನ್ನು ಅರಿತುಕೊಳ್ಳಬೇಕು. ಮನುಷ್ಯನಲ್ಲಿ ಬುದ್ಧಿಶಕ್ತಿಯು ಭಾವನೆಗಳನ್ನು ಪ್ರಚೋದಿಸಿ ಅವನ್ನು ಮುನ್ನಡೆಸುತ್ತದೆ. ಪಶುಗಳಲ್ಲಿಯೇ ಆತ್ಮವು ಯಾವಾಗಲೂ ಮಲಗಿಕೊಂಡುಬಿಟ್ಟಿರುತ್ತದೆ. ಹೃದಯವನ್ನು ಜಾಗೃತಗೊಳಿಸುವುದೆಂದರೆ, ಮಲಗಿದ ಆತ್ಮನನ್ನು ಎಚ್ಚರಿಸಿದಂತೆ.

ಇನ್ನು ನಿಜವಾದ ಈ ಲೈಂಗಿಕ ವಿಜ್ಞಾನವನ್ನು ಯಾರು ಕಲಿಸಬೇಕು? ಸ್ಪಷ್ಟವಾಗಿ ಎಂದರೆ, ತನ್ನ ವಿಕಾರಗಳನ್ನು ಗೆದ್ದವನೇ ಈ ಶಿಕ್ಷಣವನ್ನು ಕೊಡಬಲ್ಲನು. ಖಗೋಲಶಾಸ್ತ್ರ ಮತ್ತು ಇತರ ವಿಜ್ಞಾನಗಳನ್ನು ಕಲಿಸಬೇಕಾದರೆ, ಆ ವಿಷಯಗಳಲ್ಲಿ ತರಬೇತಿ ಹೊಂದಿ ಪಾರಂಗತರಾದವರು ಬೇಕಾಗುತ್ತದೆ. ಅದರಂತೆಯೇ ಲೈಂಗಿಕ ವಿಜ್ಞಾನ ಅಥವಾ ಲೈಂಗಿಕ ವಿಕಾರ ನಿಯಂತ್ರಣವನ್ನು ಕಲಿಸಲು, ಈ ಶಾಸ್ತ್ರವನ್ನು ಅಭ್ಯಸಿಸಿ ಸ್ವಂತ ವಿಕಾರಗಳನ್ನು ಗೆದ್ದವರೇ ಬೇಕು. ಪ್ರಾಮಾಣಿಕತೆ ಮತ್ತು ಅನುಭವಗಳ ಆಧಾರವಿಲ್ಲದ ಉದ್ದುದ್ದ ಮಾತುಗಳು ನಿರ್ಜೀವವಾಗಿದ್ದು ಮನುಷ್ಯನ ಹೃದಯದೊಳಗೆ ಸೇರಲು ಅವು ಸಮರ್ಥವಾಗುತ್ತದೆ. ಅದೇ, ಆತ್ಮಾನುಭೂತಿ ಮತ್ತು ನಿಜವಾದ ಅನುಭವಗಳಿಂದ ಕೂಡಿದ ಮಾತು ಯಾವಾಗಲೂ ಫಲಪ್ರದವಾಗುತ್ತದೆ.

ಇಂದು ನಮ್ಮ ಸುತ್ತಲಿನ ಎಲ್ಲ ವಾತಾವರಣ ನಾವು ಓದುವುದು, ವಿಚಾರ ಮಾಡುವುದು, ಸಮಾಜದಲ್ಲಿ ನಡೆದುಕೊಳ್ಳುವುದು ಇವೆಲ್ಲ ಲೈಂಗಿಕ ಪ್ರವೃತ್ತಿಗೆ ಅನುಕೂಲವಾಗಿರುವಂತೆಯೇ ಇವೆ. ಅದರ ನಾಗರಮುರಿಗೆಯಿಂದ ಬಿಡಿಸಿಕೊಳ್ಳುವುದೇನೂ ಸರಳವಾದ ಕೆಲಸವಾಗಿಲ್ಲ. ಆದಾಗ್ಯೂ, ಅದು ನಾವು ಮಾಡಲೇಬೇಕಾದ ಅತ್ಯುಚ್ಚ ಕಾರ್ಯವಾಗಿದೆ. ಆತ್ಮ-ಸಂಯಮವು ಮನುಷ್ಯನು ಸಾಧಿಸಬೇಕಾದ ಅತ್ಯುಚ್ಚ ಕರ್ತವ್ಯವಾಗಿದೆಯೆಂಬ ಆದರ್ಶವನ್ನಿಟ್ಟುಕೊಂಡು, ತಮ್ಮ ಕರ್ತವ್ಯ ಬುದ್ಧಿಯಲ್ಲಿ ಅದಮ್ಯವಾದ ವಿಶ್ವಾಸವನ್ನಿಟ್ಟುಕೊಂಡು, ನಿದ್ರೆ ನೀರಡಿಕೆ ಇಲ್ಲದೆ ಜಾಗರೂಕ ಮತ್ತು ಚೈತನ್ಯಪೂರ್ಣವಾದ ಸ್ವಾನುಭವವುಳ್ಳಂಥ ಹತ್ತೆಂಟು ಜನ ಶಿಕ್ಷಕರು ದೊರೆತರೂ, ಅವರು ನಾಡಿನ ಮಕ್ಕಳಿಗೆ ದಾರಿ ಬೆಳಕನ್ನು ತೋರಿ, ಅಜಾಗರೂಕರು ಲೈಂಗಿಕ ಕೆಸರಿನಲ್ಲಿ ಬೀಳದಂತೆಯೂ, ಅದರಲ್ಲಿಯೂ ಈಗಾಗಲೇ ಬಿದ್ದವರು ಪಾರಾಗಲೂ ಸಹಾಯಕರಾಗುತ್ತಾರೆ.

–ಹರಿಜನ., 1936

ಸಂತಾನ ಪ್ರತಿಬಂಧಕಗಳು

ಕಾಯದೆಬದ್ಧವಾಗಿ ಮಾಡಿಟ್ಟ ಸಾಲದ ಋಣವನ್ನು ತೀರಿಸಬೇಕಾದ ರೀತಿಯಲ್ಲಿ ಲೈಂಗಿಕ ಪ್ರವೃತ್ತಿಯನ್ನು ಪೂರ್ತಿಗೊಳಿಸುವುದೂ ಮನುಷ್ಯನ ಪವಿತ್ರವಾದ ಋಣವೆಂದೂ, ಹಾಗೆ ಮಾಡದಿದ್ದರೆ ಬೌದ್ಧಿಕ ಹ್ರಾಸವುಂಟಾಗುವುದೆಂದೂ ಇತ್ತೀಚೆಗೆ ನಮ್ಮ ಕಿವಿಗಡಚಿಕ್ಕುವಷ್ಟು ಹೇಳಲಾಗಿದೆ. ಈ ಲೈಂಗಿಕ ವಾಸನೆಯನ್ನು ಸಂತಾನೇಚ್ಛೆಯಿಂದ ವಿಂಗಡಿಸಲಾಗಿದ್ದು, ಗರ್ಭಧಾರಣವು ನಿರೋಧಿಸಬಹುದಾದ ಕೇವಲ ಒಂದು ಆಕಸ್ಮಿಕ ಘಟನೆಯೆಂದು ಸಂತಾನ ಪ್ರತಿಬಂಧನಪ್ರವಾದಿಗಳು ಹೇಳುತ್ತಿದ್ದಾರೆ. ಈ ವಿಚಾರ ಪ್ರಣಾಲಿಯನ್ನು ಎಲ್ಲಿಯೇ ಆದರೂ ಬೋಧಿಸುವುದೆಂದರೆ ತುಂಬಾ ಗಂಡಾಂತರಪೂರ್ಣವಾದದ್ದೆಂದೂ ನಾನು ಹೇಳಬಯಸುತ್ತೇನೆ. ಅದರಲ್ಲಿಯಂತೂ ಜನನೇಂದ್ರಿಯದ ಅತ್ಯುಪಯೋಗದ ಮೂಲವಾಗಿ ನಿರ್ವೀಯವಾದ ಹಿಂದೂಸ್ಥಾನದ ಮಧ್ಯಮವರ್ಗದ ಪುರುಷರಿಗೆ ಇಂಥ ಮಾತನ್ನು ಹೇಳುವುದಂತೂ ಘಾತುಕವಾಗಿದೆ. ಗುಪ್ತ ಚಟಗಳು ಶಾಲೆಗಳ ಹುಡುಗ ಹುಡುಗಿಯರಲ್ಲಿ ಎಂಥ ಹಾವಳಿಯನ್ನು ಮಾಡಿವೆಯೆಂಬುದು ನನಗೆ ಗೊತ್ತಿದೆ. ಶಾಲೆ ಕಾಲೇಜುಗಳಲ್ಲಿ ಕಲಿಯುವ ಅನೇಕ ಮೃದು ಮನಸ್ಸಿನ ಅವಿವಾಹಿತ ಹುಡುಗಿಯರು ಗರ್ಭನಿರೋಧ ಸಾಹಿತ್ಯವನ್ನು ಅತ್ಯುತ್ಸಾಹದಿಂದ ಓದುತ್ತಿದ್ದಾರೆಂದೂ, ತಮ್ಮ ಹತ್ತಿರ ಸಂತಾನ ಪ್ರತಿಬಂಧಕಗಳನ್ನು ಇಟ್ಟುಕೊಂಡಿರುತ್ತಾರೆಂದೂ ಹೇಳಿದರೆ ನಾನು ಪ್ರತಿಬಂಧಕಗಳ ಉಪಯೋಗವನ್ನು ವಿವಾಹಿತರಿಗೆ ಮಾತ್ರ ಮಿತಗೊಳಿಸುವುದು ಸಾಧ್ಯವಿಲ್ಲ. ಮಾನವನ ಪಾಶವೀ ಪ್ರವೃತ್ತಿಯ ಬಹಳ ಒಳ್ಳೆಯದೂ ಉದಾತ್ತವಾದುದೂ ಆದ ಭಾವನೆಯಾಗಿದೆ. ಅದರ ಬಗ್ಗೆ ನಾವೇನೂ ನಾಚಿಕೆಪಡಬೇಕಾಗಿಲ್ಲ. ಆದರೆ, ಅದು ಕೇವಲ ಸಂತಾನೋತ್ಪತ್ತಿಗಾಗಿ ಮಾತ್ರವಿದೆ. ಇದರ ವ್ಯತಿರಿಕ್ತವಾದ ಉಪಯೋಗವೆಲ್ಲ ಪರಮಾತ್ಮ ಮತ್ತು ಮಾನವನ ವಿರುದ್ಧ ಎಸಗಿದ ಪಾಪವಾಗಿದೆ. ಪೂರ್ವ ಕಾಲದಲ್ಲಿಯೂ ಒಂದು ವಿಧದ ಸಂತಾನ ಪ್ರತಿಬಂಧಕಗಳಿದ್ದವು. ಆದರೆ, ಅಂದಿನ ಜನ ಅವುಗಳ ಉಪಯೋಗವನ್ನು ಪಾಪಕರವೆಂದು ಭಾವಿಸಿದ್ದರು. ಪಾಪವನ್ನು ಪುಣ್ಯವೆಂದು ಉದ್ಘೋಷಿಸುವ ಮಹಾಕಾರ್ಯವು ನಮ್ಮ ಜನಾಂಗಕ್ಕೆ ಮಾತ್ರ ಮೀಸಲಾಗಿದ್ದಿತು.

–ಹಿಂಗೋರಾಣಿ, ಪು. 207–208

(ಗಾಂಧೀಜಿಯವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಬಗ್ಗೆ ಒಬ್ಬ ಯುವಕನು ಅವರಿಗೆ ಹೀಗೆ ಪತ್ರ ಬರೆದಿದ್ದನು)

ನೀವು "ನೀತಿ" ಎಂದರೆ ಯಾವ ಅರ್ಥವನ್ನಿಟ್ಟುಕೊಂಡಿದ್ದೀರೆಂಬುದು ನನಗೆ ಸರಿಯಾಗಿ ಅರ್ಥವಾಗದು. 'ನೀತಿ' ಪದವು ಬರಿಯ ಲೈಂಗಿಕ ಜೀವನಕ್ಕೆ ಮಾತ್ರ ಅನ್ವಯಿಸುತ್ತಿದೆಯೋ? ಬರೀ ಯುವಕ ಯುವತಿಯರ ಲೈಂಗಿಕ ಸ್ಖಾಲಿತ್ಯಗಳ ಬಗ್ಗೆ ಟೀಕೆ ಮಾಡುತ್ತ ಅವರೆದುರು ಬ್ರಹ್ಮಚರ್ಯದ ಒಳ್ಳೆಯತನವನ್ನು ಬೇಸರವಿಲ್ಲದೆ ನೀವು ಪುನಃ ಪುನಃ ಎತ್ತಿ ತೋರಿಸುವುದನ್ನು ನೋಡಿದರೆ 'ನೀತಿ' ಎಂಬ ಪದಕ್ಕೆ ನೀವು ಕೇವಲ ಲೈಂಗಿಕ ನಿರ್ಬಂಧವನ್ನು ಮಾತ್ರ ಇಟ್ಟುಕೊಂಡಂತೆ ಕಾಣುತ್ತದೆ. ಭಾರತೀಯ ಯುವಕನ ಮನಸ್ಸು ನಿಮಗೆ ಗೊತ್ತಿದೆಯಾಗಿ ಸಾರಿದ್ದೀರಿ. ಕಾಲಕಾಲದ ದೀರ್ಘಾವಧಿಯ ನಿರುದ್ಯೋಗ, ಕತ್ತು ಹಿಸುಕುವ ಸಾಮಾಜಿಕ ನಡವಳಿಕೆ ಮತ್ತು ಪರಂಪರೆಗಳು, ಸಹಶಿಕ್ಷಣದ ಪ್ರಲೋಭನೆಗಳು ಇವುಗಳೆಲ್ಲವುಗಳೊಳಗಿಂದ ಹಾಯ್ದು ಬರುತ್ತಿರುವ ಇಂದಿನ ಮಧ್ಯಮ ವರ್ಗದ ಯುವಕನ ವಾತಾವರಣವು ಎಂತಹದಿದೆಯೆಂಬುದನ್ನು ನೀವು ಅರಿತಿಲ್ಲ. ಆದ್ದರಿಂದ ನಾನು ವಿನಯಪೂರ್ವಕವಾಗಿ ನಿಮ್ಮಲ್ಲಿ ಪ್ರಾರ್ಥಿಸುವುದೆಂದರೆ ನೀವು ನಿಮ್ಮ ಉಗ್ರ ನೀತಿ ಮಟ್ಟದಿಂದ ಆಧುನಿಕ ಯುವಕರನ್ನು ಅಳೆಯಲೆತ್ನಿಸದೆ, ಅವರ ಬಗ್ಗೆ ದಯಾಂತಃಕರಣವುಳ್ಳವರಾಗಬೇಕು. ಮದುವೆಯ ಚೌಕಟ್ಟಿನಲ್ಲೇ ಇರಲಿ, ಅಥವಾ ಅದರ ಹೊರಗೇ ಇರಲಿ, ಪರಸ್ಪರ ಒಪ್ಪಿಗೆ ಮತ್ತು ಪ್ರೀತಿಯಿಂದ ಮಾಡಿದ ಕೆಲಸವೆಲ್ಲವೂ ನೀತಿಯುತವಾಗಿಯೇ ಇದೆ. ಸಂತತಿ ಪ್ರತಿಬಂಧಕಗಳನ್ನು ಹುಡುಕಿ ತೆಗೆದಂದಿನಿಂದ ಮದುವೆಯ ಲೈಂಗಿಕ ತಳಹದಿಯೇ ಅಲುಗಾಡಿದೆ. ಇಂದು ಮದುವೆಯೆಂದರೆ ಕೇವಲ ಮಕ್ಕಳ ಸಂರಕ್ಷಣೆ ಮತ್ತು ಪೋಷಣೆಯ ಒಂದು ಸಂಸ್ಥೆಯಾಗಿದೆ. ಇಂದಿನ ಯುವಕರ ಬಗ್ಗೆ ನಿರ್ಣಯ ಕೊಡುವ ಮೊದಲು ನಿಮ್ಮ ಯುವ ಜೀವನವನ್ನೇ ನೀವು ಮರೆಯಬಾರದೆಂದು ಹೇಳಲಿಕ್ಕೆ. ಧೈರ್ಯ ಮಾಡುತ್ತೇವೆ. ನಿಮ್ಮ ಕೂಡ ಹೋಲಿಸಿ ನೋಡಿದರೆ, ಇಂದಿನ ಎಷ್ಟೋ ಯುವಕರು ಈ ವಿಷಯದಲ್ಲಿ ಹತ್ತು ಪಾಲಿಗೆ ಬೇಕು.

ಇದೊಂದು ಶರಾವಿಕ ಪತ್ರ, ನಿಜವಾಗಿಯೂ ಇಂದಿನ ಯುವಕ ಯುವತಿಯರ ಬಗ್ಗೆ ನನಗೆ ಅನುಕಂಪವಿದೆ. ನನ್ನ ಯೌವನ ಕಾಲದ ಕಲ್ಪನೆಯೂ ನನಗೆ ಸ್ಪಷ್ಟವಾಗಿ ಇದೆ. ನಮ್ಮ ದೇಶದ ಯುವಕರಲ್ಲಿ ನನಗೆ ವಿಶ್ವಾಸವಿದ್ದುದರಿಂದಲೇ, ಅವರನ್ನು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ವಿವರಿಸಲು ನಾನು ಬೇಸರಿಸುವುದಿಲ್ಲ.

ಬ್ರಹ್ಮಚರ್ಯವಿಲ್ಲದೆ ಸ್ತ್ರೀ ಪುರುಷರು ನಷ್ಟರಾದಂತೆಯೇ. ತಮ್ಮ ಇಂದ್ರಿಯಗಳ ನಿಗ್ರಹವಿಲ್ಲದಿರುವುದೆಂದರೆ ಗಾಳಿಪಟವಿಲ್ಲದ ದೋಣಿಯಂತೆ. ಮೊದಲನೆಯ ಬಂಡೆಗಲ್ಲಿನ ಹೊಡೆತಕ್ಕೇ ಅದು ಪುಡಿ ಪುಡಿಯಾಗಬೇಕು. ಅಂತಲೇ, ನಾನು ಯಾವಾಗಲೂ ನಿಗ್ರಹದ ಬಗ್ಗೆ ಇಷ್ಟು ಒತ್ತಿ ಹೇಳುವುದು. ಮದುವೆಯ ಚೌಕಟ್ಟಿನ

ಹೊರಗೇ ಆಗಲೀ ಅಥವಾ ಮದುವೆಯ ಬಂಧನದಲ್ಲಿಯೇ ಆಗಲಿ, ಪರಸ್ಪರ ಒಪ್ಪಿಗೆಯು ಲೈಂಗಿಕ ಕೃತಿಯನ್ನು ನೀತಿವಂತವಾಗಿ ಮಾಡುತ್ತಿದ್ದರೆ, ಅದೇ ತರ್ಕದ ಪ್ರಕಾರ ಸ್ವಲಿಂಗ ಸಂಬಂಧವೂ ನೈತಿಕವಾಗಬೇಕಾದೀತು. ಮನುಷ್ಯನನ್ನು ಗುಲಾಮನನ್ನಾಗಿ ಮಾಡಿದ ಯಾವ ಅಮಲು ಪೇಯಕ್ಕಿಂತಲೂ ಇಂಥ ಲಾಲಸೆ ಹೆಚ್ಚಿನ ಉನ್ಮಾದವಾದೀತು. ಲೈಂಗಿಕ ಕೃತಿ ಮತ್ತು ಅದರ ನೈಸರ್ಗಿಕ ಪರಿಣಾಮವಾದ ಸಂತಾನ ಇವೆರಡರ ನಡುವಿನ ತಳಕು ತಪ್ಪಿದ್ದಾದರೆ, ಈ ಕೃತಿಯು ಸ್ವೇಚ್ಛಾಚಾರ ಮತ್ತು ಅನ್ಯೆಸರ್ಗಿಕ ಪಾಪಕೃತ್ಯಗಳ ಉತ್ತೇಜನದಲ್ಲಿ ಪರ್ಯವಸಾನ ಹೊಂದೀತು. ನನ್ನಲ್ಲಿ ನನ್ನ ಯೌವನದಲ್ಲಿದ್ದ ಅತಿ ಉಪಭೋಗವು ನನ್ನ ಹೆಂಡತಿಗೆ ಮಾತ್ರ ಪರಿಮಿತವಾಗಿದ್ದಿತು. ಕೇವಲ ಸುಖೋಪಭೋಗಕ್ಕಾಗಿ ಲೈಂಗಿಕ ಕೃತಿಯನ್ನು ನೆರವೇರಿಸುವುದು ಮೂರ್ಖತನವೆಂದು ನಾನು 23 ವರುಷದವನಿದ್ದಾಗಲೇ ಅರಿತುಕೊಂಡೆ. ನಾನು 1899ರಲ್ಲಿ ಅಂದರೆ ಮೂವತ್ತು ವರುಷದವನಿದ್ದಾಗಲೇ ಸಂಪೂರ್ಣ ಬ್ರಹ್ಮಚರ್ಯವನ್ನು ವಹಿಸಿದೆ. ಪ್ರತಿಯೊಬ್ಬರೂ ಇದೇ ದೃಷ್ಟಿ ಮತ್ತು ಶ್ರದ್ಧೆಯನ್ನಿಟ್ಟುಕೊಂಡರೆ, ನಾನು ದೊರಕಿಸಿದ್ದನ್ನೇ ಎಲ್ಲರೂ ದೊರಕಿಸುತ್ತಾರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಶ್ರದ್ಧೆಯಿಲ್ಲದೆ ಕೆಲಸ ಮಾಡುವುದೆಂದರೆ ತಳವಿಲ್ಲದ ಕುಣಿಯ ತಳವನ್ನು ಮುಟ್ಟಲು ಪ್ರಯತ್ನಿಸಿದಂತೆ.

–ಹಿಂಗೋರಾಣಿ, ಪು. 215–217

ವಿದ್ಯಾರ್ಥಿಗಳು ಮತ್ತು ರಾಜಕಾರಣ

ತಮ್ಮ ದೇಶದ ರಾಜಕೀಯ ಚಳುವಳಿಯಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ಸ್ಪಷ್ಟವಾದ ಕರ್ತವ್ಯವಾಗಿದೆಯೆಂದು ನಾನು ಭಾವಿಸಿದ್ದೇನೆ. ಜಗತ್ತಿನ ತುಂಬೆಲ್ಲ ವಿದ್ಯಾರ್ಥಿಗಳು ಹೀಗೆ ಮಾಡುತ್ತಿದ್ದಾರೆ. ದುರ್ದೈವದಿಂದ ಕೇವಲ ಇಂಗ್ಲೀಷ್ ಕಲಿತಂಥ ವರ್ಗಕ್ಕೆ ಮಾತ್ರ ರಾಜಕೀಯ ಜಾಗೃತಿಯು ಬಹುಮಟ್ಟಿಗೆ ಮರ್ಯಾದಿತವಾಗಿದ್ದ ಭಾರತದಂಥ ದೇಶದಲ್ಲಿಯಂತೂ ಅವರ ಕರ್ತವ್ಯವೂ ಹೆಚ್ಚಿನದಾಗಿದೆ. ಚೀನ ಮತ್ತು ಈಜಿಪ್ಟ್‌ಗಳಲ್ಲಿ ವಿದ್ಯಾರ್ಥಿಗಳೇ ರಾಜಕೀಯ ಚಳುವಳಿಗೆ ಕಾರಣರಾಗಿದ್ದಾರೆ. ಭಾರತದಲ್ಲಿ ಅವರು ಮಾಡುವ ಕೆಲಸ ಕಡಿಮೆಯಾದದ್ದೇನೂ ಇಲ್ಲ.

–ಹಿಂಗೋರಾಣಿ, ಪು. 99–100

ವಿದ್ಯಾವಂತರಾದ ವಿದ್ಯಾರ್ಥಿಗಳಿಗೆ ಕೂಲಿಕಾರರ ಹಾಗೆ ಯಾವ ಲೌಕಿಕ ಆಸೆಯೂ ಇಲ್ಲ. ವಿದ್ಯಾ ಸಂಸ್ಥೆಗಳ ಮುಖ್ಯಸ್ಥರೂ ನೌಕರಿ ಒಡೆಯರಾಗಿದ್ದರ ಮೂಲಕ ವಿದ್ಯಾರ್ಥಿಗಳ ಕೂಡ ಕದನ ಹೂಡುವುದರಲ್ಲಿ ಅವರಿಗೂ ಯಾವ ಆಸಕ್ತಿಯೂ ಇಲ್ಲ. ಆದ್ದರಿಂದ ವಿದ್ಯಾರ್ಥಿಗಳು ಹೂಡುವ ಸಂಪಿನ ಪರಿಣಾಮವು ತೀವ್ರತಮವಾಗುವ ಮೂಲಕ ತೀರ ವಿಶೇಷ ಸಂದರ್ಭದಲ್ಲಿ ಮಾತ್ರವೇ ಅದನ್ನು ಸಮರ್ಥಿಸಬಹುದು.

ವಿದೇಶೀಯ ಆಳ್ವಿಕೆಯ ನೊಗದ ಭಾರದಲ್ಲಿ ನರಳುತ್ತಿರುವ ಭಾರತದಂಥ ದೇಶದಲ್ಲಿ ವಿದ್ಯಾರ್ಥಿಗಳು ರಾಜಕೀಯ ಚಳುವಳಿಯಲ್ಲಿ ಭಾಗವಹಿಸದಂತೆ ತಡೆಯುವುದು ದುಸ್ಸಾಹಸವಾದ ಮಾತು. ವಿದ್ಯಾರ್ಥಿಗಳ ಅಭ್ಯಾಸಕ್ಕೆ ಆತಂಕವಾಗದಂತೆ ಅವರ ಉತ್ಸಾಹವನ್ನು ಮಾತ್ರ ನಾವು ನಿಯಂತ್ರಿಸಬೇಕು. ಹೊಡೆದಾಡುತ್ತಿರುವ ರಾಜಕೀಯ ಪಕ್ಷಗಳಲ್ಲಿ ಒಳ ಸೇರದೇ ತಮಗಿರುವ ರಾಜಕೀಯ ಅಭಿಪ್ರಾಯವನ್ನು ವ್ಯಕ್ತಮಾಡಲು ಮತ್ತು ಪ್ರತಿಪಾದಿಸಲು ವಿದ್ಯಾರ್ಥಿಗಳು ಸ್ವತಂತ್ರರಾಗಿರಬೇಕು.

– ಹಿಂಗೋರಾಣಿ, 102–103

ಸಂಪಿನ ಕಾಲಕ್ಕೆ ವಿದ್ಯಾರ್ಥಿಗಳು ಏನಾದರೂ ವಿಧಾಯಕ ಕಾರ್ಯವನ್ನು ಕೈಕೊಂಡರೆ ಅವರಿಗೆ ತಮ್ಮ ಶಕ್ತಿಯ ಅರಿವು ಇನ್ನೂ ಹೆಚ್ಚಾಗುತ್ತದೆ. ನಮ್ಮ ಶಾಲಾ ಕಾಲೇಜುಗಳು ನಮ್ಮನ್ನು ಪೌರುಷವಂತರನ್ನಾಗಿ ಮಾಡದೆ ಯಾಚಕವೃತ್ತಿಯ ಅಂಜುಬುರುಕರು, ಅನಿಶ್ಚಿತ ಮನಸ್ಕರು ಮತ್ತು ಅನಿಯಂತ್ರಿತರನ್ನಾಗಿ ಮಾಡುತ್ತವೆಂದು ನನ್ನ ದೃಢವಾದ ನಂಬುಗೆ. ಪೌರುಷವು ಜಂಬಮ ಜ್ವಾಲನ ಇಲ್ಲವೆ ಹುಚ್ಚು ಉನ್ಮಾದಲ್ಲಿಲ್ಲ. ಅದು ಸರಿಯಾದ ಕೆಲಸವನ್ನು ಮಾಡಿ, ಅದರ ಪರಿಣಾಮವನ್ನು ಎದುರಿಸುವುದರಲ್ಲಿ ಇದೆ. ಪೌರುಷವು ಶಬ್ದದಲ್ಲಿಲ್ಲ, ಕೃತಿಯಲ್ಲಿದೆ.

– ಯಂಗ್ ಇಂಡಿಯಾ, 1929

ವಿದ್ಯಾರ್ಥಿಗಳಿಗೆ ಬೇಕಾದಷ್ಟು ಅಭಿಪ್ರಾಯ ಸ್ವಾತಂತ್ರ್ಯವೂ ಅಭಿವ್ಯಕ್ತಿ ಸ್ವಾತಂತ್ರ್ಯವೂ ಇರಬೇಕು. ತಮಗೆ ಇಷ್ಟ ಬಂದ ಯಾವುದೇ ರಾಜಕೀಯ ಪಕ್ಷದ ಬಗ್ಗೆಯೂ ಅವರು ನಮ್ಮ ಸಹಾನುಭೂತಿಯನ್ನು ತೋರಿಸಬಹುದು. ಆದರೆ, ನನ್ನ ಅಭಿಪ್ರಾಯದಲ್ಲಿ ಅಭ್ಯಾಸ ಮಾಡುತ್ತಿರುವಾಗ ಅವರಿಗೆ ಕ್ರಿಯಾಸ್ವಾತಂತ್ರ್ಯವಿರಲಾಗದು. ಯಾವನೇ ವಿದ್ಯಾರ್ಥಿಯು ಸಕ್ರಿಯ ರಾಜಕಾರಣಿಯಾಗಿ ಅದೇ ಕಾಲಕ್ಕೆ ಅಭ್ಯಾಸವನ್ನು ಮಾಡಲಾರ.

– ಹರಿಜನ., 1937

ಅತಿ ವಿರಳವಾದ ಸಂದರ್ಭಗಳನ್ನು ಮಾತ್ರ ಬಿಟ್ಟರೆ, ವಿದ್ಯಾರ್ಥಿಗಳು ಸಂಪುಗಳಲ್ಲಿ ಭಾಗವಹಿಸಬಾರದೆಂಬ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಬರೆದಿದ್ದೇನೆ. ರಾಜಕೀಯ ಪ್ರದರ್ಶನದಲ್ಲಿಯೂ, ಪಕ್ಷೀಯ ರಾಜಕಾರಣದಲ್ಲಿಯೂ ವಿದ್ಯಾರ್ಥಿಗಳು ಭಾಗವಹಿಸುವುದು ಸಂಪೂರ್ಣ ತಪ್ಪೆಂದು ನನ್ನ ಅಭಿಪ್ರಾಯ. ಇಂಥ ಉತ್ಸಾಹಾತಿರೇಕವು ವಿದ್ಯಾರ್ಥಿಯ ಅಭ್ಯಾಸಕ್ಕೆ ಆತಂಕವನ್ನುಂಟುಮಾಡಿ, ಭಾವೀ ನಾಗರಿಕನೆಂದು ಅವನು ಮಾಡಬೇಕಾದ ಕೆಲಸಕ್ಕೆ ಅವನನ್ನು ಅನರ್ಹನನ್ನಾಗಿ ಮಾಡುತ್ತದೆ.

– ಹರಿಜನ., 1938

ಸುಶಿಕ್ಷಿತ ನಿರುದ್ಯೋಗ ಸಮಸ್ಯೆ

ನಾನು ಉಚ್ಚ ಶಿಕ್ಷಣದ ವಿರುದ್ಧವಿಲ್ಲ. ಆದರೆ, ಬಡವರು ಕೊಡುವ ಕರದ ಉಪಯೋಗದಿಂದ ಕೆಲವೇ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಈ ಶಿಕ್ಷಣವನ್ನು ಪಡೆಯುವುದಕ್ಕೆ ನಾನು ವಿರೋಧಿಯಾಗಿದ್ದೇನೆ. ಅದೂ ಅಲ್ಲದೆ, ನಾನು ಈಗ ಕೊಡಲ್ಪಡುತ್ತಿರುವ ಶಿಕ್ಷಣದ ವಿಷಯದ ಬಗ್ಗೆಯೂ ವಿರೋಧಿಯಾಗಿದ್ದೇನೆ. ಅದು ಗುಡ್ಡ ಅಗೆದು ಇಲಿ ತೆಗೆದಂತಿದೆ. ಈಗ ನಿಮ್ಮ ಸಮಸ್ಯೆ ಇರುವುದು ನಿರುದ್ಯೋಗದ ಬಗ್ಗೆ. ಇದರ ಬಗ್ಗೆ ನಿಮಗೆ ನನ್ನ ಸಹಕಾರ ಮತ್ತು ಸಹಾನುಭೂತಿಗಳಿವೆ. ಪ್ರತಿಯೊಬ್ಬ ಕೂಲಿಕಾರನಿಗೂ ತನ್ನ ದುಡಿಮೆಗೆ ತಕ್ಕಷ್ಟು ಸಿಗಬೇಕೆಂಬ ತತ್ತ್ವದ ಪ್ರಕಾರ, ನೀವು ಹಳ್ಳಿಗೆ ಹೋಗಬೇಕು. ಪ್ರತಿಯೊಬ್ಬ ಪದವೀಧರನೂ ಹಳ್ಳಿಗರಿಗೆ ಸೇವೆಯನ್ನು ಸಲ್ಲಿಸಿ ಅವರಿಂದ ಅನ್ನ ವಸ್ತ್ರ ವಸತಿಗಳನ್ನು ಪಡೆಯಲು ಬಾಧ್ಯಸ್ಥನಾಗಿದ್ದಾನೆ. ಮತ್ತು ಅವರು ಈ ರೀತಿ ಕೊಟ್ಟೂ ಕೊಡುತ್ತಾರೆ. ಆದರೆ, ಈ ಪದವೀಧರರು ಸಾಹೇಬರ ಹಾಗೆ ಇದ್ದು ಹಳ್ಳಿಗರು ಕೊಡಬೇಕಾದದ್ದಕ್ಕಿಂತ ಹತ್ತು ಪಟ್ಟು ಖರ್ಚು ಮಾಡುವುದಾದರೆ ಮಾತ್ರ ಹಳ್ಳಿಗರು ಕೊಡಲಾರರು. ಇಂಥ ಪದವೀಧರರ ಜೀವನ ಪದ್ಧತಿಯು, ಸಾಧ್ಯವಾದ ಮಟ್ಟಿಗೆ ಹಳ್ಳಿಗರ ಜೀವನ ಪದ್ಧತಿಯಂತಿರಬೇಕು. ಮತ್ತು ಇವರು ಕೆಲವು ಹಳ್ಳಿಗರ ಮನ್ನಣೆಯನ್ನು ಪಡೆಯಬೇಕು.

ವಿದ್ಯಾರ್ಥಿಗಳಿಗೆ ವಿಧಾಯಕ ಕಾರ್ಯಕ್ರಮ

ಜೀವನದ ಸಮಸ್ಯೆಗಳು

ಸಿಂಧಿ ಹುಡುಗಿಯರ ಜೀವನವನ್ನು ನರಕ ಸದೃಶವಾಗಿ ಮಾಡಿ, ಅವರ ತಾಯಿ ತಂದೆಗಳಿಗೆ ಸಂಕಟವನ್ನುಂಟುಮಾಡುವ ವರದಕ್ಷಿಣೆಯ ಪರಂಪರೆಯ ಬಗ್ಗೆ ವಿದ್ಯಾರ್ಥಿಗಳು ವಿಚಾರ ಮಾಡಬೇಕು. ಅದರಂತೆಯೇ, ತಮ್ಮ ನೈತಿಕ ಜೀವನ, ರಾಷ್ಟ್ರ ನಿರ್ಮಾಪಕರಾಗುವ ರೀತಿಗಳ ಬಗ್ಗೆ ವಿಚಾರ ಮಾಡಬೇಕು. ಓಂದಿನ ಕಾಲಕ್ಕೆ ವಿದ್ಯಾರ್ಥಿಗಳನ್ನು 'ಬ್ರಹ್ಮಚಾರಿ' ಎಂದು ಕರೆಯುತ್ತಿದ್ದರು. 'ಬ್ರಹ್ಮಚಾರಿ' ಎಂದರೆ, ದೇವರ ಕೂಡ, ದೇವರ ಹೆದರಿಕೆಯಲ್ಲಿ ಚಲಿಸುವವನು. ಅರಸರು ಮತ್ತು ಹಿರಿಯರು ಅವರಿಗೆ ಮನ್ನಣೆಯನ್ನು ಕೊಡುತ್ತಿದ್ದರು. ಈಗಲೂ ಹಾಗೆ ಆಗಬೇಕು.

ನಾಯಕರ ಪ್ರಶಂಸೆ

ಬರಿಯ ನಾಯಕರ ಪ್ರಶಂಸೆಯಿಂದ ಕೂಡಿದ ಮಾನಪತ್ರಗಳು ನಿರರ್ಥಕವಾಗಿದೆ. ಇಂಥ ಪ್ರಶಂಸೆಯ ಅಗತ್ಯವಿದ್ದವರಿಗೆ ಮಾನ ಪತ್ರವನ್ನು ಕೊಡಕೂಡದು...ಪ್ರತಿಯೊಂದು ಮಾನಪತ್ರದಲ್ಲಿಯೂ ಸ್ಥಳೀಯ ಲೋಪದೋಷಗಳ ಉಲ್ಲೇಖವಿರಬೇಕು. ನಿಜವಾದ ಪ್ರೀತಿಯನ್ನು ವ್ಯಕ್ತಪಡಿಸುವುದು ಪ್ರಶಂಸೆಯಿಂದಲ್ಲ, ಸೇವೆಯಿಂದ, ಆತ್ಮಶುದ್ಧಿಯು ನಿಜವಾದ ಸೇವೆಯ ಪ್ರಥಮ ಹೆಜ್ಜೆಯಾಗಿದೆ.

– ಹಿಂಗೋರಾಣಿ, ಪು. 188

ಖಾದಿ

ಈಗ ಖಾದಿಯಲ್ಲಿ ಎಲ್ಲ ಬಗೆಯ ರುಚಿಗಳಿಗೂ ಅನುಗುಣವಾದ ಅರಿವೆಯು ಸಿಗುತ್ತಿದೆ. ಭಾರತದ ಜನ ಸಾಮಾನ್ಯರ ಕೂಡ ಶಾಶ್ವತವಾದ ಮತ್ತು ಮುಂದುವರಿಯುವ ಸಂಪರ್ಕವನ್ನು ಪ್ರಸ್ತಾಪಿಸಬೇಕಾಗಿದ್ದರೆ, ಇನ್ನು ಮುಂದು ನೀವು ಖಾದಿಯನ್ನೇ ಧರಿಸಬೇಕು.

–ಹಿಂಗೋರಾಣಿ, ಪು. 234

ಹರಿಜನ ಕೆಲಸ

ನಾನು ಅನೇಕ ಸಲ ಹೇಳಿದ ಹಾಗೆ ಅ-ಸ್ಪೃಶ್ಯತೆಯೆಂದರೆ ಅನೇಕ ತಲೆಯನ್ನು ಧರಿಸಿ, ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುವ ರಾಕ್ಷಸವಾಗಿದೆ. ಅದರ ರೂಪಗಳಲ್ಲಿ ಹಲವು ಅತಿ ಸೂಕ್ಷ್ಮವಾಗಿದೆ. ಯಾರ ಬಗ್ಗೆಯಾದರೂ ನನಗೆ ಅಸೂಯೆಯಿದ್ದರೆ, ಅದೂ ಒಂದು ವಿಧದ ಅಸ್ಪೃಶ್ಯತೆಯೇ. ಅಸ್ಪೃಶ್ಯತೆಯು ನಿಜವಾಗಿ ಅಳಿದುಹೋದರೆ ಮಾನವ ವರ್ಗಕ್ಕೆ ವಿವರಿಸಲಾಗದಷ್ಟು ಲಾಭವಿದೆ.. ಹರಿಜನ ಕಾರ್ಯವು ಮಾನವೀಯವಾದ ಕೆಲಸವಾದದ್ದರ ಮೂಲಕ, ವಿದ್ಯಾರ್ಥಿಗಳು ತಮ್ಮ ಇಡೀ ವೇಳೆಯನ್ನಲ್ಲದಿದ್ದರೂ, ಕೆಲ ವೇಳೆಯನ್ನಾದರೂ ಹರಿಜನರ ಸೇವೆಗಾಗಿ ಮೀಸಲಿಡಬೇಕು. ಇಂಥ ಕೆಲವು ಕೂಲಿ ಕೆಲಸದಿಂದ ಆಗದು. ನಿಮ್ಮ ಇಂಗ್ಲೀಷ್ ಭಾಷಣಗಳ ಆಧಾರದ ಮೇಲಿಂದ ನಿಮ್ಮ ಯೋಗ್ಯತೆಯನ್ನು ಅಳೆಯದೇ ನೀವು ಮಾಡುವ ಬಡವರ ಸೇವೆಯ ಮೇಲಿಂದ ಅಳೆಯಲಾಗುವುದು. ಹರಿಜನರ ಕೆಲಸವು ಕಠಿಣವಾದರೂ ಆನಂದದಾಯಕವಾದ ಕೆಲಸ. ಅದು ನಿಮ್ಮ ಕ್ರಿಕೆಟ್ ಇಲ್ಲವೆ ಟೆನಿಸ್‌ಗಿಂತ ಹೆಚ್ಚಿನ ಆನಂದವನ್ನು ಕೊಡುತ್ತದೆ. ಬುದ್ಧಿವಂತರೂ, ನಿಷ್ಠಾವಂತರೂ, ಪ್ರಾಮಾಣಿಕರೂ ಆದ ಕಾರ್ಯಕರ್ತರಿದ್ದರೆ, ಹಣ ಬರುವುದೇನೂ ತೊಂದರೆಯಲ್ಲವೆಂದು ನಾನು ಅನೇಕ ಸಲ ಹೇಳಿದ್ದೇನೆ. ಹರಿಜನರ ಸೇವೆಗಾಗಿ ನಿಮ್ಮ ವಿರಾಮ ವೇಳೆಯ ನಿಶ್ಚಿತ ಅವಧಿಯನ್ನು ಮೀಸಲಾಗಿಡಬೇಕಾಗಿ ನಾನು ಕೇಳಿಕೊಳ್ಳಬಯಸುತ್ತೇನೆ.

– ಹಿಂಗೋರಾಣಿ, ಪು. 284–285

ಮರಳಿ ಹಳ್ಳಿಗೆ

ವಿದ್ಯಾರ್ಥಿಗಳು ಪಟ್ಟಣದ ಜೀವನವನ್ನು ತಮ್ಮ ಧ್ಯೇಯವನ್ನಾಗಿ ಮಾಡಿಕೊಳ್ಳದೆ, ಹಳ್ಳಿಯ ಜೀವನವನ್ನು ತಮ್ಮ ಧ್ಯೇಯವನ್ನಾಗಿ ಮಾಡಿಕೊಂಡರೆ, ಆಹಾರ ಸಮಸ್ಯೆಯ ಪ್ರಶ್ನೆಯೂ ಬಿಡುತ್ತದೆ. ನಮ್ಮದು ಕೃಷಿ ಪ್ರಧಾನವಾದ ನಾಗರಿಕತೆ. ನನ್ನ ಅಭಿಪ್ರಾಯದಲ್ಲಿ ನಮ್ಮ ದೇಶದ ವೈಶಾಲ್ಯ, ಸ್ಥಾನ, ಹವಾಗುಣ ಮತ್ತು ವಿಪುಲವಾದ ಜನಸಂಖ್ಯೆ, ಇವೆಲ್ಲವೂ ನಮ್ಮ ದೇಶವನ್ನು ಕೃಷಿ ಪ್ರಧಾನವಾದ ನಾಗರಿಕತೆಯ ದೇಶವನ್ನಾಗಿ ಮಾಡಿದೆ. ನಮ್ಮ ಜನಸಂಖ್ಯೆಯನ್ನು 30 ಕೋಟಿಯಿಂದ ಮೂರಕ್ಕೆ ಇಲ್ಲವಾದರೆ 30ಕ್ಕೆ ಯಾವುದಾದರೂ ಕ್ರಾಂತಿಕಾರಿ ಮಾರ್ಗದಿಂದ ನಾವು ಇಳಿಸದ ಹೊರತು, ಈ ನಾಗರಿಕತೆಯನ್ನು ಕಿತ್ತೊಗೆದು, ಪಟ್ಟಣದ ನಾಗರಿಕತೆಯನ್ನು ತರುವುದು

ದುಸ್ಸಾಧ್ಯವಾಗಿದೆ. ಈ ನಾಗರಿಕತೆಯು ಸುಧಾರಿಸಬೇಕಾದರೆ, ನಮ್ಮ ಯುವಕರು ಹಳ್ಳಿಗಳಲ್ಲಿ ವಾಸಿಸಬೇಕು. ತಮ್ಮ ಶಾಲೆ ಕಾಲೇಜುಗಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ರಜೆಯ ಎಲ್ಲ ದಿವಸಗಳನ್ನು ಕಳಿಯಬೇಡಿ. ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಜನವೆಲ್ಲ ಹಳ್ಳಿಗಳಲ್ಲಿಯೇ ವಾಸಿಸಬೇಕು. ಅಖಿಲ ಭಾರತೀಯ ಚರಖಾ ಸಂಘದಲ್ಲಿ ಕೆಲಸ ಮಾಡಬೇಕು. ಪ್ರಾಧ್ಯಾಪಕರಾದರೂ ರಜೆಯ ದಿವಸಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮೇಲೆ ಅಭ್ಯಾಸದ ಭಾರವನ್ನು ಹಾಕದೆ, ಅವರು ಹಳ್ಳಿಗಳಲ್ಲಿ ಶೈಕ್ಷಣಿಕ ಪ್ರವಾಸಗಳನ್ನು ಕೈಕೊಳ್ಳುವಂತೆ ಸೂಚಿಸಿದರು. ವಿದ್ಯಾರ್ಥಿಗಳು ಕಂಠಮಾಡುವುದರಲ್ಲಿ ರಜೆಯನ್ನು ಕಳೆಯದೆ, ವಿರಾಮಕ್ಕಾಗಿ ಉಪಯೋಗಿಸಬೇಕು.

– ಹಿಂಗೋರಾಣಿ, ಪು. 297–198

ಎಲ್ಲ ಕಾಲೇಜ್ ವಿದ್ಯಾರ್ಥಿಗಳು ತಾವು ಅಭ್ಯಾಸ ಮಾಡುತ್ತಿರುವಾಗಲೇ ಹಳ್ಳಿಗಳ ಕೆಲಸವನ್ನು ಪ್ರಾರಂಭಿಸಬೇಕು. ಹೀಗೆ, ಅರ್ಧ ಸಮಯ ಕೆಲಸ ಮಾಡುವವರಿಗಾಗಿ ಈ ಕಾರ್ಯಕ್ರಮವಿದೆ.

ವಿದ್ಯಾರ್ಥಿಗಳು ತಮ್ಮ ಇಡೀ ರಜೆಯನ್ನು ಹಳ್ಳಿಗಳ ಸೇವೆಗಾಗಿ ಮೀಸಲಾಗಿಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳು ತಾವು ನಿತ್ಯವೂ ಹೋಗುವ ದಾರಿಯಲ್ಲಿ ಮಾತ್ರ ಅಡ್ಡಾಡಲಿಕ್ಕೆ ಹೋಗದೆ, ತಮ್ಮ ತಮ್ಮ ಸಂಸ್ಥೆಗಳ ಹತ್ತಿರವಿರುವ ಹಳ್ಳಿಗಳಿಗೆ ಹೋಗಿ, ಅಲ್ಲಿನ ಪರಿಸ್ಥಿತಿಯನ್ನು ಅಭ್ಯಸಿಸಿ, ಹಳ್ಳಿಗರ ಸ್ನೇಹವನ್ನು ಸಂಪಾದಿಸಬೇಕು. ಈ ಅಭ್ಯಾಸದಿಂದ ವಿದ್ಯಾರ್ಥಿಗಳು ಹಳ್ಳಿಗರ ಸಂಪರ್ಕದಲ್ಲಿ ಬರುತ್ತಿದ್ದು, ಅವರು ಅನಂತರ ಹಳ್ಳಿಗಳಲ್ಲಿ ಶಾಶ್ವತವಾಗಿ ನೆಲೆಸಲು ಹೋದಾಗ, ಹಳ್ಳಿಗರು ಅವರನ್ನು ಅಪರಿಚಿತರೆಂದು ಸಂಶಯದಿಂದ ಕಾಣದೆ, ಈ ಮೊದಲಿನ ಸಂಪರ್ಕದ ಮೂಲಕ ಗೆಳೆಯರೆಂದೇ ಸ್ವಾಗತಿಸುವರು. ದೊಡ್ಡ ರಜೆಗಳಲ್ಲಿ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ವಯಸ್ಕರಿಗಾಗಿ ಶಿಕ್ಷಣ ವರ್ಗಗಳನ್ನು ಪ್ರಾರಂಭಿಸಬೇಕು. ಹಳ್ಳಿಗರಿಗೆ ಆರೋಗ್ಯದ ನಿಯಮಗಳನ್ನು ಕಲಿಸಿಕೊಡಬೇಕು. ಅವರಿಗೆ ಚರಕದ ಪರಿಚಯ ಮಾಡಿಕೊಟ್ಟು, ವಿರಾಮದ ಪ್ರತಿ ಕ್ಷಣವನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿಸಿ ಕೊಡಬೇಕು. ಇದೆಲ್ಲ ಆಗಬೇಕಾದರೆ, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ರಜೆಯ ಬಗ್ಗೆ ಈವರೆಗೆ ತಮಗಿರುವ ವಿಚಾರಗಳನ್ನು ಬದಲಿಸಬೇಕು. ಅನೇಕ ಸಲ, ವಿಚಾರಹೀನರಾದ ಶಿಕ್ಷಕರು ರಜೆಯ ದಿನಗಳಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಪಾಠಗಳನ್ನು ಸಿದ್ಧಮಾಡಬೇಕಾಗಿ ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ, ಇದು ಅನಿಷ್ಟವಾದ ಪದ್ಧತಿ. ರಜೆಯ ದಿನಗಳು, ವಿದ್ಯಾರ್ಥಿಗಳ ಮನಸ್ಸು, ನಿತ್ಯದ ಪಾಠ ಕ್ರಮದಿಂದ ದೂರವಾಗಿದ್ದು, ಸ್ವಾವಲಂಬನ ಮತ್ತು ಸ್ವಂತ

ವಿಚಾರಗಳನ್ನು ಬೆಳೆಸಿಕೊಳ್ಳುವ ಕಾಲ. ಈವರೆಗೆ ನಾನು ವಿವರಿಸಿದ ಹಳ್ಳಿಗರ ಕಾರ್ಯವು ಮನರಂಜನೆ ಮತ್ತು ಸಹಜ ಶಿಕ್ಷಣದ ಒಳ್ಳೆಯ ಮಾರ್ಗವಾಗಿದೆ. ನೀವು ಸಂಪೂರ್ಣವಾಗಿ ಹಳ್ಳಿಗಳ ಕೆಲಸವನ್ನು ಮಾಡಬೇಕಾದಾಗ, ಆರ್ಥಿಕ, ಸಾಮಾಜಿಕ, ರಾಜಕೀಯ, ಮತ್ತು ಆರೋಗ್ಯ ವಿಷಯಕ ಈ ರೀತಿಯಾಗಿ ಸಮಗ್ರ ಗ್ರಾಮ ಜೀವನವನ್ನು ಒಳಗೊಳ್ಳಬೇಕಾಗುತ್ತದೆ. ಆರ್ಥಿಕ ಸಮಸ್ಯೆಯ ತೀವ್ರತಮವಾದ ನಿವಾರಣೆಯೆಂದರೆ ಚರಖಾ. ಅದು ಹಳ್ಳಿಗರ ಆದಾಯವನ್ನು ಹೆಚ್ಚಿಸುವುದಲ್ಲದೆ, ಅವರನ್ನು ಕುಚೋದ್ಯದಿಂದ ದೂರಿಡುವುದು. ಆರೋಗ್ಯ ವಿಷಯಕವೆಂದರೆ, ರೋಗ ರುಜಿನಗಳು, ಅನಾರೋಗ್ಯಕರ ವಾತಾವರಣ ಇವುಗಳ ನಿವಾರಣೆಗೆ ಸಂಬಂಧಪಟ್ಟಿದೆ. ಇಂಥದರಲ್ಲಿ ವಿದ್ಯಾರ್ಥಿಯು ಸ್ವತಃ ತನ್ನ ಕೈಯಿಂದ ದುಡಿದು, ಮಲಮೂತ್ರ ಮತ್ತು ಇತರ ಕೊಳಚೆಯನ್ನು ಹುಗಿದು ಗೊಬ್ಬರವನ್ನಾಗಿ ತಯಾರಿಸಲು ಕುಣಿಗಳನ್ನು ಅಗಿಯಬೇಕು; ಬಾವಿ–ಕೆರೆಗಳನ್ನು ಸ್ವಚ್ಛಗೊಳಿಸಬೇಕು. ಸರಳವಾದ ಒಡ್ಡುಗಳನ್ನು ಕಟ್ಟಬೇಕು; ಕಸ–ಕಡ್ಡಿಗಳನ್ನು ತೆಗೆದು ಚೆಲ್ಲಬೇಕು. ಒಟ್ಟಾರೆ, ಹಳ್ಳಿಗಳಲ್ಲಿಯ ಕಾರ್ಯಕರ್ತನು ಸಾಮಾಜಿಕ ಜೀವನದ ಬಗ್ಗೆಯೂ ಯತ್ನಿಸಬೇಕು. ಹಳ್ಳಿಗರು ತಮ್ಮಲ್ಲಿರುವ ಅಸ್ಪೃಶ್ಯತೆ, ಬಾಲ್ಯವಿವಾಹ, ವಿಷಮ ವಿವಾಹ, ಕುಡುಕತನ, ಅಫೀಮು ಚಟ ಮತ್ತು ಅನೇಕ ಇತರ ಸ್ಥಾನಿಕ ಮೂಢ ನಂಬುಗೆಗಳನ್ನು ಬಿಡುವಂತೆ ಅವನು ನಿಧಾನವಾಗಿ ಪ್ರಯತ್ನಿಸಬೇಕು.ಕೊನೆಗೆ ಬರುವುದು ರಾಜಕೀಯ ಜೀವನ. ಇಲ್ಲಿ ಕಾರ್ಯಕರ್ತನು ಹಳ್ಳಿಗರು ರಾಜಕೀಯ ತೊಂದರೆಗಳು ಏನಿವೆಯೆಂಬುದನ್ನು ಅಭ್ಯಸಿಸಿ, ಅವರಿಗೆ ಸ್ವಾತಂತ್ರ್ಯದ ಗೌರವ, ಸ್ವಾವಲಂಬನ, ಸ್ವಯಂಸೇವೆ ಇವುಗಳನ್ನು ಕಲಿಸಬೇಕು. ನನ್ನ ಪ್ರಕಾರ ಇದು ಸಂಪೂರ್ಣವಾದ ವಯಸ್ಕರ ಶಿಕ್ಷಣ. ಆದರೆ, ಇದರಿಂದ ಹಳ್ಳಿಯ ಕಾರ್ಯಕರ್ತನ ಕೆಲಸ ಮುಗಿದಂತಾಗಲಿಲ್ಲ. ಅವನು ಹಳ್ಳಿಯ ಚಿಕ್ಕಮಕ್ಕಳನ್ನು ತನ್ನ ರಕ್ಷಣೆಯಲ್ಲಿ ತೆಗೆದುಕೊಂಡು, ಅವರಿಗೆ ವಿದ್ಯೆ ಕಲಿಸಿ, ವಯಸ್ಕರಿಗಾಗಿ ರಾತ್ರಿ ಶಾಲೆಗಳನ್ನು ಪ್ರಾರಂಭಿಸಬೇಕು. ಇಂಥ ಸಾಹಿತ್ಯದ ಶಿಕ್ಷಣವು ಇಡೀ ಶಿಕ್ಷಣದ ಒಂದು ಅಂಗವಾಗಿದ್ದು, ಈ ಮೊದಲೇ ವಿವರಿಸಿದ ಉದ್ದೇಶದ ಸಾಧನೆಯಾಗಿದೆ.

ಈ ಎಲ್ಲ ಸೇವೆಗಾಗಿ ವಿಶಾಲ ಹೃದಯ ಮತ್ತು ಸಂಶಯಾತೀತವಾದ ಚಾರಿತ್ರ್ಯ ಬೇಕೆಂದು ನಾನು ಹೇಳಬೇಕು. ಇವೆರಡು ಇದ್ದರೆ, ಉಳಿದೆಲ್ಲ ಗುಣಗಳು ತಾವೇ ತಾವಾಗಿ ಬರುತ್ತವೆ. ನಮ್ಮ ಹಳ್ಳಿಗಳ ಸೇವೆ ಮಾಡುವುದೆಂದರೆ ಸ್ವರಾಜ್ಯವನ್ನು ಪ್ರಸ್ಥಾಪಿಸಿದಂತೆ ಇದನ್ನು ಬಿಟ್ಟು ಉಳಿದದ್ದೆಲ್ಲ ಬರೀ ಹುಚ್ಚು ಕನಸು.

–ಹಿಂಗೋರಾಣಿ, ಪು. 300–301

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ ಪ್ರಯಾಣಿಕರ ಶೋಷಣೆಯ ವಿರುದ್ಧ ಸತ್ಯಾಗ್ರಹ ಮಾಡುವ ಬೆದರಿಕೆ	1905

ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ ಮೇಲೆ ಪ್ರಯೋಗಿಸಲಾಗುವ "ಏಷಿಯಾಟಿಕ್ ಆರ್ಡಿನೆನ್ಸ್ ವಿರುದ್ಧ ಚಳುವಳಿ	1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ ನೋಂದಾವಣೆ (ಕರಾಳ ಕಾನೂನು) ವಿರುದ್ಧ ಸತ್ಯಾಗ್ರಹ	1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ	1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ ಹೋರಾಟ ಪರಿಶೀಲನೆ	1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್ ಫಾರ್ಮ್ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ	1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ ಆಶ್ರಮ ಸ್ಥಾಪನೆ	1915
ಸಬರಮತಿ ಆಶ್ರಮ ಸ್ಥಾಪನೆ	1917
ಫೆಬ್ರವರಿ ಅಹಮದಾಬಾದ್ ಮಿಲ್ ಕೂಲಿಗಾರರ ಪರ ಹೋರಾಟ, ಮೂರು ದಿನ ಉಪವಾಸ ಸತ್ಯಾಗ್ರಹ, ಭರತದಲ್ಲಿ ಇದೇ ಮೊದಲ ಉಪವಾಸ	
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ ವಿರೋಧಿಸಿ ಏಪ್ರಿಲ್ 13-14ರಂದು ಉಪವಾಸ	1919
ಯಂಗ್ ಇಂಡಿಯಾ ಮತ್ತು ನವಜೀವನ ಪತ್ರಿಕೆಗಳ ಆರಂಭ	1919

ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ	
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ	1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು	
ಖಾದಿ ಪ್ರಚಾರ ಆರಂಭ	1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ	
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ	
ಉಪವಾಸ, ಯಂಗ್ ಇಂಡಿಯಾ	
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ	
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ	1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ	1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ	1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ	1924
ಚರಖಾ ಸಂಘದ ಸ್ಥಾಪನೆ	1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ	1928
ಮೂರನೇ ಅಖಿಲ ಭಾರತ ಸತ್ಯಾಗ್ರಹ	
ಜನವರಿ 26 ರಾಷ್ಟ್ರದಿನವೆಂದು ಸೂಚನೆ	
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು	
ದುಂಡು ಮೇಜಿನ ಪರಿಷತ್ತು ವಿಫಲ	1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು	
ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು	
ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937

"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಸಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30–1–1948
ರಾಜ್‌ಘಾಟದಲ್ಲಿ ದಹನ	31–1–1948

ಕಸ್ತೂರ್‌ಬಾ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	11.04.1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚರ್ಬಾದಲ್ಲಿ ಆಶ್ರಮ ಸ್ಥಾಪನೆ	25.05.1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಾಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರೆ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕರೆ	23.03.1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಕಸ್ತೂರ್‌ಬಾಗೆ ಹಣ ನೀಡಿಕೆ	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಾಬರಮತಿ ಆಶ್ರಮ ಮುತ್ತಿಗೆ	1933
ಗಾಂಧಿಯವರೊಡನೆ ಪೂನಾದ ಮುನಿಸಿಪಲ್ ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ	

ನಾಡಬಾಂಬ್ ಏಸೆತ	1934
ಸೇವಾಗ್ರಾಮ ಆಶ್ರಮ ಸ್ಥಾಪನೆ	1936
ರಾಜ್‌ಕೋಟ್‌ನಲ್ಲಿ ಠಾಕೂರ ದಬ್ಬಾಳಿಕೆ ವಿರುದ್ಧ|	
ಮಹಿಳಾ ಹೋರಾಟಗಾರರಿಗೆ ನೆರವು	1939
ಬಂಧನ, ಕತ್ತಲ ಜೈಲಿನಲ್ಲಿ ಸೆರೆಮನೆವಾಸ	03.02.1939
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ	
ಗಾಂಧೀಜಿ ಅವರ ಲೇಖನ ಪ್ರಕಟ	06.02.1939
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ	
ಅವರೊಡನೆ ಮುಂಬೈಗೆ ಪಯಣ	1942
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ	
ಸಮಾವೇಶದಲ್ಲಿ ಮಾಡಿದ ಭಾಷಣಕ್ಕೆ ಬಂಧನ	09.08.1942
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	1944
ಸೆರೆಮನೆಯಲ್ಲಿ ತಮ್ಮ 74ನೇ ವಯಸ್ಸಿನಲ್ಲಿ ನಿಧನ	22.02.1944

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧೀ ಮತ್ತು ಕರ್ನಾಟಕ	200–00
28.	ಸತ್ಯ	38–00

29.	ವಿದ್ಯಾರ್ಥಿಗಳಿಗಾಗಿ	30–00
30.	ಸರ್ವೋದಯ	30–00
31.	ಖಾದಿ ಗ್ರಾಮೋದ್ಯೋಗ	58–00
32.	ನನ್ನ ಬಾಲ್ಯದ ನೆನಪುಗಳು	52–00
33.	ಗ್ರಾಮರಾಜ್ಯ ಆಡಳಿತ	5–00
34.	ನನ್ನ ಕನಸಿನ ಸ್ವರಾಜ್ಯ	42–00
35.	ಹಾಸ್ಯ ಮತ್ತು ಗಾಂಧೀ	44–00
36.	ನನ್ನ ಆದರ್ಶಗ್ರಾಮ	5–00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
38.	ಸತ್ಯಾಗ್ರಹಿ	40–00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
42.	ಸತ್ಯಾಗ್ರಹ	5–00
43.	ಹಿಂದ್ ಸ್ವರಾಜ್	5–00
44.	ಆರೋಗ್ಯ	5–00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
46.	ಬಹುರೂಪಿ ಗಾಂಧಿ	35–00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
48.	ಕೃತಯುಗಿ ವಿನೋಬಾ ಭಾವೆ	15–00
49.	ಮೋಹನ ತರಂಗ	40–00
50.	ನಮ್ಮ ಗಾಂಧಿ ತಾತ	22–00
51.	ಗೀತಾ ಪ್ರವಚನ	80–00
52.	ಜೆ.ಪಿ. ಜೀವನ ಹಾದಿ	45–00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00
55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00

59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ	94.00
72.	ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳುವಳಿ	92.00
73.	ಆಧ್ಯಾತ್ಮಿಕ ಸುಸ್ಥಿರತೆ	72.00
74.	ಕವನಗಳಲ್ಲಿ ಮೂಡಿದ ಗಾಂಧಿ	190.00
75.	ಪಂಚಾಯತ್ ರಾಜ್ಯ	74.00
76.	ನಾನಾನೆಂಬುದು ನಾನಲ್ಲ	72.00
77.	ಗಾಂಧೀಜಿ ಮತ್ತು ಹಿಂದೂ-ಮುಸ್ಲಿಂರ ಸೌಹಾರ್ದತೆ ಡಾ. ಷಾಕಿರ ಖಾನಂ	90.00
78.	ಮಕ್ಕಳ ಕಸ್ತೂರ್‌ಬಾ : ಪ್ರೊ. ಲೀಲಾ ವಾಸುದೇವ್	55.00
79.	**Nayi Talim**	58.00
80.	**Temple & Mosque**	10–00
81.	**Rastrapita Mahatma Gandhi**	25–00
82.	**Swarajya of My Dreams**	5–00
83.	**Gandhi My Grand Father**	5–00
84.	**Grand Pa Gandhi**	5–00
85.	**Relevance of Gandhi**	20–00
86.	**Vinoba Sage of the Age**	20.00
87.	**Kasturba**	33.00
88.	**Mahatma Gandhi and his Foreign Associates**	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

- ಬೆಂಗಳೂರು — ದಿ. 08–05–1915
- ಬೆಳಗಾವಿ — ದಿ. 27–04–1916 ರಿಂದ
ದಿ. 01–05–1916 ರವರೆಗೆ
- ಬಿಜಾಪುರ (ವಿಜಯಪುರ) — ದಿ. 05–05–1918 ರಿಂದ
ದಿ. 06–05–1918 ರವರೆಗೆ
- ಕಾಸರಗೋಡು — ದಿ. 19–08–1920
- ಮಂಗಳೂರು — ದಿ. 20–08–1920
- ಬೆಂಗಳೂರು — ದಿ. 21–08–1920
- ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ,
ಸಂಕೇಶ್ವರ, ಬೆಳಗಾವಿ — ದಿ. 08–11–1920
- ಬೆಳಗಾವಿ ಶಹಾಪುರ — ದಿ. 09–11–1920
ಖಾನಾಪುರ, ನಂದಗಢ, ಹಳ್ಯಾಳ
- ಧಾರವಾಡ — ದಿ. 10–11–1920
- ಹುಬ್ಬಳ್ಳಿ, ಗದಗ — ದಿ. 11–11–1920
- ಸಾಂಗಲಿ — ದಿ. 12–11–1920
- ಬಾಗಲಕೋಟೆ — ದಿ. 27–05–1921
- ಬಿಜಾಪುರ (ವಿಜಯಪುರ), ಸೊಲ್ಲಾಪುರ — ದಿ. 28–05–1921
- ಬಳ್ಳಾರಿ — ದಿ. 30–09–1921
- ಬೆಳಗಾವಿ — ದಿ. 21–12–1924 ರಿಂದ
ದಿ. 30–12–1924 ರವರೆಗೆ
- ಗುಲ್ಬರ್ಗಾ — ದಿ. 22–02–1927 ರಿಂದ
ದಿ. 23–02–1927 ರವರೆಗೆ

• ನಿಪ್ಪಾಣಿ	ದಿ. 27-03-1927 ರಿಂದ ದಿ. 31-03-1927 ರವರೆಗೆ
• ಬೆಳಗಾವಿ	ದಿ. 01-04-1927 ರಿಂದ ದಿ. 19-04-1927ರವರೆಗೆ
• ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
• ತುಮಕೂರು	ದಿ. 14-07-1927
• ತುಮಕೂರು, ಮಧುಗಿರಿ	ದಿ. 15-07-1927
• ತುಮಕೂರು	ದಿ. 16-07-1927
• ಬೆಂಗಳೂರು	ದಿ. 17-07-1927
• ಬೆಂಗಳೂರು	ದಿ. 18-07-1927
• ಮೈಸೂರು	ದಿ. 19-07-1927 ರಿಂದ ದಿ. 21-07-1927 ರವರೆಗೆ
• ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
• ಮೈಸೂರು	ದಿ. 23-07-1927
• ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
• ಕ್ಲೋಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
• ಬೆಂಗಳೂರು	ದಿ. 01-08-1927
• ಅರಸೀಕರೆ, ಹಾಸನ	ದಿ. 02-08-1927
• ಹಾಸನ	ದಿ. 03-08-1927
• ಹಾಸನ, ಹೊಳೆನರಸೀಪುರ	ದಿ. 04-08-1927
• ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ

• ದಾವಣಗೆರೆ	ದಿ. 12–08–1927
• ಹರಿಹರ, ಹೊನ್ನಾಳಿ, ಮಲೆಬೆನ್ನೂರು	ದಿ. 13–08–1927
• ಶಿವಮೊಗ್ಗ	ದಿ. 14–08–1927 ರಿಂದ ದಿ. 15–08–1927 ರವರೆಗೆ
• ಆಯ್ಯನೂರು, ಕುಂಸಿ, ಸಾಗರ, ಶಿವಮೊಗ್ಗ	ದಿ. 16–08–1927
• ಶಿವಮೊಗ್ಗ, ತೀರ್ಥಹಳ್ಳಿ, ಮಂದಗದ್ದೆ, ರಾಜನೂರು	ದಿ. 17–08–1927
• ಭದ್ರಾವತಿ, ತರೀಕೆರೆ, ಬೀರೂರು, ಕಡೂರು	ದಿ. 18–08–1927
• ಚಿಕ್ಕಮಗಳೂರು	ದಿ. 19–08–1927
• ಬೇಲೂರು, ಹಳೇಬೀಡು, ಅರಸೀಕೆರೆ	ದಿ. 20–08–1927
• ತಿಪಟೂರು	ದಿ. 21–08–1927
• ಬೆಂಗಳೂರು	ದಿ. 22–08–1927
• ಬೆಂಗಳೂರು	ದಿ. 23–08–1927
• ಹೊಸೂರು, ಸೂಳಗಿರಿ, ಕೃಷ್ಣಗಿರಿ	ದಿ. 24–08–1927
• ಬೆಂಗಳೂರು	ದಿ. 25–08–1927 ರಿಂದ ದಿ. 30–08–1927 ರವರೆಗೆ
• ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು, ದೊಡ್ಡಬಳ್ಳಾಪುರ, ತುಮಕೂರು, ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04–01–1934
• ತಗಡೂರು, ಬದನವಾಳ, ನಂಜನಗೂಡು ಮೈಸೂರು	ದಿ. 05–01–1934
• ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 0೬–01–1934
• ಬೆಂಗಳೂರು	ದಿ. 07–01–1934 ರಿಂದ ದಿ. 09–01–1934 ರವರೆಗೆ

- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
  ಸೋಮವಾರ ಪೇಟೆ, ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ, ಪುತ್ತೂರು, ದಿ. 24-02-1934
  ಉಪ್ಪಿನಂಗಡಿ, ವಿಠಲಗಬ್ಬ, ಕಲ್ಲಡ್ಕ, ಪಾಣೆ
  ಮಂಗಳೂರು, ಬಂಟ್ವಾಳ, ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ, ಯಕ್ಕೂರು, ದಿ. 25-02-1934
  ಕಟೀಲು, ಕಿನ್ನಗೋಳಿ, ಮೂಲ್ಕಿ, ಪಡುಬಿದ್ರಿ,
  ಕಟಪಾಡಿ, ಗುರುಪುರ, ಉದ್ಯಾವರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934
- ಕುಂದಾಪುರ, ಭಟ್ಕಳ, ಹೊನ್ನಾವರ,
  ಕಾರವಾರ ದಿ. 27-02-1934
- ಕಾರವಾರ, ಕುಮುಟಾ, ಅಂಕೋಲ ದಿ. 28-02-1934
  ಚಂದಿಯಾ, ಶಿರಸಿ
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ದಿ. 01-03-1934
  ಇಸಲೂರು, ಏಕಾಂಬಿ, ಆಲೂರು
  ಬ್ಯಾಡಗಿ, ಮೋಟೆಬೆನ್ನೂರು
- ಹಾವೇರಿ, ರಾಣೆಬೆನ್ನೂರು, ಹರಿಹರ ದಿ. 02-03-1934
  ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು
  ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು
- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ದಿ. 04-03-1934
  ಹಿರೇಉಳ್ಳಗೇರಿ, ಬೈಲಹೊಂಗಲ
  ಉಪ್ಪಿನ, ಬೆಟಗೇರಿ, ಸೌಂದತ್ತಿ
  ಸಂಪಗಾಂವ್, ಹೊಸೂರು, ಬೆಳಗಾವಿ

● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ	ದಿ. 07-03-1934
● ಶೆಡಬಾಳ, ಬನಹಟ್ಟಿ, ಅಥಣಿ, ಬಿಜಾಪುರ , ತಿಕೋಟ, ತೊರವಿ ಇಳಕಲ್	ದಿ. 08-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರ ಪೇಟೆ, ಕೆ. ಜಿ. ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1937 ರಿಂದ 21-04-1937 ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು; ನಡೆದಲ್ಲಿ ಪವಿತ್ರ ಭೂಮಿಯಾಯಿತು-ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿ ಅವರ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವನ್ನು ತೋರಿದ ದಾರಿಯನ್ನು, ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ರಾ. ಶ್ರೀ ಹುಕ್ಕೇರಿಕರ

ಗಾಂಧೀತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ. ಗಾಂಧೀಜಿ ಅವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ.

ಡಾ॥ ಹೊ. ಶ್ರೀನಿವಾಸಯ್ಯ

ಗಾಂಧಿ ಅವರು ಭಾರತದ ಭವಿಷ್ಯದ ಪ್ರಜೆಗಳಾಗುವ ವಿದ್ಯಾರ್ಥಿಗಳ ಬಗ್ಗೆ ಅತೀವ ಕಾಳಜಿ ಹೊಂದಿದ್ದರು. ಆದ್ದರಿಂದಲೇ ಶಿಕ್ಷಣ, ಚಾರಿತ್ರ್ಯ ನಿರ್ಮಾಣ, ವಿದ್ಯಾರ್ಥಿಗಳು, ಅಧ್ಯಾಪಕರು ಮಾದಕ ವ್ಯಸನಗಳಿಗೆ ವಶರಾಗದೆ, ಪವಿತ್ರ ಜೀವನವನ್ನು ಉಳಿಸಿಕೊಳ್ಳಿರಿ ಎಂದಿದ್ದಾರೆ.

ನಾಡೋಜ ಡಾ. ವೂಡೇ ಪಿ. ಕೃಷ್ಣ

ಗಾಂಧಿ ಅವರೇ ಪತ್ರಕರ್ತರಾಗಿ ನಡೆಸುತ್ತಿದ್ದ, ಹರಿಜನ, ಯಂಗ್ ಇಂಡಿಯಾ ಪತ್ರಿಕೆ ಮತ್ತು ಅಂದು ಪ್ರಚಲಿತವಿದ್ದ ಇತರೆ ಪತ್ರಿಕೆಗಳಲ್ಲಿ ನಾಡಿನ ವಿದ್ಯಾರ್ಥಿ ಸಮೂಹವನ್ನು ಕುರಿತು ಶಿಕ್ಷಣ ಪದ್ಧತಿ ಕುರಿತು ಅವರ ಆಶಯಗಳು ಏನಾಗಿತ್ತೆಂಬುದು ಇಲ್ಲಿನ ಲೇಖನಗಳಿಂದ ತಿಳಿದು ಬರುತ್ತದೆ. ವಿದ್ಯಾರ್ಥಿ ಜೀವನ, ನಂತರದ ಬದುಕು, ಉದ್ಯೋಗ-ನಿರುದ್ಯೋಗ, ವಿವಾಹ, ಬ್ರಮ್ಹಚರ್ಯ, ಸಂತಾನ, ವರದಕ್ಷಿಣೆ, ಜಾತ್ಯಾತೀತತೆ, ಇಂಡಿಗೋ ಚಳುವಳಿ, ರಾಷ್ಟ್ರಭಕ್ತಿ, ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸುವಿಕೆ ಇನ್ನೂ ಮುಂತಾದ ವಿಷಯಗಳ ಕುರಿತಾಗಿ, ಗಾಂಧಿ ಅವರ ಆಶಯಗಳು, ಸಿದ್ಧಾಂತಗಳು ಏಕಾಗಿತ್ತೆಂಬುದನ್ನು ಈ ಕೃತಿ ವಿವರಿಸುತ್ತದೆ.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ISBN NO : 978-81-942226-7-5